ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮಾರ್ಚ್ 8 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 317 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹೈಕಮಾಂಡ್... ಹೈಕಮಾಂಡ್... ಹೈಕಮಾಂಡ್... ಹೈಕಮಾಂಡ್... ಹೈಕಮಾಂಡ್... ಹೇಳಿದರೆ

ಅಧಿಕಾರ ಬಿಡ್ತೇನೆ...!

- ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೊಮ್ಮೆ ಬದ್ಧ ಮಾತು
- ಇದರ ಹೊರತು ಯಾರು ಏನೇ ಹೇಳಿದರೂ ಮುಖ್ಯವಲ್ಲ
- ಹಿಂದೆ, ಮುಂದೆ ಮಾಡಿ ಕೇಳಿದರೂ ನನ್ನ ಉತ್ತರ ಇಷ್ಟೆ!

ಮೈಸೂರು, ಮಾ.7(ಬಿಎಲ್‌ಯು)– ಹೈಕಮಾಂಡ್ ಹೇಳಿದರೆ ಅಧಿಕಾರ ಬಿಡಲು ಸಿದ್ಧನಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ವರುಣ ಕ್ಷೇತ್ರದ ಪಿಲ್ಲಹಳ್ಳಿ ಗ್ರಾಮದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಧಿಕಾರದಲ್ಲಿ ಮುಂದುವರೆಯುವಂತೆ ಹೈಕಮಾಂಡ್ ಸೂಚನೆ ನೀಡಿದರೆ ಮುಂದುವರೆಯುತ್ತೇನೆ, ಇಲ್ಲವೆಂದರೆ ಅಧಿಕಾರ ಬಿಡುತ್ತೇನೆ ಎಂದು ಹೇಳಿದರು.

ಅವರ ಈ ಮಾತುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಬಜೆಟ್ ಮಂಡನೆ ನಂತರ ಅಧಿಕಾರ ತ್ಯಜಿಸಲು ಮಾನಸಿಕವಾಗಿ ಸಿದ್ಧರಾದಂತಿದೆ. ಈ ಮೂಲಕ ಇದೇ ಮೊದಲ ಬಾರಿಗೆ ಸಿದ್ದರಾಮಯ್ಯ ಅಧಿಕಾರ ತ್ಯಜಿಸುವ ಮಾತುಗಳನ್ನಾಡಿದ್ದಾರೆ.

ನನ್ನನ್ನು ಇನ್ನೂ ಮುಖ್ಯಮಂತ್ರಿಯಾಗಿ ಮುಂದುವರೆಸುವುದು, ಬಿಡುವುದು ಹೈಕಮಾಂಡ್ ವಿವೇಚನೆಗೆ ಬಿಟ್ಟ ವಿಚಾರ. ಅಧಿಕಾರ ಹಸ್ತಾಂತರ ಸಂಬಂಧ ಯಾರೋ ಏನೋ ಹೇಳಿದರು ಎಂಬುದು ನನಗೆ ಮುಖ್ಯವಲ್ಲ. ನನಗೆ ಹೈಕಮಾಂಡ್ ತೀರ್ಮಾನವಷ್ಟೆ ಮುಖ್ಯ. ಹೈಕಮಾಂಡ್ ತೀರ್ಮಾನದ ಬಗ್ಗೆ ನನಗೆ ವಿಶ್ವಾಸವಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಆದರೆ ನಾನು ಮುಖ್ಯಮಂತ್ರಿಯಾಗಿ ಪೂರ್ಣಾವಧಿವರೆಗೆ ಇರಬೇಕೆಂದು ಮೈಸೂರು ಜನರು ಮಾತ್ರವಲ್ಲದೆ, ರಾಜ್ಯದ ಜನರು ಬಯಸಿದ್ದಾರೆ. ಆದರೆ ಈ ವಿಚಾರದಲ್ಲೂ ಹೈಕಮಾಂಡ್ ▶ 9ನೇ ಪುಟಕ್ಕೆ

ರಾಜ್ಯದ ಅಭಿವೃದ್ಧಿಗಾಗಿ ಸಾಲ ಮಾಡಿದ್ದೇನೆ...

ಮೈಸೂರು: ರಾಜ್ಯದ ಅಭಿವೃದ್ಧಿಗಾಗಿ ನಾನು ಸಾಲ ಮಾಡಿದ್ದು, ಸಾಲದ ಪ್ರಮಾಣ ಹೆಚ್ಚಳವಾಗಿದೆ ಎಂಬುದು ಸತ್ಯಕ್ಕೆ ದೂರವಾದ ಮಾತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಸಾಲ ಮಾಡದೆ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಆರ್ಥಿಕ ಹೊಣೆಗಾರಿಕೆಗೆ ಕಾಯ್ದೆ ತಿಳಿಸಿರುವ ಮಾನದಂಡಗಳ ಮಿತಿಯಲ್ಲಿ ಸಾಲದ ಪ್ರಮಾಣ ಇದೆ. ಈ ಕಾಯ್ದೆಯಂತೆ ಸಾಲವು ಶೇಕಡ 25 ರಷ್ಟಿರಬೇಕಿದೆ. ಆದರೆ ನಮ್ಮ ಸರ್ಕಾರದ ಸಾಲದ ಪ್ರಮಾಣ ಶೇ.24.94ರಷ್ಟಿದೆ ▶ 9ನೇ ಪುಟಕ್ಕೆ



ಪಿಲ್ಲಹಳ್ಳಿಯಲ್ಲಿ ಆಯೋಜಿಸಿದ್ದ ಶ್ರೀ ಆದಿಶಕ್ತಾತ್ಮಕ ದಂಡಿಮಾರಮ್ಮ ದೇವಾಲಯದ ಪ್ರತಿಷ್ಠಾಪನಾ ಮಹೋತ್ಸವ, ಕುಂಭಮೇಳದ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಮಾತನಾಡಿದರು.

ದೇವರು ದೇವಸ್ಥಾನದಲ್ಲಿ ಮಾತ್ರವಲ್ಲ; ಎಲ್ಲೆಲ್ಲೂ ಇದ್ದಾನೆ...!

ಮೈಸೂರು: ದೇವರ ಆರಾಧನೆಯಿಂದ ಒಳಿತಾಗುತ್ತದೆ ಎಂಬ ನಂಬಿಕೆಯನ್ನು ನಾನು ವಿರೋಧಿಸುವುದಿಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಪಿಲ್ಲಹಳ್ಳಿ ಗ್ರಾಮದಲ್ಲಿ ಮಾತನಾಡಿದ ಅವರು, ದೇವರು ದೇವಸ್ಥಾನದಲ್ಲಿ ಮಾತ್ರವಲ್ಲ ಎಲ್ಲಾ ಕಡೆಯೂ ಇದ್ದಾನೆ ಎಂದು ಅಭಿಪ್ರಾಯಪಟ್ಟರು.

ಮೂರ್ತಿ ಪೂಜೆಯಿಂದ ಮಾತ್ರವೇ ದೇವರು ಒಲಿಯುವುದಿಲ್ಲ. ಯಾವ ದೇವರೂ, ಧರ್ಮ ದ್ವೇಷ ಮಾಡಿ ಎಂದು ಹೇಳಿಲ್ಲ. ಪ್ರತಿಯೊಂದು ಧರ್ಮ, ಜಾತಿಗಳು ಪ್ರೀತಿಯನ್ನು ಬೋಧಿಸುತ್ತವೆಯೇ ಹೊರತು ದ್ವೇಷ ಮಾಡುವುದನ್ನು ಹೇಳುವುದಿಲ್ಲ. ಶ್ರೀ ದಂಡಿಮಾರಮ್ಮ ದೇವಾಲಯಕ್ಕೆ ಬಾಲ್ಯದಿಂದ ಭೇಟಿ ▶ 9ನೇ ಪುಟಕ್ಕೆ

ಶರಣಾಗದಿದ್ದರೆ ಇರಾನ್‌ಗೆ ಮುಂದೆ ಕಾದಿದೆ: ಟ್ರಂಪ್
ಇಸ್ರೇಲ್, ಅಮೆರಿಕ ಕ್ಷಮಿಸುವ ಮಾತೇ ಇಲ್ಲ: ಇರಾನ್

ಮಧ್ಯಪ್ರಾಚ್ಯದಲ್ಲಿ ಇನ್ನೂ ಉದ್ವಿಗ್ನತೆ

ನವದೆಹಲಿ: ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಮತ್ತಷ್ಟು ಉಲ್ಬಣಗೊಳ್ಳುತ್ತಿದ್ದು, ಅಮೆರಿಕಾ ಅಧ್ಯಕ್ಷ ಟ್ರಂಪ್ ಇರಾನ್ ಮೇಲೆ ಇನ್ನೂ ಭೀಕರ ದಾಳಿ ನಡೆಸುವ ಎಚ್ಚರಿಕೆ ರವಾನಿಸಿದ್ದಾರೆ.

ಯುದ್ಧ ಅಂತ್ಯಗೊಳ್ಳಬೇಕಾದರೆ ಇರಾನ್ ಯಾವುದೇ ಷರತ್ತುಗಳಿಲ್ಲದೆ ಸಂಪೂರ್ಣವಾಗಿ ಶರಣಾಗತಿಗೆ ಒಪ್ಪಿಕೊಳ್ಳಬೇಕು. ಶರಣಾದರೆ ಅಮೆರಿಕ ಹಾಗೂ ಅದರ ಮಿತ್ರರಾಷ್ಟ್ರಗಳು, ಇರಾನ್ ಅನ್ನು ವಿನಾಶದ ಅಂಚಿನಿಂದ ರಕ್ಷಿಸುವ ಕೆಲಸ ಮಾಡಲಿವೆ. ಆರ್ಥಿಕವಾಗಿ ಹಿಂದೆಂದಿಗಿಂತಲೂ ದೊಡ್ಡ, ಉತ್ತಮ ಮತ್ತು ಬಲಶಾಲಿ ಮಾಡಲಾಗುವುದು ಎಂದು ಟ್ರಂಪ್ ಹೇಳಿದ್ದಾರೆ.

ನೆರೆ ರಾಷ್ಟ್ರಗಳಿಗಷ್ಟೇ ಕ್ಷಮೆಯಾಚನೆ: ಇರಾನ್ ಮೇಲಿನ ದಾಳಿ ಮತ್ತು ತಮ್ಮ ಸರ್ವೋಚ್ಚ ನಾಯಕ ಆಯತೊಲ್ಲ ಅಲಿ ಖಮೇನಿ ವಿಚಾರವಾಗಿ ಕೆಂಡಾಮಂಡಲವಾಗಿರುವ ಇರಾನ್ ಅಚ್ಚರಿ ಬೆಳವಣಿಗೆಯಲ್ಲಿ ತನ್ನ ನೆರೆಹೊರೆ ರಾಷ್ಟ್ರಗಳ ಕ್ಷಮೆ ಕೋರಿದೆ.

ನೆರೆಹೊರೆಯವರಿಗೆ 'ಕ್ಷಮಿಸಿ' ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಹೇಳಿದ್ದಾರೆ. ಆದರೆ ಇದೇ ವೇಳೆ ಇರಾನ್ ಮೇಲೆ ದಾಳಿ ಮಾಡಿ ತಮ್ಮ ಸರ್ವೋಚ್ಚ ನಾಯಕ ಖಮೇನಿ ಹತ್ಯೆ ಮಾಡಿದ ಇಸ್ರೇಲ್–ಅಮೆರಿಕವನ್ನು ಕ್ಷಮಿಸುವ ಮಾತೇ ಇಲ್ಲ. ಈ ದೇಶಗಳಿಗೆ ತಮ್ಮ ದೇಶವು ಶರಣಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಇರಾನ್ ಜನ ಶರಣಾಗಬೇಕೆಂಬ ಶತ್ರುಗಳ ಆಶಯವನ್ನು ತಮ್ಮ ಸಮಾಧಿಗೆ ಕೊಂಡೊಯ್ಯಬೇಕು ಎಂದು ಟಿವಿಯಲ್ಲಿ ಪ್ರಸಾರವಾದ ಭಾಷಣದಲ್ಲಿ ಕಿಡಿಕಾರಿದ್ದಾರೆ.

ನೆರೆಹೊರೆ ಸಂಘರ್ಷ ಶಮನಗೊಳಿಸುವ ನಿಟ್ಟಿನಲ್ಲಿ ಮುಂದಡಿ ಇಟ್ಟಿರುವ ಇರಾನ್, ಈವರೆಗೆ ಪ್ರತಿದಾಳಿಯನ್ನಷ್ಟೇ ನಡೆಸ ಲಾಗಿದೆ ಎಂದು ಸ್ಪಷ್ಟಪಡಿಸಿದೆ.

ನೆರೆ ರಾಷ್ಟ್ರಗಳ ಪ್ರದೇಶದಿಂದ ದಾಳಿಯಾಗದ ಹೊರತು ಟೆಹರಾನ್ ಯಾವುದೇ ಕ್ಷಿಪಣಿ ಅಥವಾ ವೈಮಾನಿಕ ದಾಳಿ ನಡೆಸುವುದಿಲ್ಲ ಎಂದು ದೇಶದ ಮಧ್ಯಂತರ ನಾಯಕತ್ವ ಮಂಡಳಿಯ ಪ್ರಮುಖರೂ ಆಗಿರುವ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಘೋಷಿಸಿದ್ದಾರೆ.

ಅಂತೆಯೇ ನೆರೆಹೊರೆ ರಾಷ್ಟ್ರಗಳ ಮೇಲೆ ನಡೆಯುತ್ತಿರುವ ದಾಳಿ ಸ್ಥಗಿತಗೊಳಿಸಲು ಮಂಡಳಿ ಅನುಮೋದನೆ ನೀಡಿದೆ.

ಜೊತೆಗೆ ಹಿಂದಿನ ಪ್ರತಿಕೂಲ ಕ್ರಮಗಳು ಮುಂದುವರಿದರೆ ಈ ಪ್ರದೇಶದ ಎಲ್ಲಾ ಅಮೆರಿಕಾ ▶ 9ನೇ ಪುಟಕ್ಕೆ

ಹಾರ್ಮುಜ್‌ನಲ್ಲಿ ಹಡಗು ಸಂಚಾರ ಸಾಧ್ಯತೆ



ದುಬೈ ವಿಮಾನ ನಿಲ್ದಾಣದ ಮೇಲೆ ಮತ್ತೆ ಡ್ರೋನ್ ದಾಳಿ.

ದುಬೈ ವಿಮಾನ ನಿಲ್ದಾಣದ ಮೇಲೆಯೇ ಇರಾನ್ ಡ್ರೋನ್ ದಾಳಿ

ದುಬೈ: ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿರುವ ವಿಶ್ವದ ಎರಡನೇ ಅತ್ಯಂತ ಜನನಿಬಿಡ ದುಬೈ ವಿಮಾನ ನಿಲ್ದಾಣದ ಮೇಲೆಯೇ ಇರಾನ್ ಡ್ರೋನ್ ದಾಳಿ ನಡೆಸಿದೆ.

ಡ್ರೋನ್ ದಾಳಿಯ ಬೆನ್ನಲ್ಲೇ ದುಬೈ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಹಾರಾಟವನ್ನು ಸಂಪೂರ್ಣ ಸ್ಥಗಿತಗೊಳಿಸಲಾಗಿದೆ. ಡ್ರೋನ್ ಬಿದ್ದ ಜಾಗದಲ್ಲಿ ದಟ್ಟವಾದ ಹೊಗೆ ಕಾಣಿಸಿದ್ದು ಸಾವು, ನೋವಿನ ಬಗ್ಗೆ ಯಾವುದೇ ವರದಿ ಲಭ್ಯವಾಗಿಲ್ಲ. ದುಬೈಗೆ ಆಗಮಿಸುವ ಮತ್ತು ನಿರ್ಗಮಿಸುವ ಎಲ್ಲಾ ವಿಮಾನಗಳನ್ನು ಮುಂದಿನ ಸೂಚನೆ ಬರುವವರೆಗೆ ಸ್ಥಗಿತಗೊಳಿಸಲಾಗಿದೆ ▶ 9ನೇ ಪುಟಕ್ಕೆ

ಇಂದು ಐಸಿಸಿ ಟಿ20 ವಿಶ್ವಕಪ್ ಫೈನಲ್



ಐಸಿಸಿ ಟಿ20 ವಿಶ್ವಕಪ್ ಟ್ರೋಫಿ.

ಕಪ್‌ಗಾಗಿ ಭಾರತ–ನ್ಯೂಜಿಲೆಂಡ್ ಸೆಣಸಾಟ

"ಪ್ರಸ್ತುತ ಫಾರ್ಮ್ ಮತ್ತು ತವರಿನ ಪರಿಸ್ಥಿತಿಯನ್ನು ಗಮನಿಸಿದರೆ, ಟೀಂ ಇಂಡಿಯಾ ವಿಶ್ವ ಚಾಂಪಿಯನ್ ಆಗುವ ಸುವರ್ಣಾವಕಾಶವನ್ನು ಹೊಂದಿದೆ. ನ್ಯೂಜಿಲೆಂಡ್ ಬಗ್ಗೆ ಹೇಳುವುದಾದರೆ, ಭಾರತದಂತಹ ಬಲಿಷ್ಠ ತಂಡದ ವಿರುದ್ಧ ಗೆಲ್ಲುವ ಸಾಧ್ಯತೆಗಳು ತುಂಬಾ ಕಡಿಮೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ನ್ಯೂಜಿಲೆಂಡ್ ಗೆಲ್ಲುವ ಸಾಧ್ಯತೆ ಕೇವಲ 10 ರಿಂದ 20 ಪ್ರತಿಶತದಷ್ಟು ಮಾತ್ರ. ಭಾರತವನ್ನು ಸೋಲಿಸಲು ಅವರು ತಮ್ಮ ಜೀವನದ ಅತ್ಯುತ್ತಮ ಕ್ರಿಕೆಟ್ ಆಡಬೇಕಾಗುತ್ತದೆ.

–ಎಬಿ ಡಿವಿಲಿಯರ್ಸ್, ದಕ್ಷಿಣ ಆಫ್ರಿಕಾ ಮಾಜಿ ನಾಯಕ.

ಮೈಸೂರು, ಮಾ.7(ವಿವಿಹೆಚ್)– ಐಸಿಸಿ ಟಿ20 ವಿಶ್ವಕಪ್ 2026ರ ಫೈನಲ್ ಪಂದ್ಯ ನಾಳೆ (ಮಾ.8) ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಭಾರತ ಹಾಗೂ ನ್ಯೂಜಿಲೆಂಡ್ ಟ್ರೋಫಿಗಾಗಿ ಕಾದಾಡಲಿವೆ.

ಸೆಮಿಸ್‌ನಲ್ಲಿ ಬಲಿಷ್ಠ ಇಂಗ್ಲೆಂಡ್ ತಂಡವನ್ನು ಮಣಿಸಿ ಮೂರನೇ ಟಿ20 ವಿಶ್ವಕಪ್ ಮೇಲೆ ಭಾರತ ಕಣ್ಣಿಟ್ಟಿದ್ದರೆ, ಇತ್ತ ದಕ್ಷಿಣ ಆಫ್ರಿಕಾ ಮಣಿಸಿ ಫೈನಲ್ಸ್‌ಗೆ ಎಂಟ್ರಿಕೊಟ್ಟಿರುವ ನ್ಯೂಜಿಲೆಂಡ್ ಚೊಚ್ಚಲ ಪ್ರಶಸ್ತಿ ಗೆಲ್ಲುವ ತವಕದಲ್ಲಿದೆ.



ಸೂರ್ಯಕುಮಾರ್ ಸ್ಯಾಂಟ್ನರ್

ಇತ್ತಂಡಗಳು ಫೈನಲ್ಸ್ ಪಂದ್ಯಕ್ಕಾಗಿ ತಮ್ಮದೇ ತಂತ್ರ, ಪ್ರತಿತಂತ್ರದಲ್ಲಿ ನಿರತವಾಗಿವೆ. 19 ವರ್ಷಗಳ ಟಿ20 ವಿಶ್ವಕಪ್ ಇತಿಹಾಸದಲ್ಲಿ ತಂಡವೊಂದು ಸತತ ಎರಡು ಬಾರಿ ವಿಶ್ವಕಪ್ ಗೆದ್ದಿಲ್ಲ ಹಾಗೂ ತವರಿನಂಗಳದಲ್ಲಿ ಟೂರ್ನಿ ಆಯೋಜಿಸುವ ಯಾವ ತಂಡವೂ ಈವರೆಗೆ ವಿಶ್ವಕಪ್ ಗೆಲ್ಲಲು ಸಾಧ್ಯವಾಗಿಲ್ಲ. ಒಂದು ವೇಳೆ ನಾಳೆ ಭಾರತ, ಕಿವೀಸ್ ವಿರುದ್ಧ ಗೆಲುವು ದಾಖಲಿಸಿದ್ದೆ ಆದಲ್ಲಿ, ದಾಖಲೆ ಬರೆಯಲಿದೆ.

ಇತ್ತಂಡಗಳ ಬಲಾಬಲ: ಟೀಂ ಇಂಡಿಯಾ ಬಲಾಬಲ ನೋಡುವುದಾದರೆ, ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್, ಇಶಾನ್ ಕಿಶನ್ ಉತ್ತಮ ಲಯದಲ್ಲಿದ್ದರೆ, ಮಧ್ಯಮ ಕ್ರಮಾಂಕದಲ್ಲಿ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಶಿವಂ ದುಬೆ ಬಲ ತುಂಬಲಿದ್ದಾರೆ. ಹಾರ್ದಿಕ್ ಮತ್ತು ಅಕ್ಷರ್ ಪಟೇಲ್ ಕೀ ಪ್ಲೇಯರ್‌ಗಳಾಗಿದ್ದು, ಯಾವ ಸಂದರ್ಭದಲ್ಲಾದರೂ ಪಂದ್ಯದ ದಿಕ್ಕನ್ನೇ ಬದಲಿಸುವ ಶಕ್ತಿ ಅವರಿಗಿದೆ.

ಇನ್ನು ಬೌಲಿಂಗ್ ವಿಭಾಗದಲ್ಲಿ ಜಸ್‌ಪ್ರಿತ್ ಬುಮ್ರಾ ಟ್ರಂಪ್‌ಕಾರ್ಡ್ ▶ 9ನೇ ಪುಟಕ್ಕೆ

ಕೆಲಸ ಕೊಡಿಸುವುದಾಗಿ ನಂಬಿಸಿ ಮಹಿಳೆಗೆ 6 ಲಕ್ಷ ವಂಚನೆ

ಮೈಸೂರು: ಕೆಲಸ ಕೊಡಿಸುವುದಾಗಿ ನಂಬಿಸಿ ಮಹಿಳೆಯೊಬ್ಬರಿಂದ ಸುಮಾರು 6 ಲಕ್ಷ ರೂ. ಹಣ ಪಡೆದು ವಂಚಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರಣ್ಯಪುರಂನ 48 ವರ್ಷದ ಮಹಿಳೆಗೆ ಕರೆ ಮಾಡಿದ ಅನಾಮಿಕರು, ವೃತ್ತಿ ಸಲಹಾ ಸಂಸ್ಥೆ ಪ್ರತಿನಿಧಿಯೆಂದು ಪರಿಚಯಿಸಿಕೊಂಡಿದ್ದಾರೆ. ಬಳಿಕ ಪ್ರೊಸೆಸಿಂಗ್ ಹಾಗೂ ಸರ್ವೀಸ್ ಚಾರ್ಜ್ ಪಾವತಿಸಿದರೆ ಒಳ್ಳೆಯ ಕಡೆ ಕೆಲಸ ಕೊಡಿಸುವುದಾಗಿ ನಂಬಿಸಿದ್ದಾರೆ. ಇದನ್ನು ನಂಬಿದ ಮಹಿಳೆ ಒಟ್ಟು 6,04,556 ರೂ.ಗಳನ್ನು ವರ್ಗಾವಣೆ ಮಾಡಿದ್ದಾರೆ. ನಂತರ ಕೆಲಸವನ್ನೂ ಕೊಡಿಸದೆ, ಹಣವನ್ನೂ ವಾಪಸ್ ನೀಡದಿದ್ದಾಗ ವಂಚನೆಗೊಳಗಾಗಿರುವುದು ಅರಿವಿಗೆ ಬಂದು, ಪೊಲೀಸರಿಗೆ ದೂರು ನೀಡಿದ್ದಾರೆ.

ಮಹಿಳಾ ಪೊಲೀಸರು ಸವಾಲು ಎದುರಿಸಲು ಸಿದ್ಧರಿರಬೇಕು



ಮೈಸೂರಿನ ಪೊಲೀಸ್ ತರಬೇತಿ ಶಾಲೆಯ 10ನೇ ತಂಡದ ಮಹಿಳಾ ನಾಗರಿಕ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮದಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಶನಿವಾರ ಪ್ರಶಿಕ್ಷಣಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಕರೆ

ಮೈಸೂರು,ಮಾ.7(ಜಿಎ)–ಮಹಿಳೆಯರು ಪೊಲೀಸ್ ಸಮವಸ್ತ್ರ ಧರಿಸಿದ್ದಾಗ ಸಾಕಷ್ಟು ಸವಾಲುಗಳು ಎದುರಿಸಬೇಕಾಗುತ್ತದೆ. ಜೊತೆಗೆ ತ್ಯಾಗಗಳಿಗೂ ಸಿದ್ಧರಿರಬೇಕು. ಆದರೆ, ಮಹಿಳೆಯರಿಗೆ ಇರುವ ತಾಳ್ಮೆ, ಪ್ರೇರಣಾಶಕ್ತಿ ಯಾರಿಗೂ ಇಲ್ಲ ಎಂದು ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಮೈಸೂರಿನ ಪೊಲೀಸ್ ತರಬೇತಿ ಶಾಲೆಯ ಕವಾಯತು ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ತರಬೇತಿ ಶಾಲೆಯ 10ನೇ ತಂಡದ ಮಹಿಳಾ ನಾಗರಿಕ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ, ಮಹಿಳಾ ನಾಗರಿಕ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳನ್ನು ಹುರಿದುಂಬಿಸಿದರು.

10 ತಿಂಗಳ ಹಿಂದೆ ನೀವುಗಳು ಏಕಾಂಗಿಯಾಗಿ ಬಂದು ಈಗ ಪೊಲೀಸ್ ಕುಟುಂಬ ಸೇರಿಕೊಂಡಿದ್ದೀರಾ. ಪೊಲೀಸ್ ಕಾನ್‌ಸ್ಟೇಬಲ್‌ಗಳೇ ಇಲಾಖೆಗೆ ಬೆನ್ನೆಲುಬು ಎಂದ ಅವರು, ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವುದು ಹೆಮ್ಮೆ, ಘನತೆಯ ವಿಚಾರ. ಇಲ್ಲಿ ಪ್ರತಿದಿನ ಕಲಿಕೆ ಇರುತ್ತದೆ. ಈಗ ಮೊದಲಿನಂತೆ ಸಾಮಾನ್ಯ ಪ್ರಕರಣಗಳಿಲ್ಲ. ಸೈಬರ್ ಪ್ರಕರಣಗಳು ಹೆಚ್ಚಾಗಿವೆ. ಅದರ ಬಗ್ಗೆಯೂ ಅರಿತುಕೊಳ್ಳಿ ಎಂದು ಸಲಹೆ ನೀಡಿದರು.

ಮಹಿಳೆಯರಿಗೆ ಇರುವ ಆತ್ಮಸ್ಥೈರ್ಯ ಯಾರಿಗೂ ಇಲ್ಲ. ನೀವು ಎಲ್ಲವನ್ನು ಮಾಡಬಹುದು. ಠಾಣೆಯ ಪ್ರತಿಯೊಂದು ವಿಭಾಗದಲ್ಲಿ ತೊಡಗಿಸಿಕೊಳ್ಳಿ. ಯಾರು ಏನೇ ಹೇಳಿದರೂ ತಲೆಕೆಡಿಸಿಕೊಳ್ಳಬೇಡಿ ಎಂದರು.

ಇಲಾಖೆಯಿಂದ ಈಗ ಜನ ಸ್ನೇಹಿ ಪೊಲೀಸ್, ಆಸರೆ ಎಂಬ ಅನೇಕ ರೀತಿಯಲ್ಲಿ ಜನರೊಟ್ಟಿಗೆ ಸೇರಿ ಕಾರ್ಯನಿರ್ವಹಿಸುವ ಯೋಜನೆಗಳು ಆರಂಭವಾಗಿವೆ ಉತ್ತಮವಾಗಿ ಕೆಲಸ ಮಾಡಿ ಇಲಾಖೆಗೆ ಹೆಮ್ಮೆ ತನ್ನಿ ಎಂದು ಶುಭ ಹಾರೈಸಿದರು.

ಪ್ರಶಸ್ತಿ : ಕಾರ್ಯಕ್ರಮದಲ್ಲಿ ಅತ್ಯುತ್ತಮ ಪ್ರಶಿಕ್ಷಣಾರ್ಥಿಯಾಗಿ ಭುವನೇಶ್ವರಿ ಬಸಪ್ಪ ಪಿಡಶೆಟ್ಟಿ ಪ್ರಶಸ್ತಿ ಪಡೆದುಕೊಂಡರು. ಒಳಾಂಗಣ ಪ್ರಶಸ್ತಿಯನ್ನು ಮುತ್ತುರವ್ವಾ ಬಾಳಗೌಡ ಪಾಟೀಲ್, ರುಕ್ಮಿಣಿ ಕೃಷ್ಣಪ್ಪ ಪಮ್ಮಾರ ಇಬ್ಬರು ಪ್ರಥಮ, ಎಂ.ಎಸ್. ಅನುಷಾ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ಹೊರಾಂಗಣ ಪ್ರಶಸ್ತಿಯಲ್ಲಿ ಭುವನೇಶ್ವರಿ ಬಸಪ್ಪ ಪಿಡಶೆಟ್ಟಿ ಪ್ರಥಮ, ಎಂ.ಎಸ್. ಅನುಷಾ ದ್ವಿತೀಯ ಸ್ಥಾನ ತ’ವ್ಮ್ಮದಾಗಿಸಿಕೊಂಡಿದ್ದಾರೆ. ಎಸ್.ಎಲ್‌ಆರ್ ಫೈರಿಂಗ್‌ನಲ್ಲಿ ಲಕ್ಷ್ಮೀ ನಂಜಪ್ಪಳವರ ಪ್ರಥಮ, ಎಂ.ಎಸ್. ಅನುಷಾ ದ್ವಿತೀಯ ಪ್ರಶಸ್ತಿ ಪಡೆದುಕೊಂಡರು. 9 ಎಂ.ಎಂ ಪಿಸ್ತೂಲ್ ಫೈರಿಂಗ್‌ನಲ್ಲಿ ಕವಿತಾ ಸುರೇಶ್ ಬರಗಾಂವಿ ಪ್ರಥಮ, ಎ.ಎಸ್.ಸವಿತಾ ದ್ವಿತೀಯ ಪ್ರಶಸ್ತಿ ಪಡೆದುಕೊಂಡರು.

ವಿದ್ಯಾರ್ಹತೆ: ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ 40 ಮಂದಿ ಮಹಿಳಾ ಪೊಲೀಸ್ ಭಾಗವಹಿಸಿದ್ದರು. ಅವರಲ್ಲಿ ಬಿಇ 1, ಎಂ.ಕಾಂ 1, ಎಂಎಸ್‌ಸಿ 1, ಎಂಎ, ಬಿ.ಎಡ್ 2, ಎಂಎ 3, ಬಿಎ, ಬಿ.ಎಡ್ 1, ಬಿಎಸ್‌ಸಿ 4, ಬಿಕಾಂ 12, ಬಿಎ 11, ಪಿಯು 3, ಡಿಪ್ಲೊಮೊ 1 ವಿದ್ಯಾರ್ಹತೆ ಹೊಂದಿದ್ದಾರೆ. ಈ ಸಂದರ್ಭದಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಪೊಲೀಸ್ ತರಬೇತಿ ಶಾಲೆಯ ಪ್ರಭಾರ ಪ್ರಾಂಶುಪಾಲ ಸಿ.ಮಲ್ಲಿಕ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ವಿಶೇಷ ಸ್ವಾತಿ ಪೂಜೆ



ಮೈಸೂರು,ಮಾ.7–ನಗರದ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಮಾ.8 ರಂದು 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಆಯೋಜಿಸಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ವಿದ್ವಾನ್ ಯೋಗಾನರಸಿಂಹನ್ (ಮುರಳಿ ಅಯ್ಯಂಗಾರ್) ತಿಳಿಸಿದ್ದಾರೆ. ಮಾಹಿತಿಗೆ ಮೊ.9342188323, 7598832271 ಸಂಪರ್ಕಿಸಬಹುದು.

ಬಸವ ಮಾರ್ಗದಿಂದ ವಿಶೇಷ ಧಾರ್ಮಿಕ ಆಚರಣೆ; ಅನ್ನ ದಾಸೋಹ



ಬಸವಮಾರ್ಗ ಸಂಸ್ಥೆ ಅಧ್ಯಕ್ಷ ಬಸವರಾಜು, ಶಿಬಿರಾರ್ಥಿಗಳಿಗೆ ಊಟ ಬಡಿಸಿದರು.

ಮೈಸೂರು,ಮಾ.7–ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ ವತಿಯಿಂದ ಕೇತುಗ್ರಸ್ಥ ಹುಣ್ಣಿಮೆ ಪ್ರಯುಕ್ತ ವಿಶೇಷ ಧಾರ್ಮಿಕ ಆಚರಣೆ ಮತ್ತು ಅನ್ನ ದಾಸೋಹ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಶಿಬಿರಾರ್ಥಿಗಳು, ಅವರ ಕುಟುಂಬ ವರ್ಗ ಹಾಗೂ ಲೋಕ ಕಲ್ಯಾಣಾರ್ಥ ಸಂಸ್ಥೆ ಆವರಣದಲ್ಲಿ ಶಿವ, ಬಸವ ಹಾಗೂ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿ ವಿಶೇಷ ಕೈಂಕರ್ಯ ನಡೆಸಲಾಯಿತು.

ಸಂಸ್ಥೆ ಅಧ್ಯಕ್ಷ ಎಸ್.ಬಸವ ರಾಜು ಮಾತನಾಡಿ, ವ್ಯಸನ ಒಂದು ಮಾನಸಿಕ, ದೈಹಿಕ ಕಾಯಿಲೆ. ಈ ಕಾಯಿಲೆಗೆ ಪ್ರಾರಂಭಿಕ ಹಂತದಲ್ಲೇ ಚಿಕಿತ್ಸೆ ಪಡೆದುಕೊಳ್ಳಬೇಕು. ಇಲ್ಲದಿದ್ದರೆ ವ್ಯಸನಿ ಮಾನಸಿಕ ತೊಂದರೆಗಳಿಗೆ ಒಳಪಟ್ಟು ಸಾವು ಸಂಭವಿಸುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಕುಡಿತ ಅಥವಾ ಮಾದಕ ವ್ಯಸನಕ್ಕೆ ದಾಸನಾದ ವ್ಯಕ್ತಿಯು ಸಮಾಜದಲ್ಲಿ ಎಲ್ಲರಿಂದಲೂ ತಿರಸ್ಕಾರಕ್ಕೆ ಒಳಪಡುತ್ತಾನೆ ಇಂತಹವರಿಗೆ ನಮ್ಮ ಸಂಸ್ಥೆಯಿಂದ ಗುಣಮಟ್ಟದ ಚಿಕಿತ್ಸೆ ನೀಡಿ, ಎಲ್ಲರಂತೆ, ಎಲ್ಲರೊಳಗೂಡಿ ಸಮಾಜದಲ್ಲಿ ಬಾಳುವಂತೆ ಮಾಡಬೇಕಿದೆ ಎಂದರು.

ವ್ಯಸನಿಗಳಿಗೆ ದೈವಮಾರ್ಗ ಕಲ್ಪಿಸುವ ನಿಟ್ಟಿನಲ್ಲಿ ಸಂಸ್ಥೆಯಲ್ಲಿ ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆಯಂದು ಶಿವನನ್ನು ಪ್ರತಿಷ್ಠಾಪನೆ ಮಾಡಿ ಹೋಮ, ಹವನ ಮಾಡಲಾಗುತ್ತದೆ. ಜೊತೆಗೆ ವ್ಯಸನಿಗಳ ಭಯ, ಆತಂಕ, ಬಡತನ, ದಾರಿದ್ರ್ಯ, ಸೋಮಾರಿತದ, ಆಲಸ್ಯ ತೊಲಗಿ, ಉತ್ತಮ ಜೀವನ ಮಾರ್ಗ ಸಿಗಲೆಂದು ವಿಶೇಷ ಪೂಜೆಗಳನ್ನು ನೆರವೇರಿಸಲಾಗುತ್ತಿದೆ ಎಂದು ತಿಳಿಸಿದರು.

ಸಂಸ್ಥೆಯ ವ್ಯವಸ್ಥಾಪಕ ಮಹೇಶ್, ಸಿಬ್ಬಂದಿ ರಾಕೇಶ್, ಮಂಜುನಾಥ್, ಮಧು, ರಾಘವೇಂದ್ರ, ಅಭಿಷೇಕ್, ಶ್ರೀಧರ್, ಸಂಜಯ್, ಗಗನ್, ನಿಶ್ಚಿತಾ, ಉಷಾರಾಣಿ, ಮೋನಿಷಾ, ಅರ್ಚಿತ್‌ರಾಮ್, ಮನೋಜ್, ವಸಂತ್, ನೇತ್ರಾವತಿ, ನಂದೀಶ್, ಬಸವ ರಾಜು, ಗೋವಿಂದ್, ಆಕಾಶ್, ಪವನ್, ಮಲ್ಲಿಕಾರ್ಜುನ್, ಅಭಿ, ಗಗನ್, ಪ್ರಜ್ವಲ್, ರಾಜು ಇತರರು ಉಪಸ್ಥಿತರಿದ್ದರು.

ಬ್ಯಾಗ್ ವಿತರಣೆ



ಮೈಸೂರು ತಾಲೂಕು ಜಯಪುರ ಹೋಬಳಿ ಬಡಗಲಹುಂಡಿ ಗ್ರಾಮದ ರಾಯಣ್ಣ ತಂಡ ಇತ್ತೀಚೆಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ಕವೀಶ್‌ಗೌಡ, ಗ್ರಾಮದ ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಿಸಿದರು. ಮುಖಂಡರಾದ ಪ್ರಭುಸ್ವಾಮಿ, ಶಿವು ಬಾಲಾಜಿ, ಬಳಗದ ಸಿ.ಮಧು ಮತ್ತಿತರರಿದ್ದರು.

ಮಾ.10 ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು: ಮೈಸೂರಿನ ಕದಳಿ ಮಹಿಳಾ ವೇದಿಕೆ, ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ ವತಿಯಿಂದ ಜೆಎಸ್‌ಎಸ್ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಭಾರತ್ ಕ್ಯಾನ್ಸರ್ ಆಸ್ಪತ್ರೆ, ಮಿಯರ್ ಆರ್ಗ್ಯಾನಿಕ್, ನಂಜನಗೂಡು ಐಸಿಟಿಸಿ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮಾ.10 ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಮೈಸೂರಿನ ಮಂಡಿಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣ ಕಲ್ಯಾಣ ಮಂದಿರದಲ್ಲಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ: 9448753597, 9916155453, 9448738657 ಸಂಪರ್ಕಿಸಿ.

ಹಂಚ್ಯಾ–ಸಾತಗಳ್ಳಿಯಲ್ಲಿ ಬೀದಿನಾಯಿಗಳ ಹಾವಳಿ ತಪ್ಪಿಸಿ



ಬಡಾವಣೆಯಲ್ಲಿ ಗುಂಪಾಗಿ ನಿಂತಿರುವ ಬೀದಿನಾಯಿಗಳು

ಮೈಸೂರು, ಮಾ.7(ಜಿಎ)–ಮೈಸೂರಿನ ನಗರದ ರಿಂಗ್ ರಸ್ತೆಯಲ್ಲಿರುವ ಹಂಚ್ಯಾ–ಸಾತಗಳ್ಳಿ 'ಬಿ' ವಲಯದಲ್ಲಿ (ವಿಟಿಯು ಕಾಲೇಜು ಬಳಿ) ಬೀದಿನಾಯಿಗಳ ಹಾವಳಿ ವಿಪರೀತವಾಗಿದ್ದು, ಆದ್ದರಿಂದ ಸಂಬಂಧಪಟ್ಟವರು ಈ ಬೀದಿಗಳನ್ನು ಸೆರೆ ಹಿಡಿಯುವಂತೆ ನಿವಾಸಿ ಪಿ.ಎಲ್.ನಾರಾಯಣ ಆಗ್ರಹಿಸಿದ್ದಾರೆ.

ಇಲ್ಲಿನ ಸ್ಥಳೀಯ ನಿವಾಸಿಗಳಿಗೆ ಮತ್ತು ವಾಹನ ಸವಾರರಿಗೆ ಬೀದಿನಾಯಿಗಳಿಂದ ತುಂಬಾ ತೊಂದರೆಯಾಗುತ್ತಿದೆ. ರಾತ್ರಿ ಸಂದರ್ಭದಲ್ಲಿ ವಾಹನ ಸವಾರರಿಗೆ ಬೀದಿನಾಯಿಗಳು ಹಿಂಬಾಲಿಸಿ ಬೊಗಳಿಕೊಂಡು ಬರುವುದರಿಂದ ವಾಹನ ಸವಾರ ಇದರಿಂದ ತಪ್ಪಿಸಿಕೊಂಡು ಹೋಗುವ ಭರದಲ್ಲಿ ವಾಹನದಿಂದ ಬಿದ್ದು ಸಣ್ಣ–ಪುಟ್ಟ ಗಾಯಗಳಾಗಿರುವ ಉದಾಹರಣೆಗಳು ಸಾಕಷ್ಟಿದೆ. ಆಟ ಆಡುವ ಮಕ್ಕಳಿಗೆ ಈ ಬೀದಿ ನಾಯಿಗಳು ಕಚ್ಚಿ ಗಾಯಗಳಾಗಿರುವುದರಿಂದ ಪೋಷಕರು ಹೆದರಿ ತಮ್ಮ ಮಕ್ಕಳನ್ನು ಹೊರಗಡೆ ಬಿಡಲು ಸಹ ಹಿಂದೇಟು ಹಾಕುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟವರು ಈ ಬೀದಿಗಳನ್ನು ಸೆರೆ ಹಿಡಿದು ಸ್ಥಳೀಯ ನಿವಾಸಿಗಳಿಗೆ ಬೀದಿನಾಯಿಗಳಿಂದ ಆಗುವ ತೊಂದರೆಯನ್ನು ತಡೆಗಟ್ಟಬೇಕೆಂದು ಎಲ್ಲಾ ಬಡಾವಣೆಗಳ ನಿವಾಸಿಗಳ ಪರವಾಗಿ ಮನವಿ ಮಾಡಿದ್ದಾರೆ.

ರೈತರು ಉತ್ಪಾದಿಸುವ ಬಿತ್ತನೆ ಭತ್ತಕ್ಕೆ 3600 ರೂ. ಕೊಡಿ

ಹೋರಾಟದ ಎಚ್ಚರಿಕೆ ನೀಡಿದ ರೈತರು

ಮೈಸೂರು,ಮಾ.7(ಜಿಎ)–ಕರ್ನಾಟಕ ರಾಜ್ಯ ಬೀಜ ನಿಗಮವು ಈ ಬಾರಿ ರೈತರು ಉತ್ಪಾದಿಸಿರುವ ಬಿತ್ತನೆ ಭತ್ತಕ್ಕೆ ಕೇವಲ 3300 ರೂ., ನಿಗದಿಪಡಿಸಿರುವುದರಿಂದ ರೈತರಿಗೆ ವಿಪರೀತ ನಷ್ಟವಾಗುತ್ತಿದೆ. ಹೀಗಾಗಿ ಕೂಡಲೇ ಈ ಹಿಂದೆ ನೀಡುತ್ತಿದ್ದ ಕ್ವಿಂಟಾಲ್‌ಗೆ 3600 ರೂ.ಗಳನ್ನೇ ನೀಡಬೇಕು ಇಲ್ಲದಿದ್ದರೆ ರೈತರು ಹೋರಾಟ ನಡೆಸಲಿದ್ದಾರೆ ಎಂದು ರೈತ ಕೆ.ಎಲ್.ಪ್ರಭುಸ್ವಾಮಿ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಆರ್.ನಗರ ಮಂಡ್ಯ, ಮೈಸೂರಿನ ಸುಮಾರು 150 ರೈತರು ಈ ನಿಟ್ಟಿನಲ್ಲಿ ಸಭೆ ಸೇರಿ ಈ ನಿರ್ಧಾರ ಕೈಗೊಂಡಿದ್ದಾರೆ. 2024ರಲ್ಲಿ ಕ್ವಿಂಟಾಲ್‌ಗೆ 3600 ರೂ. ಇತ್ತು. ಕಳೆದ ವರ್ಷ 3400 ಇತ್ತು. ಈಗ ಇದನ್ನು 3300ಕ್ಕೆ ನಿಗದಿಪಡಿಸಲಾಗಿದೆ. ಪ್ರತಿ ವರ್ಷವೂ ಉತ್ಪಾದನಾ ವೆಚ್ಚ, ಲೋಡಿಂಗ್, ಅನ್‌ಲೋಡಿಂಗ್ ಶುಲ್ಕ ಸಹಾ ಹೆಚ್ಚಿದೆ. ಹೀಗಿರುವಾಗ ಪ್ರತಿ ವರ್ಷ ದರ ಇಳಿಸುವುದು ಸರಿಯಲ್ಲ. ಇದಲ್ಲದೆ, ಒಂದು ಎಕರೆಗೆ ಕೇವಲ 12ರಿಂದ 15 ಕ್ವಿಂಟಾಲ್ ಮಾತ್ರ ಖರೀದಿ ಮಾಡುವುದಾಗಿ ತಿಳಿಸುವುದು ಸರಿಯಲ್ಲ. ಈ ಬಗ್ಗೆ ಬೆಂಗಳೂರಿನ ಹೆಬ್ಬಾಳ್‌ನಲ್ಲಿನ ರಾಜ್ಯ ಬೀಜ ನಿಗಮದ ಅಧ್ಯಕ್ಷರಿಗೆ ಶೀಘ್ರದಲ್ಲೇ ಮನವಿ ಸಲ್ಲಿಸಲಿದ್ದು, ಪರಿಗಣಿಸದಿದ್ದರೆ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಗೋಷ್ಠಿಯಲ್ಲಿನ ಎನ್.ಎಸ್. ನಾಗೇಂದ್ರಸ್ವಾಮಿ, ಮಹದೇವಸ್ವಾಮಿ, ಬಸವರಾಜು, ಮಲ್ಲೇಶ್ ಉಪಸ್ಥಿತರಿದ್ದರು.

ಬದನವಾಳು ಖಾದಿ ಕೇಂದ್ರದಲ್ಲಿ ಮರಗಳ ಹನನ



ಹಿರಿಯ ರಂಗಕರ್ಮಿ, ಗಾಂಧಿವಾದಿ ಪ್ರಸನ್ನ ಆಕ್ರೋಶ

ಮೈಸೂರು, ಮಾ.7(ಜಿಎ)–ಅಭಿವೃದ್ಧಿಯ ಹೆಸರಿನಲ್ಲಿ ಬದನವಾಳು ಖಾದಿ ಕೇಂದ್ರದಲ್ಲಿ ದಶಕಗಳ ಹಿಂದೆ ನೆಟ್ಟು ಬೆಳೆದು ನಿಂತಿದ್ದ ಮರಗಳನ್ನು ಕಡಿದುರುಳಿಸಿರುವುದು ಸರಿಯಲ್ಲ ಎಂದು ಹಿರಿಯ ರಂಗಕರ್ಮಿ ಹಾಗೂ ಗಾಂಧಿವಾದಿ ಪ್ರಸನ್ನ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲಿ ಅನಗತ್ಯ ಕಟ್ಟಡ ನಿರ್ಮಾಣ, ವಿಪರೀತ ಯಂತ್ರಗಳ ಮೂಲಕ ಗುತ್ತಿಗೆದಾರರು ಭ್ರಷ್ಟ ಅಧಿಕಾರಿಗಳ ಜೇಬು ತುಂಬುವ ಕೆಲಸ ನಡೆದಿದೆ. ಸರ್ಕಾರದ ನೀತಿಯಿಂದ ಇಲ್ಲಿನ ಕೈಮಗ್ಗ ಕ್ಷೇತ್ರ ಬಳಲುತ್ತಿದೆ. ಪವರ್ ಲೂಮ್ ಖಾದಿ, ಸಿಂಥೆಟಿಕ್ ಖಾದಿ, ಪವರ್ ಲೂಮ್ ಸೀರೆ, ಪಂಚೆಗಳೆಂಬ ಕಳ್ಳ ಮಾಲಿನ ಉತ್ಪಾದನೆಗೆ ಜವಳಿ ಇಲಾಖೆ ಪ್ರಚೋದಿಸುತ್ತಿದೆ ಎಂದು ದೂರಿದರು.

ರಾಜ್ಯ ಖಾದಿ ಬೋರ್ಡ್ ಆಮಂತ್ರಣದ ಮೇರೆಗೆ ರಾಜ್ಯದ ವಿವಿಧೆಡೆಗಳಿಂದ ಸ್ವಯಂಸೇವಕರು ಬದನವಾಳಿಗೆ ತೆರಳಿ, ಕಳೆದೆರಡು ತಿಂಗಳಿನಿಂದ ಗ್ರಾಮಸ್ಥರ ಜೊತೆ ಕೈಜೋಡಿಸಿ, ಖಾದಿ ಕೇಂದ್ರದ ಪುನಶ್ಚೇತನ ಕಾರ್ಯ ಹಾಗೂ ಗಾಂಧಿಗ್ರಾಮದ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ. ಆದರೆ ದುರಂತದ ಸಂಗತಿಯೆಂಬಂತೆ ಅಧಿಕಾರಿಗಳ ಅವಸರದ ಪ್ರಗತಿಯ ಧಾವಂತ ಇದಕ್ಕೆ ಅಡ್ಡಿಯಾಗಿದೆ ಎಂದು ಬೇಸರಿಸಿದರು.

ಕಳೆದೆರಡು ತಿಂಗಳಿನಿಂದ ನಡೆದಿದ್ದ ಶ್ರಮ ದಾನ, ಸೇವಾ ಕಾರ್ಯ, ಖಾದಿ ಬಟ್ಟೆಯ ಮಾರಾಟ, ಆಶ್ರಮದ ಸ್ವಚ್ಛತಾ ಕಾರ್ಯ, ಪ್ರಾರ್ಥನಾ ಸಭೆಗಳು, ಗ್ರಾಮ ಸಭೆಗಳಿಗೆ ಸ್ಫೂರ್ತಿ ಸಿಗುತ್ತಿಲ್ಲ. ಈಗಾಗಲೇ ಖಾದಿ ಕ್ಷೇತ್ರದ ಪುನಶ್ಚೇತನಕ್ಕೆ ವಿಸ್ತೃತವಾದ ವರದಿ ಸಲ್ಲಿಸಿದ್ದು, ಸರ್ಕಾರ ಇಚ್ಛಾಶಕ್ತಿ ಪ್ರದರ್ಶಿಸಿ ಅದನ್ನು ಜಾರಿಗೊಳಿಸಲು ಮುಂದಾಗಬೇಕು. ಇಲ್ಲವಾದರೆ ಅಹಿಂಸಾತ್ಮಕ ಸತ್ಯಾಗ್ರಹ ಆರಂಭಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಗಾಂಧಿವಾದಿ ಮಹದೇವಪ್ಪ ಗೋಷ್ಠಿಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.3.2026 ಭಾನುವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಸ್ವಾತಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಮೂತ್ರಪಿಂಡ ಕಾಯಿಲೆ ತಪಾಸಣಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ರೋಟರಿ ಕ್ಲಬ್ ಆಫ್ ಮೈಸೂರು ಡೈಮಂಡ್, ರೋಟರಿಕ್ಲಬ್ ಆಫ್ ಜಯಪ್ರಕಾಶನಗರ, ಸುಶ್ರುತ ಕಣ್ಣಿನ ಆಸ್ಪತ್ರೆ :** ಬೃಹತ್ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ರೋಟರಿ ಮೈಸೂರು ಶಾಲೆ, ದಟ್ಟಗಳ್ಳಿ, ಬೆಳಗ್ಗೆ 9 ರಿಂದ.
- **ಯೋಗಾನರಸಿಂಹಸ್ವಾಮಿ ದೇವಸ್ಥಾನ :** ಸ್ವಾತಿ ನಕ್ಷತ್ರ ವಿಶೇಷ ಪೂಜೆ, ಬೆಳಗ್ಗೆ 9 ಗಂಟೆಯಿಂದ. ಸ್ಥಳ: ದೇವಸ್ಥಾನದ ಪ್ರಾಂಗಣ, ವಿಜಯನಗರ.
- **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ :** 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ: ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನಲ್ಲಿ ಸೋಂಕು ಶಿಬಿರ, ಕಣ್ಣಿನಲ್ಲಿ ಮಾಂಸ ಬೆಳವಣಿಗೆ, ಮತ್ತು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ನೀರು ಸೋರುವುದು, ಕಣ್ಣು ತುರಿಸುವುದು, ಶುಷ್ಕನೇತ್ರ, ಮಕ್ಕಳಲ್ಲಿ ಕಂಡುಬರುವ ಕಲಿಕೆಯಲ್ಲಿನ ಸಮಸ್ಯೆಗಳು ಹಾಗೂ ಏಕಾಗ್ರತೆಯ ಕೊರತೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10 ರಿಂದ
- **ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತು :** ಕರೋಕೆ ಕಾರ್ಯಕ್ರಮ, ಮಹಿಳಾ ಸಾಧಕರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ಡಾ. ಜಿ.ಎಸ್. ದಯಾನಂದ, ಅಧ್ಯಕ್ಷತೆ : ಮನೋವಿಜ್ಞಾನಿ ಡಾ. ರೇಖಾ ಮನಃಶಾಂತಿ, ಅತಿಥಿಗಳು : ಶ್ರೀಮತಿ ನಳಿನಿ ತಮ್ಮಯ್ಯ, ಶ್ರೀಮತಿ ಎಂ.ಬಿ. ಗೀತಾ, ಸುರೇಶ್ ಬಾಬು, ಡಾ. ಟಿ. ಸಂಧ್ಯಾ, ಆದಿಲ್ ಪಾಷ, ಎಂ. ಶಿವಣ್ಣ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.
- **ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ :** ಉಚಿತ ಬೆನ್ನುಮೂಳೆ ಮತ್ತು ನರ ಶಸ್ತ್ರಚಿಕಿತ್ಸಾ ಶಿಬಿರ, ಉಚಿತ ಶ್ವಾಸಕೋಶ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಮಹಾಭಿಷೇಕ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೆಪೇಟೆ.
- **ಜನನಿ ಸೇವಾ ಟ್ರಸ್ಟ್ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ದಿಟ್ಟ ಮಹಿಳೆಯರಿಗೆ ಗೌರವ ಸಮರ್ಪಣಾ ಸಮಾರಂಭ, ಮುಖ್ಯ ಅತಿಥಿಗಳು : ವಿಶ್ರಾಂತ ಪ್ರಾಂಶುಪಾಲರಾದ ಡಾ. ಸುಧಾ ರಮೇಶ್, ಸಂಸ್ಕೃತಿ ಚಿಂತಕರಾದ ಶ್ರೀಮತಿ ಸಿ. ಗೌರಿ ಕೆ. ಹರೀಶ್‌ಗೌಡ, ಕವಯತ್ರಿ ಕೆರೋಡಿ ಎಂ. ಲೋಲಾಕ್ಷಿ, ವಾರ್ತಾ ಮತ್ತು ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರಾದ ಶ್ರೀಮತಿ ನಿರ್ಮಲ ಶ್ರೀನಿವಾಸ್, ಶ್ರೀಮತಿ ಕೆ.ಆರ್. ವಿಭಾವಸು ದೀಪಕ್, ಸಮಾಜ ಸೇವಕರಾದ ಶ್ರೀಮತಿ ಉಮಾ ಸಾಯಿರಾಮ್, ಅಧ್ಯಕ್ಷತೆ : ಜನನಿ ಸೇವಾ ಟ್ರಸ್ಟ್ ಅಧ್ಯಕ್ಷ ಎಂ.ಕೆ. ಅಶೋಕ, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.
- **ಪರಂಪರೆ ಸಂಸ್ಥೆ, ಸುಧರ್ಮಾ ಸಂಸ್ಕೃತ ದಿನ ದಿನ ಪತ್ರಿಕೆ:** ಉಪನ್ಯಾಸ ಸರಣಿ, ಬೆಳಗ್ಗೆ 8.30 ರಿಂದ ಸಾಮೂಹಿಕ ಪಾದುಕಾ ಸಹಸ್ರ ಪಾರಾಯಣ, ಮನಸ್ವಿನೀ ಭಜನಾ ಮಂಡಳಿಯಿಂದ ವಾಚನ, ವಿದ್ವಾನ್ ಡಾ.ಹೆಚ್.ವಿ.ನಾಗರಾಜರಾವ್ ಅವರಿಂದ ಶ್ರೀ ವೇದಾಂತ ದೇಶಿಕರಿಂದ ವಿರಚಿತ ಶ್ರೀ ಪಾದುಕಾಸಹಸ್ರಂ ಕುರಿತು ಉಪನ್ಯಾಸ. ಸ್ಥಳ: ಶ್ರೀನಿವಾಸ ಪದ್ಮಜಾರಾವ್ ಸಭಾಂಗಣ, ಬಿಎಸ್‌ಎಸ್ ವಿದ್ಯೋದಯ ಸಂಸ್ಥೆ, ರಾಘವೇಂದ್ರ ಸ್ವಾಮಿ ಮಠದ ಪಕ್ಕ, ಕೃಷ್ಣಮೂರ್ತಿಪುರಂ, ಸಂಜೆ 6 ಗಂಟೆಗೆ.
- **ಭಾರತ್ ಭೀಮ್ ಸೇನೆ ಮಹಿಳಾ ಘಟಕ, ತುಳಸಿ ಮಹಿಳಾ ಸ್ವಸಹಾಯ ಸಂಘ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ದಿನೇಶ್, ದೀಪಕ್, ಯೋಗ ಶ್ರೀನಿವಾಸ್, ಡಾ. ಕಾವೇರಿ ಪ್ರಕಾಶ್, ಶ್ರೀಮತಿ ಸುಹಾಸಿನಿ, ಶ್ರೀಮತಿ ಪೂಜಾ, ಶ್ರೀಮತಿ ನಿರ್ಮಲ, ಶ್ರೀಮತಿ ವಿ.ಪಿ. ಸುಶೀಲ, ಕು. ಸುಮವತಿ, ದೀಪಬುದ್ಧ ಹೆಚ್.ಜಿ., ಎಂ. ರಾಘವೇಂದ್ರ, ಸ್ಥಳ: ಧರಂಸಿಂಗ್ ಕಾಲೋನಿ, ಬಿ ಬ್ಲಾಕ್, ವಿದ್ಯಾರಣ್ಯಪುರಂ, ಮಧ್ಯಾಹ್ನ 3ಕ್ಕೆ.
- **ಶ್ರೀ ಆವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ :** ಶ್ರೀ ಗಣೇಶ, ಶ್ರೀ ಶಾರದಾಂಬ, ಶ್ರೀ ಚಂದ್ರಮೌಳೇಶ್ವರ ಹಾಗೂ ಶ್ರೀ ಶಂಕರ ಭಗವತ್ಪಾದರ 15ನೇ ಪ್ರತಿಷ್ಠಾಪನಾ ವರ್ಧಂತಿ ಮಹೋತ್ಸವ, ಸ್ಥಳ: ಶ್ರೀ ಆವನೀ ಶಂಕರ ಮಠ, ಮೈಸೂರು ಶಾಖೆ.
- **ರೋಟರಿ ಮೈಸೂರು :** ನಾದ ವೈಭವ, ಹಿಂದೂಸ್ಥಾನಿ ಶಾಸ್ತ್ರೀಯ ವಯೋಲಿನ್ ಜುಗಲ್‌ಬಂದಿ ವಾದನ, ಮುಖ್ಯ ಅತಿಥಿಗಲು : ವೀಣಾ ಕಲಾವಿದರಾದ ಶ್ರೀಮತಿ ರೇವತಿ ಕಾಮತ್, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.
- **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಶ್ರೀಮತಿ ಇಂದಿರಾದೇವಿ ಪ್ರಫುಲ್ಲಚಂದ್ರ ಸಂಸ್ಮರಣಾ ಕಾರ್ಯಕ್ರಮ, ವಿದುಷಿ ಶ್ರುತಿ ಬೋಡೆ ಅವರಿಂದ ಶಿವೋಹಂ–ಹಿಂದೂಸ್ಥಾನಿ ಶಾಸ್ತ್ರೀಯ ಹಾಗೂ ಲಘು ಶಾಸ್ತ್ರೀಯ ಸಂಗೀತ, ಪಂಡಿತ್ ಭೀಮಾಶಂಕರ್ ಬಿದನೂರ್–ತಬಲ, ಪಂಡಿತ್ ಸತೀಶ್ ಭಟ್–ಹಾರ್ಮೋನಿಯಂ, ಸ್ಥಳ:ಶ್ರೀ ನಾದಬ್ರಹ್ಮ ಸಂಗೀತ ಸಭಾ, ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ರಂಗಾಯಣ :** ರಂಗಾಯಣದ ಹಿರಿಯ ಕಲಾವಿದರಿಂದ 'ಒಮ್ಮೆ ಹೆಣ್ಣಾಗು' ನಾಟಕ ಪ್ರದರ್ಶನ, ಕಥೆ : ಬಾನು ಮುಷ್ತಾಕ್, ನಿರ್ದೇಶನ : ಸವಿತಾ ರಾಣಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ




ಬೆಳಗ್ಗೆ: ಬೆಳಿಗ್ಗೆ 6.10 ಚಿಂತನ–ಡಾ.ಡಿ.ಸಿ.ಗೀತಾ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಎಂ.ಎ. ಶೋಭಾ ಹಾಗೂ ಕೆ.ಪಿ.ರೇವತಿ, ವ್ಯಾಖ್ಯಾನ–ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದಿನ ಕುರಿತು ಪೂರ್ವ ಪೀಠಿಕೆಯಾಗಿ ಕೃಪಾಕರ ಸೇನಾನಿಯವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ: ಜಿ ಶಾಂತಕುಮಾರ್, 8.30 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮಹಿಳಾರಂಗದ ವಿಶೇಷ ಕಾರ್ಯಕ್ರಮ, ಕಾಣದ ಕಣ್ಮಣಿಗಳು ಬೀದಿ ಬದಿ ವ್ಯಾಪಾರ ನಡೆಸುತ್ತಿರುವ ಮಹಿಳೆಯರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ : ಇಡ್ಲಿ ದೋಸೆ ವ್ಯಾಪಾರ ಮಾಡುತ್ತಿರುವ ಸೋಮಸುಂದರಮ್ಮ, ಹೂವಿನ ವ್ಯಾಪಾರ ಮಾಡುತ್ತಿರುವ ಚಿಕ್ಕತಾಯಮ್ಮ, ಪಾನಿಪುರಿ ವ್ಯಾಪಾರ ಮಾಡುತ್ತಿರುವ ಸಾಕಮ್ಮ, ಪ್ರಸ್ತುತಿ– ಸಹನಾ, 9.05 ಅಂತರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ ಕ್ಯಾನ್ಸರ್ ನಿಂದ ಮುಕ್ತರಾದ ದಿವ್ಯ.ಪಿ ಅವರೊಂದಿಗೆ ವಿಶೇಷ ಸಂದರ್ಶನ, ಪ್ರಾಯೋಜಕರು – INDIAN CANCER SOCIETY KARNATAKA CHAPTER, 9.20 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ಗ್ಲುಕೋಮ ಸಪ್ತಾಹದ ಸಂದರ್ಭದಲ್ಲಿ ಗ್ಲುಕೋಮಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ ನೇತ್ರ ಚಿಕಿತ್ಸಾ ವಿಭಾಗದ ಸಹ ಪ್ರಾಧ್ಯಾಪಕರು ಹಾಗೂ ಗ್ಲುಕೋಮಾ ಸ್ಪೆಷಲಿಸ್ಟ್ ಡಾ.ಸ್ವಾತಿ.ಆರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟ, ಪ್ರಸ್ತುತಿ–ರೀನಾ ಪದ್ಮನಾಭ, 10.15 ಮಕ್ಕಳ ಮಂಟಪ–ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ, ವಿಷಯ–ಸಮಾಜ ವಿಜ್ಞಾನ, ಭಾಗವಹಿಸುವವರು–ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಶಿಕ್ಷಕರಾಗಿರುವ ನವೀನ್ ಕುಮಾರ್.ಜೆ, ಪ್ರಸ್ತುತಿ–ದಿಗ್ವಿಜಯ್.ಬಿ, 11.00 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮಹಿಳಾ ಸಾಹಿತ್ಯದಲ್ಲಿ ಸೆನ್ಸಾರ್ ಶಿಪ್ ಕುರಿತು ವಿಶೇಷ ಚರ್ಚೆ. ಭಾಗವಹಿಸುತ್ತಾರೆ–ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ.ಆರ್.ಸುನಂದಮ್ಮ, ಕಥೆಗಾರ್ತಿ ಡಾ.ಎಂ.ಎಸ್. ವೇದ ಹಾಗೂ ಬರಹಗಾರ್ತಿ ಉಷಾನರಸಿಂಹನ್, ಚರ್ಚೆಯನ್ನು ನಡೆಸಿಕೊಡುತ್ತಾರೆ–ವಿಶ್ರಾಂತ ಕುಲಪತಿಗಳಾದ ಡಾ.ಸಬಿಹಾ ಭೂಮಿಗೌಡ.

ಮಧ್ಯಾಹ್ನ: 12.05 ವನಿತಾ ವಿಹಾರ – ಅಂತರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ ರೂಪಕ–ಮೂರು ಚಕ್ರಗಳು–ನೂರಾರು ಕನಸುಗಳು ಬೆಂಗಳೂರಿನ ಮಹಿಳಾ ಆಟೋ ಚಾಲಕರ ಉದ್ಯೋಗ, ಧೈರ್ಯ ಮತ್ತು ಬದಲಾವಣೆಯ ಕಥೆ, ನಿರೂಪಣೆ : ಡಾ ಎನ್. ರಘು, ನಿರ್ಮಾಣ : ಆಶಾ, 12.35 ಭಕ್ತಿಗೀತೆಗಳು : ಸುಶ್ಮಿತಾ.ಎಲ್.ಎನ್, 12.45 ಜನಪದ ಸಂಗೀತ : ಚಾಮರಾಜನಗರ ಜಿಲ್ಲೆ ಸಿದ್ಧಯ್ಯನಪುರದ ಭಾಗ್ಯಮ್ಮ ಮತ್ತು ಸಂಗಡಿಗರಿಂದ ಸೋಬಾನೆ ಪದ 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನ ಮಂತ್ರಿ ಸ್ಟಾರ್ಟ್ ಅಪ್ ಇಂಡಿಯಾ ಕುರಿತು ಮಾಹಿತಿ ನೀಡುತ್ತಾರೆ ಪತ್ರಕರ್ತೆ ದಿವ್ಯ ಹೆಗಡೆ ಕಬ್ಬಿನ ಗದ್ದೆ, 1.20 ಭಾವಗೀತೆಗಳು–ಸುಶ್ಮಿತಾ.ಎಲ್.ಎನ್., 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ. 2.40 ಚಿತ್ರಗೀತೆಗಳು, 3.10 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮಹಿಳಾ ರಂಗದ ವಿಶೇಷ ಕಾರ್ಯಕ್ರಮ– ಕಾಣದ ಕಣ್ಮಣಿಗಳು ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ವಿದ್ಯಾವಂತ ಮಹಿಳೆಯರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ– ವಿಶೇಷ ಚೇತನ ಮಗುವಿನ ತಾಯಿಯಾದ ಅರ್ಚನಾ ಭಟ್, Home schooling ಮಾಡುತ್ತಿರುವ ತಾಯಿ ದೀಪಾಶ್ರೀ, ನಿವೃತ್ತ ಶಿಕ್ಷಕಿ ಲೋಲಾಕ್ಷಿ.ಕೆ.ಎಂ, ಪ್ರಸ್ತುತಿ–ನೇತ್ರಾ.ಕೆ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರ ಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಮಂತ್ ಮಂಜುನಾಥ್–ವೈಯೋಲಿನ್ ವಾದನ, 4.45 ಚಿತ್ರಗೀತೆಗಳು, 5.00 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮಹಿಳಾರಂಗದ ವಿಶೇಷ ಕಾರ್ಯಕ್ರಮ ಕಾಣದ ಕಣ್ಮಣಿಗಳು. ವೃತ್ತಿ ಬದುಕಿನೊಂದಿಗೆ ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಮಹಿಳೆಯರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ–ಸರ್ಕಾರಿ ಕೆಲಸದಲ್ಲಿರುವ ವಿಶೇಷ ಚೇತನ ಮಗುವಿನ ತಾಯಿ ಡಾ.ಸೌಮ್ಯ ಶೆಟ್ಟಿ, ಮೈಸೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಹಾಗೂ ಕುಟುಂಬ ನಿರ್ವಹಣೆಯಲ್ಲಿ ತೊಡಗಿರುವ ವಿದ್ಯಾಶ್ರೀ. ಎನ್.ಎಸ್, ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕಿಯಾದ ಗೀತಾ, ಪ್ರಸ್ತುತಿ– ಕೀರ್ತನಾ.ವಿ, 6.30 ICC T20 ಪುರುಷರ ವಿಶ್ವಕಪ್ ಪಂದ್ಯಾವಳಿ–2026 ಭಾರತ ಹಾಗೂ ನ್ಯೂಜಿಲ್ಯಾಂಡ್ ತಂಡಗಳ ನಡುವೆ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಫೈನಲ್ ಪಂದ್ಯದ ವೀಕ್ಷಕ ವಿವರಣೆ.

ಬೇಸಿಗೆ ಬಿರು ಬಿಸಿಲಲ್ಲೂ ಮೃಗಾಲಯದ ಪ್ರಾಣಿ–ಪಕ್ಷಿಗಳು ಕೂಲ್... ಕೂಲ್...


ಸ್ಪಿಂಕ್ಲರ್ ಮೂಲಕ ನೀರು ಚಿಮ್ಮಿಸುವುದು; ನೀರಿನಂಶದ ಆಹಾರ ಪದಾರ್ಥ ಪೂರೈಕೆ




ಮೃಗಾಲಯದಲ್ಲಿರುವ ಜಿರಾಫೆಗಳ ಮೇಲೆ ವಾಟರ್ ಜೆಟ್ ನೀರಿನ ಸಿಂಚನ.



ಸ್ಪಿಂಕ್ಲರ್‌ನಿಂದ ಚಿಮ್ಮುತ್ತಿರುವ ನೀರಿಗೆ ಮೈಯೊಡ್ಡಿರುವ ಸಿಂಹಿಣಿ.



ಕಟ್ ಫ್ರೂಟ್ ಸೇವಿಸುತ್ತಿರುವ ಗೊರಿಲ್ಲಾ



ಎಳನೀರು ಸೇವಿಸುತ್ತಿರುವ ಚಿಂಪಾಂಜಿ



ಮೈಸೂರು,ಮಾ.7(ಎಂಟಿವೈ)–ಬೇಸಿಗೆ ಬಿರು ಬಿಸಿಲಿನಿಂದ ಮೃಗಾಲಯದ ಪ್ರಾಣಿ–ಪಕ್ಷಿಗಳ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ನೀರಿನ ಅಂಶ ಹೆಚ್ಚಾಗಿರುವ ಆಹಾರ ಪದ್ಧತಿಯೊಂದಿಗೆ ಪ್ರಾಣಿಗಳ ಮನೆ ತಂಪಾಗಿಸಲು ನೀರಿನ ಸ್ಪಿಂಕ್ಲರ್ ಬಳಸಲಾಗುತ್ತಿದೆ.

ಪ್ರಸಕ್ತ ಸಾಲಿನ ಬೇಸಿಗೆ ಆರಂಭದಲ್ಲಿಯೇ ಬಿಸಿಲಿನ ಬೇಗೆ ಹೆಚ್ಚಾಗಿದ್ದು, 35ರಿಂದ 36 ಡಿಗ್ರಿ ಉಷ್ಣಾಂಶ ದಾಖಲಾಗಿ, ಜನರು ತತ್ತರಿಸುವಂತಾಗಿದೆ. ಪ್ರಾಣಿಗಳ ಸಂಕಷ್ಟವಂತೂ ಹೇಳತೀರದಾಗಿದೆ.

ಮೃಗಾಲಯದ ಪ್ರಾಣಿ–ಪಕ್ಷಿಗಳ ಮನೆ ತಂಪು ತಂಪು...: ದೇಶದ ಮುಂಚೂಣಿ ಮೃಗಾಲಯಗಳ ಸಾಲಿನಲ್ಲಿರುವ ಮೈಸೂರು ಮೃಗಾಲಯದಲ್ಲಿ ದೇಶ–ವಿದೇಶದ 145 ಪ್ರಬೇಧದ 1500ಕ್ಕೂ ಹೆಚ್ಚು ಪ್ರಾಣಿ–ಪಕ್ಷಿಗಳಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಸ್ವಚ್ಛ ಹಾಗೂ ಹಸಿರು ಹೊದಿಕೆಯುಳ್ಳ, ಪ್ರಾಣಿಗಳಿಗೆ ನೈಸರ್ಗಿಕ ವಾತಾವರಣವನ್ನ ಶಕ್ತಿ ಮೀರಿ ಕಲ್ಪಿಸಲಾಗಿದೆ. ಇನ್ನು ಬೇಸಿಗೆಯಲ್ಲಿ ಪ್ರಾಣಿ–ಪಕ್ಷಿ ಸಂತತಿ ಸಂರಕ್ಷಣೆಗೆ ವಿಶೇಷ ಕ್ರಮ ಕೈಗೊಳ್ಳಲಾಗಿದೆ.

ಏರ್ ಕೂಲರ್, ಸ್ಪಿಂಕ್ಲರ್ ಅಳವಡಿಕೆ: ಮೃಗಾಲಯದ ಪ್ರಾಣಿ–ಪಕ್ಷಿಗಳ ಮನೆಗಳು ತಂಪಾಗಿಸಲು ಸ್ಪಿಂಕ್ಲರ್(ವಾಟರ್ ಜೆಟ್) ಅಳವಡಿಕೆ ಸೇರಿದಂತೆ ವಿವಿಧ ಕ್ರಮ ಕೈಗೊಳ್ಳಲಾಗಿದೆ. ಹುಲಿ, ಸಿಂಹ, ಚಿರತೆ, ಆನೆ, ಜಿರಾಫೆ, ಜೀಬ್ರಾ, ಕಾಡೆಮ್ಮೆ, ಸಾಂಬರ್, ಜಿಂಕೆ, ಗೊರಿಲ್ಲಾ, ಚಿಂಪಾಂಜಿ ಇನ್ನಿತರ ಪ್ರಾಣಿಗಳ ಮನೆಯ ಆವರಣ ತಂಪಾಗಿಸಲು ಸ್ಪಿಂಕ್ಲರ್ ಅಳವಡಿಸಲಾಗಿದೆ. ಇದಕ್ಕಾಗಿ ಸುಮಾರು 150ಕ್ಕೂ ಸ್ಪಿಂಕ್ಲರ್‌ಗಳನ್ನು ಅಳವಡಿಸಲಾಗಿದ್ದು, ದಿನಕ್ಕೆ 5–6 ಬಾರಿ ನೀರು ಚಿಮ್ಮಿಸಲಾಗುತ್ತದೆ. ಪ್ರಾಣಿಗಳು ನೀರಿಗೆ ಮೈಯೊಡ್ಡಿ ಹಿತಾನುಭವದೊಂದಿಗೆ ದೇಹ ತಂಪಾಗಿಸಿಕೊಳ್ಳುತ್ತಿವೆ.

ಅಲ್ಲದೆ ಪ್ರಾಣಿಗಳು ವಿಶ್ರಾಂತಿ ಪಡೆಯುವ ಒಳ ಕೊಠಡಿಯಲ್ಲಿ ಏರ್ ಕೂಲರ್ ಅಳವಡಿಸಲಾಗಿದೆ. ಜಿಂಕೆ ಸೇರಿದಂತೆ ಸಸ್ಯಹಾರ ಪ್ರಾಣಿಗಳ ಆವರಣದಲ್ಲಿ ನೀರಿನ ತೊಟ್ಟಿ, ಕೆಸರಿನ ಗುಂಡಿ ನಿರ್ಮಿಸಲಾಗಿದೆ. ಚಿಂಪಾಂಜಿ. ಒರಾಂಗೂಟಾನ ಪ್ರಾಣಿಗಳ ಮನೆ ಬಳಿ ನೀರಿನಿಂದ ತೇವಗೊಂಡ ಗೋಣಿ ಚೀಲ ಹಾಕಲಾಗಿದೆ. ಹಿಮಾಲಯನ್ ಕರಡಿಗೆ ಮಂಜಿನ ಗಡ್ಡೆ (ಐಸ್ ಕ್ಯೂಬ್) ನೀಡಲಾಗುತ್ತಿದೆ. ಅಲ್ಲದೆ, ಪಕ್ಷಿಗಳ ಮನೆಗಳಲ್ಲೂ ನೀರಿನ ಕಾರಂಜಿ (ಫೌಂಟೆನ್), ತೊಟ್ಟಿ ಇರಿಸಲಾಗಿದೆ. ಇದರಿಂದ ಪ್ರಾಣಿ–ಪಕ್ಷಿಗಳು ಬಿಸಿಲಿನಿಂದ ರಕ್ಷಣೆ ಪಡೆದು ಪ್ರವಾಸಿಗರನ್ನು ರಂಜಿಸುತ್ತಿವೆ.

ನೀರಿನಂಶದ ಆಹಾರ ಪೂರೈಕೆ: ಇದೇ ವೇಳೆ ಪ್ರಾಣಿ–ಪಕ್ಷಿಗಳಿಗೆ ನೀಡುತ್ತಿದ್ದ ಆಹಾರ ಪದ್ಧತಿಯಲ್ಲಿ ಮಾರ್ಪಾಡು ಮಾಡಲಾಗಿದ್ದು, ನೀರಿನ ಅಂಶ ಹೆಚ್ಚಾಗಿರುವ ಆಹಾರ ಪದಾರ್ಥಗಳನ್ನು ನೀಡಲಾಗುತ್ತಿದೆ. ಕೆಲವು ಪ್ರಾಣಿಗಳಿಗೆ ಎಳನೀರು, ಮತ್ತೆ ಕೆಲವು ಪ್ರಾಣಿಗಳಿಗೆ ಕಲ್ಲಂಗಡಿ, ಕರ್ಬೂಜ ಹಣ್ಣು ನೀಡಲಾಗುತ್ತಿದೆ. ಇನ್ನು ಕೆಲವಕ್ಕೆ ಸೊಪ್ಪು–ತರಕಾರಿ ನೀಡುವ ಮೂಲಕ ದೇಹದಲ್ಲಿನ ನೀರಿನ ಅಂಶ ಬೇಸಿಗೆಯಲ್ಲಿ ಕುಗ್ಗದಂತೆ ನೋಡಿಕೊಳ್ಳಲಾಗುತ್ತಿದೆ.

ಪಶುವೈದ್ಯರಿಂದ ಕಣ್ಗಾವಲು: ಸಾಮಾನ್ಯವಾಗಿ ಬೇಸಿಗೆ ಬೇಗೆಯಲ್ಲಿ ಪ್ರಾಣಿ–ಪಕ್ಷಿಗಳ ವರ್ತನೆ ಮತ್ತು ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ ಇದೆ. ದೇಹದಲ್ಲಿರುವ ನೀರಿನ ಅಂಶ ಕ್ಷೀಣಿಸಿ ಅನಾರೋಗ್ಯಕ್ಕೆ ತುತ್ತಾಗಬಹುದು. ಅಲ್ಲದೆ, ಮಂಕಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪ್ರತಿದಿನ ಎಲ್ಲಾ ಪ್ರಾಣಿ–ಪಕ್ಷಿಗಳ ಮೇಲೆ ನಿಗಾ ಇಡುವಂತೆ ಪಶು ವೈದರಿಗೆ ಸೂಚನೆ ನೀಡಲಾಗಿದೆ. ಇದರಿಂದ ಪ್ರಾಣಿಗಳ ಆರೋಗ್ಯದ ಮೇಲೆ ಸಣ್ಣಪುಟ್ಟ ಬದಲಾವಣೆ ಕಂಡರೂ ತುರ್ತಾಗಿ ಅಗತ್ಯ ಚಿಕಿತ್ಸೆ ನೀಡುವುದಕ್ಕೆ ಪಶುವೈದ್ಯರ ತಂಡ ಕಾರ್ಯಾಚರಿಸಲಿದೆ.

ಪ್ರಾಣಿ–ಪಕ್ಷಿಗಳ ರಕ್ಷಣೆಗೆ ಅಗತ್ಯ ಕ್ರಮ



ಮೃಗಾಲಯದಲ್ಲಿರುವ ಎಲ್ಲಾ ಪ್ರಾಣಿ–ಪಕ್ಷಿಗಳನ್ನು ಬೇಸಿಗೆ ಬಿರು ಬಿಸಿಲಿಂದ ರಕ್ಷಿಸಲು ಹಲವು ಕ್ರಮ ಕೈಗೊಳ್ಳಲಾಗಿದೆ. ಒಟ್ಟು 150ಕ್ಕೂ ಹೆಚ್ಚು ಸ್ಪಿಂಕ್ಲರ್(ವಾಟರ್ ಜೆಟ್) ಅಳವಡಿಸಲಾಗಿದೆ. ಆಗಾಗ ನೀರು ಚಿಮ್ಮಿಸುವ ಮೂಲಕ ಪ್ರಾಣಿಗಳ ಮನೆ ತಂಪಾಗಿಸಲಾಗುತ್ತಿದೆ. ನೀರಿನ ಅಂಶವುಳ್ಳ ಆಹಾರ ಪದಾರ್ಥ ನೀಡಲಾಗುತ್ತಿದೆ. ಏರ್ ಕೂಲರ್, ಐಸ್ ಕ್ಯೂಬ್, ಫೌಂಟೇನ್, ನೀರಿನ ತೊಟ್ಟಿ, ಕೆಸರು ಗುಂಡಿಯನ್ನು ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಅವುಗಳ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ. **–ಪಿ.ಅನುಷ, ಕಾರ್ಯನಿರ್ವಾಹಕ ನಿರ್ದೇಶಕರು, ಮೈಸೂರು ಮೃಗಾಲಯ.**

ವಿ.ಶ್ರೀನಿವಾಸಪ್ರಸಾದ್ ಸ್ಮಾರಕ ನಿರ್ಮಾಣ ಕಾರ್ಯ ವೀಕ್ಷಣೆ....



ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ವಿ.ಶ್ರೀನಿವಾಸಪ್ರಸಾದ್ ಅವರ ಸ್ಮಾರಕ ನಿರ್ಮಾಣ ಕಾರ್ಯವನ್ನು ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಪ್ರಸಾದ್ ಅವರ ಪುತ್ರಿ ಪ್ರತಿಮಾ ಪ್ರಸಾದ್, ಸಹೋದರ ವಿ.ರಾಮಸ್ವಾಮಿ, ಮಾಜಿ ಮೇಯರ್ ಪುರುಷೋತ್ತಮ್, ಪ್ರಕಾಶಕ ಭರತ್ ರಾಮಸ್ವಾಮಿ ಇನ್ನಿತರರು ವೀಕ್ಷಿಸಿದರು. ಈ ವೇಳೆ ಪ್ರೊ.ನೀಲಗಿರಿ ತಳವಾರ್, ಪಾಲಿಕೆ ಮಾಜಿ ಸದಸ್ಯೆ ಪಲ್ಲವಿ ಬೇಗಂ, ಆದಿ ಕರ್ನಾಟಕ ಮಹಾಸಂಸ್ಥೆ ಅಧ್ಯಕ್ಷ ಸುನಿಲ್, ಮುಖಂಡರಾದ ಆರ್.ಸಿ.ಮಹೇಶ್, ನಾಗರಾಜ್ ಬಿಲ್ಲಯ್ಯ, ಕೆಪಿಸಿಸಿ ಸದಸ್ಯ ಭಾಸ್ಕರ್, ಪ್ರಸಾದ್ ಅಭಿಮಾನಿ ಬಳಗದ ಅಧ್ಯಕ್ಷ ಪಿ.ನಂದಕುಮಾರ್, ಕಾರ್ಯದರ್ಶಿ ವೆಂಕಟರಾಜು, ಮುಡಾ ಮಾಜಿ ಸದಸ್ಯ ಸಿ.ಜಿ.ಶಿವಕುಮಾರ್, ಡಾ.ಮುಳ್ಳೂರು ನಂಜುಂಡಸ್ವಾಮಿ, ಜೆ.ರವಿ, ಶಿವಸ್ವಾಮಿ, ಸುರೇಶ್, ಶ್ರೀಧರ್, ಪುಟ್ಟರಾಜು, ಗೋವರ್ಧನ್, ಎಂ.ರಮೇಶ್, ಪ್ರಸಾದ್ ಇನ್ನಿತರ ಮುಖಂಡರು ಇದ್ದರು.

ಶಿವಪುರದಲ್ಲಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ...



ಕೆ.ಆರ್.ಕ್ಷೇತ್ರದ ವಾರ್ಡ್ ನಂ.65ರ ವ್ಯಾಪ್ತಿಯ ಶಿವಪುರ ಗ್ರಾಮದಲ್ಲಿ 180 ಲಕ್ಷ ರೂ. ವೆಚ್ಚದಲ್ಲಿ ಸಿ.ಸಿ ಬಾಕ್ಸ್ ಡ್ರೈನ್ ಹಾಗೂ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ವಾರ್ಡ್ ಅಧ್ಯಕ್ಷ ಸತೀಶ್, ನಗರಪಾಲಿಕೆ ಮಾಜಿ ಸದಸ್ಯೆ ಗೀತಾ ಯೋಗಾನಂದ, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲ್‌ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಬಿಜೆಪಿ ಮುಖಂಡರಾದ ಗಿರೀಶ್ ಗೌಡ, ಜಯಂತಿ, ಯೋಗಾನಂದ, ಪ್ರದೀಪ್ ಕುಮಾರ್, ಗ್ರಾಮದ ಯಜಮಾನರಾದ ಎಚ್.ಮಾದಯ್ಯ, ಗಂಗಾಧರ್, ಭರತ್, ನಾಗರಾಜು, ಮಲ್ಲಿಕಾರ್ಜುನಸ್ವಾಮಿ, ಹರ್ಷ ಹಾಗೂ ನಿರ್ಮಿತಿ ಕೇಂದ್ರದ ಅಧಿಕಾರಿಗಳಾದ ಮಹೇಶ್, ಮೇಘರಾಜ್ ಇನ್ನಿತರರು ಉಪಸ್ಥಿತರಿದ್ದರು.

ಯುದ್ಧದ ಕಾರಣ ಎಲ್‌ಪಿಜಿ ಗ್ಯಾಸ್ ಸಿಗದಿದ್ದರೆ ಸೌದೆ ಒಲೆಯಲ್ಲಿ ಆಹಾರ ತಯಾರಿಸಿ ಹೋಟೆಲ್ ಮಾಲೀಕರಿಗೆ ನಾರಾಯಣಗೌಡ ಸಲಹೆ

ಮೈಸೂರು, ಮಾ.7(ಬಿಎಲ್‌ಯು)–ಅಡುಗೆ ಅನಿಲ ಸಿಲಿಂಡರ್ ಸರಬರಾಜಿನಲ್ಲಿ ತೀವ್ರ ವ್ಯತ್ಯಯವಾದರೆ ಸೌದೆ ಒಲೆಯಲ್ಲಿ ಆಹಾರ ತಯಾರಿಸಲು ಹೋಟೆಲ್ ಮಾಲೀಕರು ಮಾನಸಿಕವಾಗಿ ಸಿದ್ಧರಾಗಿ ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ ಸಲಹೆ ನೀಡಿದ್ದಾರೆ.



ನಾರಾಯಣ ಗೌಡ

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಎಲ್‌ಪಿಜಿ ಇಲ್ಲದೆ 45 ವರ್ಷಗಳ ಹಿಂದೆ ಹೋಟೆಲ್ ಉದ್ಯಮವನ್ನು ಸೌದೆ ಒಲೆ, ಹೊಟ್ಟಿನ ಒಲೆ, ಇದ್ದಿಲು ಮೂಲಕ ನಿರ್ವಹಿಸಲಾಗುತ್ತಿತ್ತು. 60 ವರ್ಷಗಳ ಹಿಂದೆ ವಿದ್ಯುತ್ ಇಲ್ಲದೆ ಇದ್ದಾಗ ಇಡ್ಲಿ, ದೋಸೆ ಸೇರಿದಂತೆ ಎಲ್ಲವನ್ನು ಕೈಯಲ್ಲೇ ರುಬ್ಬಲಾಗುತ್ತಿತ್ತು. ಅಂದು ಲಾಟಿನ್ ಬೆಳಕಲ್ಲಿ ಹೋಟೆಲ್ ನಡೆಸಲಾಗುತ್ತಿತ್ತು. ಬಾವಿಯಿಂದ ನೀರು ಸೇದಿ ಉಪಯೋಗಿಸಲಾಗುತ್ತಿತ್ತು ಎಂದು ತಿಳಿಸಿದ್ದಾರೆ. ಯುದ್ಧದ ಕಾರಣ ಅಡುಗೆ ಅನಿಲ ಸಿಲಿಂಡರ್ ಸರಬರಾಜು ಸ್ಥಗಿತವಾದರೆ ಪರ್ಯಾಯ ವ್ಯವಸ್ಥೆಯಾಗಿ ವಿದ್ಯುತ್ ಒಲೆ, ಸೌದೆ ಒಲೆಗಳನ್ನು ಅಳವಡಿಸಿಕೊಂಡು ಆಹಾರ ತಯಾರಿಸಬೇಕಾಗಿದೆ. ಇದೊಂದೇ ತಾತ್ಕಾಲಿಕ ಮಾರ್ಗವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಏನೇ ಆದರೂ ಮಧ್ಯ ಪ್ರಾಚ್ಯ ಯುದ್ಧದ ಹೆಸರಲ್ಲಿ ವಾಣಿಜ್ಯ 19 ಕೆ.ಜಿ. ಸಿಲಿಂಡರ್ ಬೆಲೆ ಏಕಾಏಕಿ 145 ರೂ.ಗೆ ಹೆಚ್ಚಳ ಮಾಡಿರುವುದು ಸರಿಯಲ್ಲ ಎಂದು ಬೇಸರಿಸಿದ್ದಾರೆ.

ರೇಷ್ಮೆ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿಚಾರ; ಹೋರಾಟಗಾರರಿಂದ ಹಲವು ನಿರ್ಣಯ

ಮಾ.15ರೊಳಗೆ ಕ್ರೀಡಾಂಗಣ ನಿರ್ಮಾಣ ನಿರ್ಧಾರ ಕೈಬಿಡದಿದ್ದರೆ ಹೋರಾಟ ತೀವ್ರ

ಮೈಸೂರು, ಮಾ.7 (ಪಿಎಂ)–ಟಿ.ನರಸೀಪುರ ಫಿಲೇಚರ್ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವ ಸರ್ಕಾರದ ನಿರ್ಧಾರ ಸಂಬಂಧ ನಡೆದ ಬೆಳವಣಿಗೆ ಕುರಿತು ಕಾರ್ಖಾನೆ ಕಾರ್ಮಿಕರ ಮುಷ್ಕರ ಬೆಂಬಲಿಸಿದ ವಿವಿಧ ಸಂಘಟನೆಗಳ ಪ್ರಮುಖರು ಸಭೆ ಸೇರಿ ಚರ್ಚಿಸಿ ಕೆಲ ನಿರ್ಣಯಗಳನ್ನು ಕೈಗೊಳ್ಳಲಾಗಿದೆ ಎಂದು 'ಪರಿಸರಕ್ಕಾಗಿ ನಾವು' ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ತಿಳಿಸಿದ್ದಾರೆ.

ತಾಂತ್ರಿಕ ವರದಿ ಆಧರಿಸಿ ಕ್ರೀಡಾಂಗಣ ನಿರ್ಮಾಣದ ನಿರ್ಧಾರವನ್ನು ಮರುಪರಿಶೀಲನೆ ಮಾಡುವುದಾಗಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರು ಹೋರಾಟಗಾರರಿಗೆ ನೀಡಿರುವ ಭರವಸೆಯು ಸ್ವಾಗತಾರ್ಹ. ಡಾ.ಯತೀಂದ್ರ ಮತ್ತು ಕೆಎಸ್‌ಐಸಿ ಎಂಡಿ ಅವರು ನೀಡಿರುವ ಭರವಸೆಯನ್ನು ನಂಬಿ ಇಂದಿನಿಂದ ಕೆಲಸಕ್ಕೆ ಹಾಜರಾಗಿರುವ ಕಾರ್ಮಿಕರು, ಕ್ರೀಡಾಂಗಣ ಕೈಬಿಡುವ ನಿರ್ಧಾರವು ಅಧಿಕೃತವಾಗಿ ಪ್ರಕಟವಾಗುವ ತನಕ, ಪ್ರತಿಭಟನೆಯ ಸಂಕೇತವಾಗಿ ತೋಳಿಗೆ ಕಪ್ಪು ಪಟ್ಟಿ ಧರಿಸಿ ಕೆಲಸ ಮಾಡಬೇಕು ಮತ್ತು ಹೆಚ್ಚುವರಿ ಕೆಲಸ (ಓವರ್ ಟೈಮ್) ಮಾಡುವುದನ್ನು ನಿರಾಕರಿಸಬೇಕು ಎಂದು ತೀರ್ಮಾನಿಸಲಾಯಿತು.



ಸಭೆಯಲ್ಲಿ ಚರ್ಚಿಸುತ್ತಿರುವ ಹೋರಾಟಗಾರರು.

ಕಾರ್ಮಿಕರ ಮುಷ್ಕರ ಬೆಂಬಲಿಸಿದ್ದ ಸಂಘಟನೆಗಳು ವಿವಿಧ ರೀತಿಯಲ್ಲಿ ಸರ್ಕಾರದ ಮೇಲೆ ಒತ್ತಡ ಹಾಕುವುದನ್ನು ಮುಂದುವರಿಸಬೇಕು. ಕ್ರೀಡಾಂಗಣ ನಿರ್ಮಾಣ ನಿರ್ಧಾರವನ್ನು ಮಾರ್ಚ್ 15ರೊಳಗೆ ಸರ್ಕಾರ ಕೈಬಿಡದಿದ್ದರೆ ಪರಿಸರ ಸಂಘಟನೆಗಳು, ರೈತ ಸಂಘಟನೆಗಳು, ದಲಿತ ಸಂಘಟನೆಗಳು, ಕನ್ನಡಪರ ಸಂಘಟನೆಗಳು, ಪ್ರಗತಿಪರ ಸಂಘಟನೆಗಳ ಜೊತೆಗೂಡಿ ತೀವ್ರ ಸ್ವರೂಪದ ಹೋರಾಟ ರೂಪಿಸಲು ನಿರ್ಧಾರ ಕೈಗೊಳ್ಳಲಾಯಿತು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಕಿರಗಸೂರು ಶಂಕರ್, ಕಬ್ಬು ಬೆಳೆಗಾರರ ಸಂಘದ ಮುಖಂಡರಾದ ಪ್ರಸಾದ್ ನಾಯಕ್, ದೇವನೂರು ವಿಜಯೇಂದ್ರ, ಯೋಗೇಶ್, ಮಹೇಶ್, ಮಹದೇವಸ್ವಾಮಿ, ರಾಜ್ಯ ರೈತ ಸಂಘದ ಮುಖಂಡರಾದ ಕರೋಹಟ್ಟಿ ಕುಮಾರಸ್ವಾಮಿ, ಬೂದಳ್ಳಿ ಶಂಕರ್, ಶಾಂತಕುಮಾರ್ ಕೊತ್ತೆಗಾಲ, ರಾಜು, ಮಹದೇವ, ಪರಿಸರಕ್ಕಾಗಿ ನಾವು ಸಂಘಟನೆಯ ಬಾನು ಪ್ರಶಾಂತ್, ಗಂಟಯ್ಯ, ವಿಶ್ವನಾಥ್, ಸಿಂಧುವಳ್ಳಿ ಅಕ್ಬರ್ ಮತ್ತಿತರರಿದ್ದರು.

ಬಸವ ಜಯಂತಿ ಆಚರಣೆ ಸಂಬಂಧ ಪೂರ್ವಭಾವಿ ಸಭೆ

ಮೈಸೂರು, ಮಾ.7– ಬಸವ ಬಳಗಗಳ ಒಕ್ಕೂಟದ ಆಶ್ರಯದಲ್ಲಿ ನಡೆಯಲಿರುವ ಬಸವ ಜಯಂತಿ–2026 ಕಾರ್ಯಕ್ರಮದ ಅಂಗವಾಗಿ ಸಾಂಸ್ಕೃತಿಕ ನಾಯಕ ಬಸವಣ್ಣ ಶೀರ್ಷಿಕೆಯಲ್ಲಿ ಸ್ಮರಣ ಸಂಚಿಕೆಯನ್ನು ಹೊರತರಲು ಸಮಿತಿಯನ್ನು ರಚಿಸಲಾಗಿದೆ.

ಸಭೆಯಲ್ಲಿ ಸ್ಮರಣ ಸಂಚಿಕೆಯನ್ನು ಸಮಗ್ರವಾಗಿ ಸಿದ್ಧಪಡಿಸುವ ಕುರಿತು ವಿವಿಧ ವಿಚಾರಗಳನ್ನು ಚರ್ಚಿಸಲಾಯಿತು. ಈ ಸ್ಮರಣ ಸಂಚಿಕೆಯ ಪ್ರಧಾನ ಸಂಪಾದಕರಾಗಿ ಡಾ. ಎಸ್.ಶಿವರಾಜಪ್ಪ ಅವರನ್ನು ನಿಯೋಜಿಸಲಾಗಿದೆ. ಸಂಪಾದಕರಾಗಿ ಡಾ. ಹೆಚ್.ಟಿ. ಶೈಲಜಾ ಹಾಗೂ ಡಾ. ಜಯಪ್ಪ ಹೊನ್ನಾಳಿ ಅವರನ್ನು ಆಯ್ಕೆ ಮಾಡಲಾಗಿದೆ. ಜೊತೆಗೆ ಸಂಪಾದಕ ಸಮಿತಿಯಲ್ಲಿ ಪ್ರೊ. ಮೊರಬದ ಮಲ್ಲಿಕಾರ್ಜುನ, ಪ್ರೊ. ಡಿ.ಎಸ್. ಸದಾಶಿವಮೂರ್ತಿ, ಪ್ರಕಾಶಕರಾದ ಡಿ. ಎನ್. ಲೋಕಪ್ಪ, ಡಾ. ಸುದೀಪ್, ಹೊನ್ನಶೆಟ್ಟಿ ಹಾಗೂ ವಿಶ್ವನಾಥ್ ಇದ್ದಾರೆ.



ಬಸವ ಜಯಂತಿ ಆಚರಣೆ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಗಣ್ಯರು ಭಾಗಿ.

ಸಭೆಯಲ್ಲಿ ಬಸವ ಜಯಂತಿ–2026ರ ಅಧ್ಯಕ್ಷ ಎಂ. ಚಂದ್ರಶೇಖರ್ ಉಪಸ್ಥಿತರಿದ್ದು, ಸಾಂಸ್ಕೃತಿಕ ನಾಯಕ ಬಸವಣ್ಣ ಸ್ಮರಣ ಸಂಚಿಕೆಯನ್ನು ಅರ್ಥಪೂರ್ಣ ಹಾಗೂ ಸಮಗ್ರವಾಗಿ ಸಿದ್ಧಪಡಿಸುವ ನಿಟ್ಟಿನಲ್ಲಿ ಅಗತ್ಯವಾದ ರೂಪುರೇಷೆಗಳು, ವಿಷಯ ವಿನ್ಯಾಸ ಹಾಗೂ ಪ್ರಕಟಣೆ ಸಂಬಂಧಿತ ವಿಚಾರಗಳ ಬಗ್ಗೆ ಚರ್ಚಿಸಲಾಯಿತು. ಬಸವಣ್ಣರ ಚಿಂತನೆಗಳು, ಸಮಾಜಮುಖಿ ಸಂದೇಶಗಳು ಮತ್ತು ಸಾಂಸ್ಕೃತಿಕ ನಾಯಕತ್ವವನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಈ ಸ್ಮರಣ ಸಂಚಿಕೆಯನ್ನು ಪ್ರಕಟಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ತಿ.ನರಸೀಪುರದ ಕೆಎಸ್‌ಐಸಿಯಲ್ಲಿ ಕ್ರೀಡಾಂಗಣದಿಂದ ತೊಂದರೆಯಾದರೆ ಬೇರೆ ಜಾಗ ಹುಡುಕುತ್ತೇವೆ

ಮೈಸೂರಿನ ಪಿಲ್ಲಹಳ್ಳಿಯಲ್ಲಿ ಡಾ. ಯತೀಂದ್ರ ಸ್ಪಷ್ಟನೆ

ಮೈಸೂರು, ಮಾ.7(ಬಿಎಲ್‌ಯು)–ತಿ.ನರಸೀಪುರದ ಕೆಎಸ್‌ಐಸಿ ರೇಷ್ಮೆ ನೂಲು ತೆಗೆಯುವ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಿದರೆ ತೊಂದರೆ ಆಗುತ್ತದೆ ಎಂದು ಅಧಿಕಾರಿಗಳಿಂದ ವರದಿ ಬಂದರೆ ಕ್ರೀಡಾಂಗಣಕ್ಕೆ ಬೇರೆ ಜಾಗ ಹುಡುಕುತ್ತೇವೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸ್ಪಷ್ಟಪಡಿಸಿದರು.



ಮೈಸೂರಿನ ವರುಣ ವಿಧಾನಸಭಾ ಕ್ಷೇತ್ರದ ಪಿಲ್ಲಹಳ್ಳಿಯಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕ್ರೀಡಾಂಗಣ ನಿರ್ಮಾಣ ಮಾಡಿದರೆ ತೊಂದರೆ ಆಗುತ್ತದೆಯೇ ಎಂಬ ಬಗ್ಗೆ ಪರಿಶೀಲಿಸಿ ತಾಂತ್ರಿಕ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ ಎಂದರು.

ಒಂದು ವೇಳೆ ಕ್ರೀಡಾಂಗಣದಿಂದ ತೊಂದರೆ ಆಗುತ್ತದೆ ಎಂದು ಅಧಿಕಾರಿಗಳಿಂದ ತಾಂತ್ರಿಕ ವರದಿ ಬಂದರೆ ಕ್ರೀಡಾಂಗಣಕ್ಕೆ ಬೇರೆ ಜಾಗ ಹುಡುಕುತ್ತೇವೆ ಎಂದು ಯತೀಂದ್ರ ಹೇಳಿದರು.

ಆದರೆ ಯಾವುದೇ ಕಾರಣಕ್ಕೂ ಕೆಎಸ್‌ಐಸಿ ರೇಷ್ಮೆ ನೂಲು ತೆಗೆಯುವ ಕಾರ್ಖಾನೆಯನ್ನು ಮುಚ್ಚುವುದಿಲ್ಲ. ಈ ಕಾರ್ಖಾನೆಯಲ್ಲಿ ನಮ್ಮ ಕ್ಷೇತ್ರದವರೇ ಹೆಚ್ಚಾಗಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ನಾವೇಕೆ ಕಾರ್ಖಾನೆ ಮುಚ್ಚುತ್ತೇವೆ ಎಂದು ಪ್ರಶ್ನಿಸಿದರು.

ಆದರೆ ಈ ವಿಚಾರದಲ್ಲಿ ಕೆಲವರು ಸುಳ್ಳು ಮಾಹಿತಿ ನೀಡಿ, ವದಂತಿ ಹರಡಿ ಜನರಲ್ಲಿ ಗೊಂದಲ ಉಂಟು ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ನಮಗೆ ಕಾರ್ಖಾನೆಯೂ ಮುಖ್ಯ, ಕ್ರೀಡಾಂಗಣವೂ ಮುಖ್ಯ. ಆದರೆ ಕ್ರೀಡಾಂಗಣದ ಉದ್ದೇಶಕ್ಕಾಗಿ ಕಾರ್ಖಾನೆಯನ್ನು ಎಂದಿಗೂ ಮುಚ್ಚುವುದಿಲ್ಲ ಎಂದು ಡಾ. ಯತೀಂದ್ರ ಪುನರ್ ಸ್ಪಷ್ಟಪಡಿಸಿದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಮಾ.8ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ದಟ್ಟಗಳ್ಳಿ 3ನೇ ಹಂತ, ತ್ರಿವೇಣಿ ಸೂಪರ್ ಮಾರ್ಕೆಟ್ ಏರಿಯಾ, ಕದಂಬ ಬೇಕರಿ ಏರಿಯಾ, ದಟ್ಟಗಳ್ಳಿ 'ಐ' ಬ್ಲಾಕ್, ಮುಡಾ ಎಂಪ್ಲಾಯಿಸ್ ಲೇಔಟ್, ಸಬ್‌ರಿಜಿಸ್ಟರ್ ಆಫೀಸ್, ಕನಕದಾಸನಗರ, ಆದಿತ್ಯ ಸರ್ಕಲ್, ಸೋಮನಾಥನಗರ, ಮಹಾಲಕ್ಷ್ಮೀ ಬಡಾವಣೆ ಕೇರ್ಗಳ್ಳಿ, ಕಲ್ಕಿ ಬಡಾವಣೆ, ನಂದಿ ಸರ್ಕಲ್ ದಟ್ಟಗಳ್ಳಿ, ಜೋಡಿ ಬೇವಿನಮರ ದಟ್ಟಗಳ್ಳಿ, ರಾಮಕೃಷ್ಣನಗರ, ಆರ್.ಟಿನಗರ, ಲಿಂಗಾಂಬುದಿಪಾಳ್ಯ, ಯೂನಿವರ್ಸಿಟಿ ಲೇಔಟ್, ವಾಸು ಲೇಔಟ್, ಕೆ.ಬ್ಲಾಕ್ ಆರ್.ಕೆ.ನಗರ, ಮೂಗನಹುಂಡಿ, ನಗರ್ತಹಳ್ಳಿ, ದೇವಗಳ್ಳಿ, ಬಲ್ಲಳ್ಳಿ, ಅನಗಳ್ಳಿ, ತಿಬ್ಬಯ್ಯನಹುಂಡಿ, ಬೀರಿಹುಂಡಿ ಐ.ಪಿ ಲಿಮಿಟ್ಸ್ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನಾಳೆ ಚಿ.ಉದಯಶಂಕರ್ ನೆನಪು 'ಜೊತೆಯಾಗಿ ಹಿತವಾಗಿ' ಸಂಗೀತ ಸಂಜೆ ಕಾರ್ಯಕ್ರಮ

ಮೈಸೂರು, ಮಾ.7–ಮಾ.9ರಂದು ಸಂಜೆ 4.30ಕ್ಕೆ ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ 'ಚಿ ಉದಯಶಂಕರ್ ನೆನಪು' ಕಾರ್ಯಕ್ರಮದಡಿಯಲ್ಲಿ ಜನಪ್ರಿಯ ಗೀತೆಗಳ 'ಜೊತೆಯಾಗಿ ಹಿತವಾಗಿ' ಕನ್ನಡ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹಾಗೂ ಸಂಸ್ಕೃತಿ ಚಿಂತಕರಾದ ಡಾ. ರಘುರಾಮ್ ವಾಜಪೇಯಿ ಭಾಗವಹಿಸಲಿದ್ದಾರೆ.

ಪ್ರಸಕ್ತ ಬಜೆಟ್ ಸಿದ್ದರಾಮಯ್ಯರ ಇದುವರೆಗಿನ ಅತ್ಯುತ್ತಮ ಬಜೆಟ್

● ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಬಣ್ಣನೆ ● ಮೈಸೂರಿಗೆ 41 ಯೋಜನೆ ಕೊಡುಗೆ

ಮೈಸೂರು, ಮಾ.7(ಎಂಟಿವೈ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 17ನೇ ಬಜೆಟ್ ದೂರದೃಷ್ಟಿಯುಳ್ಳ ಸಾಮಾಜಿಕ ನ್ಯಾಯದಿಂದ ಕೂಡಿದ ಬಜೆಟ್ ಆಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಬಣ್ಣಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಇದುವರೆಗೂ ನೀಡಿರುವ ಬಜೆಟ್‌ಗಳಿಗಿಂತ ಈ 17ನೇ ಬಜೆಟ್ ಬಹಳ ತೃಪ್ತಿಕರ ವಾಗಿದೆ ಎಂದು ಸ್ವತಃ ಸಿಎಂ ಸಿದ್ದರಾಮಯ್ಯ ಅವರೇ ಹೇಳಿದ್ದಾರೆ. ಎಲ್ಲಾ ಜನರ ಶ್ರೇಯೋಭಿವೃದ್ಧಿಯ, ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಬಜೆಟ್ ಆಗಿದೆ.



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಇಂತಹ ಅತ್ಯುತ್ತಮ ಬಜೆಟ್‌ನಿಂದಾಗಿ ಕಂಗೆಟ್ಟಿರುವ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣ ಸ್ವಾಮಿ ಬಿಜೆಪಿ ಇತರ ನಾಯಕರು ಸಿದ್ದರಾಮಯ್ಯ ಅವರ ಜನಪ್ರಿಯತೆ ಸಹಿಸದೆ ಪ್ರಚಾರಕ್ಕಾಗಿ ಚೊಂಬು ಹಿಡಿದು ಪ್ರತಿಭಟಿಸಿದ್ದಾರೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಟ್ಟಿರುವ ಚೊಂಬನ್ನು ಇದೀಗ ಬಿಜೆಪಿ ನಾಯಕರು ಪ್ರದರ್ಶಿಸಿದ್ದಾರೆ ಎಂದು ಲೇವಡಿ ಮಾಡಿದ್ದಾರೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಎರಡು ರೈಲನ್ನು ನೀಡಿರುವುದು ಬಿಟ್ಟರೆ ಬೇರೆ ಏನು ಕೊಟ್ಟಿಲ್ಲ. ಕೇಂದ್ರ ಸರ್ಕಾರ ರಾಜ್ಯಕ್ಕೆ ಏನು ನೀಡದೇ ಬರಿ ಚೊಂಬು ಕೊಟ್ಟರು. ಆ ಚೊಂಬನ್ನೇ ರಾಜ್ಯದ ಬಿಜೆಪಿ ನಾಯಕರು ಪ್ರದರ್ಶನ ಮಾಡುತ್ತಿದ್ದರು. ಬಿಜೆಪಿ ಅವರು ಮೊದಲು ಜಿಡಿಪಿ ಎಂದರೇನು, ರಾಜ್ಯದ ಜಿಡಿಪಿ ಎಷ್ಟು ಎಂದು ತಿಳಿದುಕೊಳ್ಳಬೇಕು ಎಂದರು.

ಮೈಸೂರಿಗೆ 41 ಯೋಜನೆ: ಸಿಎಂ ಸಿದ್ದರಾಮಯ್ಯ ಅವರು ಅದ್ಭುತವಾದ ಕಾರ್ಯಕ್ರಮಗಳನ್ನು ರಾಜ್ಯಕ್ಕೆ ಹಾಗೂ ಮೈಸೂರು ಜಿಲ್ಲೆಗೆ ಕೊಟ್ಟಿದ್ದಾರೆ. ಎಲ್ಲಾ ಸಮಾಜದವರಿಗೆ ಅನುಕೂಲವಾಗಲೆಂದು ಸುಮಾರು 2 ರಿಂದ 3 ತಿಂಗಳು ಕಾಲ ಬಜೆಟ್ ತಯಾರಿಸಿದ್ದಾರೆ. ಮೈಸೂರು ನಗರಕ್ಕೆ ಈ ಬಾರಿ 27 ಯೋಜನೆಗಳನ್ನು ಕೊಟ್ಟಿದ್ದಾರೆ. ತಾಲೂಕುಗಳಿಗೆ 15 ಯೋಜನೆಗಳನ್ನು ಕೊಟ್ಟಿದ್ದಾರೆ. ಹೀಗಾಗಿ ಒಟ್ಟು 41 ಯೋಜನೆಗಳು ಮೈಸೂರಿಗೆ ಕೊಟ್ಟಿದ್ದಾರೆ. ಇದೊಂದು ಐತಿಹಾಸಿಕ ಎಂದರು.

> **ನರೇಂದ್ರ ಮೋದಿ ಅವರು ಪ್ರಧಾನಮಂತ್ರಿ ಆಗುವ ಮುನ್ನ ಇದ್ದ 53 ಲಕ್ಷ ಕೋಟಿ ರೂ. ಸಾಲವನ್ನು 2014ರಿಂದ 2026ರ ಮಾರ್ಚ್‌ವರೆಗೆ 218 ಲಕ್ಷ ಕೋಟಿಗೆ ಹೆಚ್ಚಳ ಮಾಡಿದ್ದಾರೆ. ಸಿದ್ದರಾಮಯ್ಯ ಅವರು 2 ಲಕ್ಷದ 85 ಸಾವಿರ ಕೋಟಿ ಸಾಲ ಮಾಡಿದ್ದಾರೆ. ಆದರೆ ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ 3 ಲಕ್ಷ ಕೋಟಿ ಸಾಲ ಮಾಡಿತ್ತು. ಒಟ್ಟಾರೆ ಬಜೆಟ್ ಗಾತ್ರದ ಶೇ.25ರವರೆಗೂ ಸಾಲ ಮಾಡಬಹುದು. ಈ ಬಾರಿ ಸಿದ್ದರಾಮಯ್ಯ ಅವರು ಸಾಲ ಮಾಡಬೇಕಿರುವುದು 1 ಲಕ್ಷದ 32 ಸಾವಿರ ಕೋಟಿ. ಇದು ಅದೂ ಶೇ.25ರಷ್ಟೊಳಗಿದೆ.**
> –ಎಂ.ಲಕ್ಷ್ಮಣ್

ಜಿಎಸ್‌ಟಿ ಸಂಗ್ರಹಿಸಿ ನಾವು ರಾಜ್ಯದಿಂದ ಕೇಂದ್ರಕ್ಕೆ 5 ಲಕ್ಷ ಕೋಟಿ ಕಳುಹಿಸುತ್ತಿದ್ದೇವೆ. ರಾಜ್ಯಕ್ಕೆ ಬರಬೇಕಾದ ಪಾಲನ್ನು ನೀಡುತ್ತಿಲ್ಲ. ಹೀಗಾಗಿ ಕೇಂದ್ರ ರಾಜ್ಯದ ಮೇಲೆ ಮಲತಾಯಿ ಧೋರಣೆ ತೋರುತ್ತಿದೆ. ರಾಜ್ಯಕ್ಕೆ ಬರಬೇಕಾದ ಪಾಲನ್ನು ರಾಜ್ಯದ ಬಿಜೆಪಿ ನಾಯಕರು ಮಾಡುತ್ತಿಲ್ಲ. ಮೇಕೆದಾಟು ಯೋಜನೆಗೂ ಅನುಮತಿ ನೀಡುತ್ತಿಲ್ಲ. 12 ವರ್ಷದಲ್ಲಿ ಒಂದೇ ಒಂದು ಡ್ಯಾಂ ಕೂಡ ಬಿಜೆಪಿ ನಿರ್ಮಾಣ ಮಾಡಿಲ್ಲ. ರಾಜ್ಯದಲ್ಲಿ 21 ಡ್ಯಾಂಗಳು ನಿರ್ಮಾಣ ಆಗಿದ್ದು ಕಾಂಗ್ರೆಸ್ ಅವಧಿಯಲ್ಲಿ ಬಿಜೆಪಿಯವರು ಒಂದೇ ಒಂದು ಕೆರೆಯನ್ನು ಕಟ್ಟಿಸಿಲ್ಲ. ಆರ್.ಅಶೋಕ್ ವಿರೋಧ ಪಕ್ಷದ ನಾಯಕ. ಅವರನ್ನು ಸಾಮಾಜಿಕ ಜಾಲ ತಾಣಗಳಲ್ಲಿ ಟ್ರೋಲ್ ಮಾಡುತ್ತಿದ್ದಾರೆ. ಸುಮ್ಮನೆ ಬಾಯಿಗೆ ಬಂದ ಹಾಗೆ ಮಾತಾಡುತ್ತಾರೆ ಎಂದು ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮುಖಂಡ ಎಂ.ಶಿವಣ್ಣ, ಮಾಧ್ಯಮ ವಕ್ತಾರ ಮಹೇಶ್ ಸೇರಿದಂತೆ ಇನ್ನಿತರರು ಇದ್ದರು.

ನಕ್ಕರೆ ಅದೇ ಸ್ವರ್ಗ

ಬ್ಯಾಂಕಿನಿಂದ ತಿಮ್ಮನಿಗೆ ಪತ್ರವೊಂದು ಬಂತು :
'ನಿಮ್ಮ PAN ವಿವರ ತಿಳಿಸಿ'
ತಿಮ್ಮನ ಉತ್ತರ : ಎರಡು ಕಲ್ಕತ್ತಾ ಎಲೆ, ಮೂರು
ಹಾಲಡಿಕೆ, ಚಮನ್, ಯಾಲಕ್ಕಿ, ಲವಂಗ, ಸ್ವಲ್ಪ ಜಾಸ್ತಿ ಗುಲ್ಕನ್...
ಮತ್ತು ಸುಣ್ಣ ಕಡಿಮೆ... ಇಷ್ಟೆ.

ಮೈಸೂರು ಮಿತ್ರ

ಭಾನುವಾರ, ಮಾರ್ಚ್ 8, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತ ವಾಹಿನಿ.........

ಅಂಜದಿರಂಜದಿರು ಹಂದೆ, ಓಡದಿರು ಓಡದಿರು ಹೇಡಿ, ಆಳಿನಾಳು ಕೀಳಾಳು ಬಹರೆ ಹೋಗದಿರು, ಹೋಗದಿರು. –ಕೂಡಲಸಂಗಮದೇವಾ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುಡ್ಡನ್ನು ಕಾದಿಟ್ಟುಕೊಳ್ಳದವನು ಹಣವಂತನು ಹೇಗೆ ಆದಾನು?

ನಿಮ್ಮ ಪತ್ರಗಳು

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಕಾರ್ಯನಿರ್ವಹಿಸದ ಎಸ್ಕಲೇಟರ್



ಮಾನ್ಯರೆ,

ಮೈಸೂರಿನ, ಮುಖ್ಯ ರೈಲ್ವೇ ನಿಲ್ದಾಣದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಇರುವ 'ಎಸ್ಕಲೇಟರ್' ಕೇವಲ ತೋರಿಕೆಗೆ ಮಾತ್ರ ಇದೆ ಎನಿಸುತ್ತದೆ. ಮುಖ್ಯ ರೈಲ್ವೇ ನಿಲ್ದಾಣದ ಒಂದನೇ ಫ್ಲಾಟ್‌ಫಾರ್ಮ್ ಬಿಟ್ಟರೆ ಉಳಿದ ಏಳು ಫ್ಲಾಟ್‌ಫಾರ್ಮ್‌ಗಳಿಗೆ ಪ್ರಯಾಣಿಕರು ಹೋಗಲು, ಹಿರಿಯ ನಾಗರಿಕರು, ಹೆಂಗಸರು, ಮಕ್ಕಳು ಈ ಎಸ್ಕಲೇಟರ್ ಅನ್ನು ಉಪಯೋಗಿಸುತ್ತಾರೆ. ಆದರೆ ದಿನದ ಬಹುಪಾಲು ಸಮಯದಲ್ಲಿ ಈ ಎಸ್ಕಲೇಟರ್ ಚಾಲನೆಯಲ್ಲಿರುವುದಿಲ್ಲ. ಬೆಳಿಗ್ಗೆ ಒಂದೆರಡು ಗಂಟೆಗಳ ಕಾಲ ಮಾತ್ರ ಕಾರ್ಯನಿರ್ವಹಿಸುತ್ತದೆ. ಇದರಿಂದಾಗಿ, ಹಿರಿಯ ನಾಗರಿಕರು, ಮಂಡಿ ನೋವು ಇರುವ ಸಾರ್ವಜನಿಕರು, ಹೆಂಗಸರು, ಚಿಕ್ಕ ಮಕ್ಕಳು ಹಂತಗಳನ್ನು ಹತ್ತೇ ಹೋಗಬೇಕು. ಇದರಿಂದಾಗಿ ಕೆಲವು ಸಲ ರೈಲುಗಳನ್ನು ಸರಿಯಾದ ಸಮಯಕ್ಕೆ ಹಿಡಿಯಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಈ ಎಸ್ಕಲೇಟರ್‌ನ ಕೀ ಇಲ್ಲಿನ ಕಾವಲುಗಾರನ ಬಳಿ ಇರುತ್ತದೆ. ಆತ ಕಾಫಿ –ಟೀಗೆ ಹೋದಾಗ ಈ ಸಮಸ್ಯೆ ಇದೆ ಎನ್ನುತ್ತಾರೆ. ಆದರೆ ಇತ್ತೀಚೆಗೆ ಈ ಎಸ್ಕಲೇಟರ್ ಸರಿಯಾಗಿ ಚಾಲನೆಯಲ್ಲಿರುವುದಿಲ್ಲ. ದಿನದ 24 ಗಂಟೆಯು ಈ ಎಸ್ಕಲೇಟರ್ ಚಾಲನೆಯಲ್ಲಿ ಇರುವಂತೆ ರೈಲ್ವೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಇದು ಭಾರತದ ಅಡುಗೆ ಮನೆ, ಆರ್ಥಿಕತೆ ಮೇಲಿನ ದಾಳಿ

ಮಾನ್ಯರೆ,

ಮಧ್ಯಪ್ರಾಚ್ಯದಲ್ಲಿ ಇರಾನ್ ಸುತ್ತಲಿನ ಯುದ್ಧದ ಕಾರ್ಮೋಡಗಳು ಕೇವಲ ಕ್ಷಿಪಣಿಗಳ ಅಬ್ಬರವಲ್ಲ ಅದು ಭಾರತದ ಅಡುಗೆಮನೆ ಮತ್ತು ಆರ್ಥಿಕತೆಯ ಮೇಲಿನ ದಾಳಿ. ವಿಶ್ವದ ಶೇ. 20ರಷ್ಟು ತೈಲ ಸಂಚಾರದ ನಾಡಿಯಾದ ಹಾರ್ಮುಜ್ ಜಲಸಂಧಿ ಬಂದ್ ಆದರೆ ಭಾರತದ ಶೇ. 80ರಷ್ಟು ಕಚ್ಚಾ ತೈಲದ ಅವಲಂಬನೆ ಅಪಾಯಕ್ಕೆ ಸಿಲುಕಲಿದೆ. ಪ್ರಸ್ತುತ ಬ್ರೆಂಟ್ ತೈಲ ದರ ಬ್ಯಾರೆಲ್‌ಗೆ 73 ಡಾಲರ್ ಆಸುಪಾಸಿನಲ್ಲಿದ್ದು ಯುದ್ಧದ ಕಿಚ್ಚು ಇದನ್ನು 100 ಡಾಲರ್ ದಾಟಿಸಿದರೆ ನಮ್ಮ ವಿತ್ತೀಯ ಕೊರತೆ ಅತಸುತಲವಾಗುವುದು ಖಚಿತ. ಭಾರತವು ರಷ್ಯಾದಿಂದ ಶೇ. 40ರಷ್ಟು ರಿಯಾಯಿತಿ ತೈಲ ಪಡೆಯುತ್ತಿದ್ದರೂ ಇರಾನ್ ಬಿಕ್ಕಟ್ಟು ಸಾಗಾಣಿಕಾ ವೆಚ್ಚವನ್ನು ಶೇ. 30ರಷ್ಟು ಹೆಚ್ಚಿಸಬಹುದು. ಇದು ರೂಪಾಯಿ ಮೌಲ್ಯದ ಕುಸಿತಕ್ಕೆ ಮತ್ತು ಬೆಲೆ ಏರಿಕೆಯ ಸುನಾಮಿಗೆ ನಾಂದಿ ಹಾಡಲಿದೆ. ಇಂದಿನ ಸ್ಥಿತಿ ನಮಗೆ ಇಂಧನ ಸ್ವಾವಲಂಬನೆ ಮತ್ತು ಪರ್ಯಾಯ ಇಂಧನಗಳ ಕಡೆಗೆ ಮುಖ ಮಾಡಲು ನೀಡುತ್ತಿರುವ ಅಂತಿಮ ಎಚ್ಚರಿಕೆ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

ಪ್ರಯೋಜನಕ್ಕೆ ಬಾರದ ಬಸ್ ಪ್ರಯಾಣಿಕರ ತಂಗುದಾಣ



ಮಾನ್ಯರೇ.

ಮೈಸೂರಿನ ಬನ್ನೂರು ರಸ್ತೆಯ ಯರಗನಹಳ್ಳಿ ಸಮೀಪ ಗ್ಯಾಲಕ್ಸಿ ಕನ್ವೆನ್ಷನ್ ಹಾಲ್ ಎದುರು ಈ ಬಸ್ಸು ನಿಲ್ದಾಣವನ್ನು, ಹಲವಾರು ವರ್ಷಗಳ ಹಿಂದೆ ಸ್ಥಳೀಯ ಶಾಸಕರ ಅನುದಾನದಿಂದ ನಿರ್ಮಿಸಿದ್ದು, ತದನಂತರ ರಸ್ತೆ ಅಗಲೀಕರಣವಾದ ನಂತರ ಸದರಿ ಬಸ್ಸು ನಿಲ್ದಾಣವು ಸ್ವಲ್ಪ ಮಟ್ಟಿಗೆ ನೂತನ ರಸ್ತೆಯ ಮಟ್ಟಕ್ಕಿಂತ ಕೆಳಗಿಳಿಯಿತು. ಈ ಬಸ್ಸು ನಿಲ್ದಾಣದಲ್ಲಿ ಯಾವುದೇ ಬಸ್ಸುಗಳು ಸಹ ನಿಲುಗಡೆ ಮಾಡುವುದಿಲ್ಲ. ಹಾಗಾಗಿ ಪ್ರಯಾಣಿಕರು ಈ ಬಸ್ಸು ನಿಲ್ದಾಣಕ್ಕೆ ಬಾರದೇ ಇದರ ಸಮೀಪದಲ್ಲೇ ಇರುವ ಟೆರೇಸಿಯನ್ ಕಾಲೇಜು ವೃತ್ತಕ್ಕೆ ಬಸ್ಸಿಗಾಗಿ ತೆರಳುತ್ತಾರೆ. ಹೀಗೆ ದಿನ ಕಳೆದಂತೆ ಬಸ್ಸು ನಿಲ್ದಾಣವು ಯಾವುದೇ ಪ್ರಯೋಜನಕ್ಕೆ ಬಾರದೇ ಇದ್ದು ಸದರಿ ಬಸ್ಸು ನಿಲ್ದಾಣವು ಇಲ್ಲಿ ಸಂಚರಿಸುವ ಪಾದಚಾರಿಗಳ ತಲೆಯ ಮಟ್ಟಕ್ಕಿದ್ದು ಓಡಾಡಲು ಸಹ ತೊಂದರೆಯಾಗುತ್ತಿದೆ. ಇಲ್ಲಿ ಸ್ವಲ್ಪ ಯಾಮಾರಿದರೂ ಅಪಾಯ ಕಟ್ಟಿಟ್ಟ ಬುತ್ತಿ. ಈಗಾಗಲೇ ಹಲವಾರು ಪಾದಚಾರಿಗಳು ಈ ಬಸ್ಸು ನಿಲ್ದಾಣದಿಂದ ತಲೆಗೆ ಪೆಟ್ಟು ತಿಂದ ಉದಾಹರಣೆ ಸಾಕಷ್ಟಿವೆ. ಹಾಗಾಗಿ ಸದರಿ ಬಸ್ಸು ನಿಲ್ದಾಣವನ್ನು ಸಮೀಪದಲ್ಲಿಯೇ ಇರುವ ಟೆರೇಷಿಯನ್ ಕಾಲೇಜು ವೃತ್ತಕ್ಕೆ ಸ್ಥಳಾಂತರಿಸಿ ಸದರಿ ವೃತ್ತದಲ್ಲಿ ಮಳೆ ಬಿಸಿಲೆನ್ನದೇ ಬಸ್ಸಿಗಾಗಿ ಕಾಯುವ ಪ್ರಯಾಣಿಕರಿಗಾದರೂ ಅನುಕೂಲವಾಗುತ್ತದೆ ಎಂಬುದು ನನ್ನ ಆಶಯ. ಇದರ ಬಗ್ಗೆ ನಗರ ಪಾಲಿಕೆಯ ಹಿರಿಯ ಅಧಿಕಾರಿಗಳು ಗಮನ ಹರಿಸಲಿ.

–ಪ್ರದೀಪ್, ಯರಗನಹಳ್ಳಿ, ಮೈಸೂರು.

ರಸ್ತೆ ಬದಿ ಕಸ ಎಸೆಯುವ ಕೊಳಕು ಜನರು

ಮಾನ್ಯರೆ,

ಕಾರ್ಪೊರೇಷನ್ ಕಸದ ಗಾಡಿಗಳು ಮನೆ ಮನೆಗೆ ಬಂದರೂ ಕಸವನ್ನು ಕೊಡದೆ ರಸ್ತೆ ಬದಿಗಳಲ್ಲಿ ಕಸ ಎಸೆಯುವ ಕೊಳಕು ಜನರೇ ನಿಮ್ಮ ಮನೆ ಸ್ವಚ್ಛವಾದರೆ ಸಾಕೆ, ಪರಿಸರ ಸ್ವಚ್ಛವಿರಬೇಕಲ್ಲವೆ ನೀವು ರಸ್ತೆ ಬದಿ ಕಸ ಎಸೆಯುವುದರಿಂದ ರಸ್ತೆಗಳಲ್ಲಿ ಓಡಾಡುವುದೇ ದುಸ್ತರವಾಗಿದೆ. ನಾಯಿಗಳು ಕಸವನ್ನೆಲ್ಲಾ ಕಿತ್ತು ರಸ್ತೆಯಲ್ಲೆಲ್ಲಾ ಹರಡಿರುತ್ತವೆ. ಪ್ಲಾಸ್ಟಿಕ್‌ಗಳು ಇಡೀ ಬಡಾವಣೆ ತುಂಬೆಲ್ಲಾ ಹಾರಾಡುತ್ತಿವೆ. ಸ್ವಚ್ಛ ನಗರಿ ಮೈಸೂರನ್ನು ಕೊಳಕು ಮಾಡುತ್ತಿದ್ದೀರಿ. ಈ ನಿಮ್ಮ ಕೊಳಕು ಮನಸ್ಥಿತಿಯಿಂದ ಹೊರ ಬಂದು ಕಸದ ಗಾಡಿಗಳು ಬಂದಾಗ ಕಸವನ್ನು ಕೊಟ್ಟು ಮೈಸೂರಿನ ಸ್ವಚ್ಛತೆಗೆ ಸಹಕರಿಸಿ, ಕಾರ್ಪೊರೇಷನ್‌ನವರೂ ಕೂಡ ಆಯಕಟ್ಟಿನ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ಅಂತವರಿಗೆ ದಂಡ ವಿಧಿಸುವ ವ್ಯವಸ್ಥೆ ಮಾಡುವುದು ಸೂಕ್ತ.

–ಬಿ.ಜಿ. ರಂಗೇಗೌಡ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ನಮ್ಮ ನಾಡಿನ ಪುಣ್ಯ ಪುರುಷದ್ವಯರು....


ಕನ್ನಡ ನಾಡು ಕಂಡ ಅಪರೂಪದಲ್ಲಿ ಅಪರೂಪ ಎಂದೆನಿಸುವ ಗುರು ಶಿಷ್ಯ ಪರಂಪರೆಯೊಂದು ಸದ್ದಿಲ್ಲದೆ ನಡೆಯುತ್ತಲೇ ಬಂದಿದೆ. ಎಂತಹವರೂ ಅಚ್ಚರಿ ಪಡುವಂತೆ, ಕಣ್ಣಿದ್ದವರೆಲ್ಲರೂ ಮೂಗಿನ ಮೇಲೆ ಬೆರಳಿಡುವಂತೆ ಹಲವಾರು ಸಾಧನೆಗಳನ್ನು ಮಾಡುತ್ತಲೇ ಜನ ಮಾನಸದಲ್ಲಿ ಶಾಶ್ವತವಾಗಿ ಸ್ಥಾನವನ್ನು ಗಳಿಸಿಕೊಂಡಿರುವ ಆ ಗುರು ಶಿಷ್ಯರು ಪಂಡಿತ ಪಂಚಾಕ್ಷರಿ ಗವಾಯಿ ಮತ್ತು ಪಂಡಿತ ಪುಟ್ಟರಾಜ ಗವಾಯಿಗಳು. ಇಬ್ಬರೂ ಹೊರಕಣ್ಣಿನಿಂದ ಜಗತ್ತನ್ನು ಕಾಣದವರು. ಆದರೆ ಅವರ ಒಳಗಣ್ಣಿನ ಸಹಾಯದಿಂದ ಒಂದು ಅದ್ಭುತ ಲೋಕವನ್ನೇ ಸೃಷ್ಟಿಸಿದವರು. ಆ ಭಗವಂತ ನೀಡಿದ ಬದುಕನ್ನು ಅದೆಷ್ಟು ಸಾರ್ಥಕವಾದ ರೀತಿಯಲ್ಲಿ ಸವೆಸಿದರು ಎಂದರೆ ಇತಿಹಾಸದಲ್ಲಿ ಅವರ ಹೆಸರು ಖಂಡಿತವಾಗಿಯೂ ಚಿರಸ್ಥಾಯಿಯಾಗಿ ಉಳಿಯುತ್ತದೆ. ಅದರಲ್ಲಿ ಅನುಮಾನವೇ ಇಲ್ಲ.

ಗದಗ ಎಂದೊಡನೆ ಹೇಗೆ ಕುಮಾರವ್ಯಾಸ ನೆನಪಾಗುತ್ತಾನೋ ಹಾಗೆಯೇ ನೆನಪಾಗುವ ಮತ್ತೊಂದು ಹೆಸರೆಂದರೆ ಶ್ರೀ ವೀರೇಶ್ವರ ಪುಣ್ಯಾಶ್ರಮ. ಇಂದು ಗದುಗಿನ ಅವಿಭಾಜ್ಯ ಅಂಗವಾಗಿರುವ ವಿವಿಧ ಶಾಲೆ, ಕಾಲೇಜು, ಸಂಸ್ಕೃತ ಪಾಠಶಾಲೆ, ಬ್ರೈಲ್ ಲಿಪಿ ಕಲಿಸುವ ವಿದ್ಯಾಲಯ, ಹತ್ತಾರು ಸಂಗೀತ ಶಿಕ್ಷಣ ನೀಡುವ ಶಾಲೆಗಳು ಇದೆಲ್ಲವನ್ನೂ ಅಂಧ, ಅನಾಥ ಮಕ್ಕಳಿಗಾಗಿಯೇ ಸ್ಥಾಪಿಸಿದುದು ಎಂದರೆ ನಂಬುತ್ತೀರಾ? ಹೌದು. ಇದು ಅಕ್ಷರಶಃ ಸತ್ಯ. ಇದರ ರೂವಾರಿಗಳು ಇದೇ ಈ ಅಂಧ ಗುರು ಶಿಷ್ಯರು. ಈ ಇಬ್ಬರೂ ಮಹನೀಯರು ಮಾಡಿದ ಜನಸೇವೆಯನ್ನು ಯಾವ ಸರಕಾರವಾಗಲೀ ಸಂಸ್ಥೆಯಾಗಲೀ ಮಾಡಲಾಗದು ಎಂದು ನಮಗೆ ಅನಿಸಿದಲ್ಲಿ ಅದರಲ್ಲಿ ಆಶ್ಚರ್ಯಪಡುವಂಥದೇನೂ ಇರಲಿಕ್ಕಿಲ್ಲ.

ಈಗ ಕೆಲವೇ ದಶಕಗಳ ಹಿಂದೆ ವೀರಶೈವ ಸಮುದಾಯದಲ್ಲಿದ್ದ ಮಠಾಧೀಶರು, ನಿಜವಾದ ಶರಣರಂತೆ ಅವರು ಮಾಡುತ್ತಿದ್ದ ಸಮಾಜದ ಉದ್ಧಾರದ ಕೆಲಸಗಳು, ಜನರ ಮನಸ್ಸಿನಲ್ಲಿ ಬಿತ್ತುತ್ತಿದ್ದ ಶಿವಭಕ್ತಿ, ಕಾಯಕ ನಿಷ್ಠೆ, ಪ್ರಾಮಾಣಿಕತೆ, ಸಹನೆ, ಪ್ರೀತಿ ಈ ಎಲ್ಲ ಮೌಲ್ಯಗಳ ಜೀವಂತ ಉದಾಹರಣೆಯಾಗಿ ನಿಲ್ಲುತ್ತಾರೆ ಈ ಗುರುಶಿಷ್ಯದ್ವಯರ ಗುರುಗಳಾದ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳು. ಅವರಿಗೆ ದೀನ ದಲಿತರ ಬಗ್ಗೆ ಇದ್ದ ಕಾಳಜಿ, ಅನುಕಂಪ, ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಹಂಬಲ, ಇವು ಅವರನ್ನು ಬಹಳ ಎತ್ತರ ಎತ್ತರಕ್ಕೆ ಏರಿಸಿದವು. ಅವರು ಒಮ್ಮೆ ಪಂಚಾಕ್ಷರರ (ಆಗ ಅವರ ಹೆಸರು ಗದಿಗೆಯ್ಯ) ಗಾಯನ ಕೇಳಿ, ಅದಕ್ಕೆ ಮಾರುಹೋಗಿ, ಇವನಿಂದ ಮುಂದೆ ಸಂಗೀತ ಕ್ಷೇತ್ರಕ್ಕೆ ಅಗಾಧವಾದ ಸೇವೆ ಸಲ್ಲಿಸುವುದಿದೆ ಎಂಬುದನ್ನು ಅರಿತ ಆ ಮಹಾಮಹಿಮರು ಎಂಟು ವರ್ಷಗಳ ಅಂಧ ಬಾಲಕರನ್ನು (ಗದಿಗೆಯ್ಯನ ಅಣ್ಣನೂ ಸೇರಿ) ತಮ್ಮ ತೆಕ್ಕೆಗೆ ತೆಗೆದುಕೊಳ್ಳುತ್ತಾರೆ. ಅವರಿಗೆ ಸಂಗೀತ ಶಿಕ್ಷಣ ಕೊಡಿಸಲು ಬಹಳ ಕಷ್ಟಪಟ್ಟರೂ ಬಿಡದೆ, ಅವರನ್ನು ಗುರಿ ಮುಟ್ಟಿಸುವುದರಲ್ಲಿ ಯಶಸ್ವಿ ಆಗುತ್ತಾರೆ. (ಅಣ್ಣ ತೀರಿಕೊಂಡು, ಗದಿಗೆಯ್ಯ ಒಬ್ಬನೇ ಬದುಕನ್ನು ಎದುರಿಸು ತ್ತಾನೆ). ಅವನಿಗೆ ಶಿವದೀಕ್ಷೆಯ ಜೊತೆಗೆ ಸಮಾಜದ ಋಣವನ್ನು ತೀರಿಸುವ ಮತ್ತು ಅಂಧ ಅನಾಥ ಮಕ್ಕಳಿಗೆ ಸಂಗೀತ ಶಿಕ್ಷಣ ನೀಡುವ ಕಾಯಕ ದೀಕ್ಷೆಯನ್ನೂ ನೀಡುತ್ತಾರೆ. ಗುರುವಿನ ಮಾತುಗಳನ್ನು ತಲೆಯ ಮೇಲೆ ಹೊತ್ತು, ಆ ಹಾದಿಯಲ್ಲಿಯೇ ನಡೆದ ಪಂಚಾಕ್ಷರ ಗವಾಯಿಗಳು ಬದುಕಿನಲ್ಲಿ ಹಲವಾರು ಕಷ್ಟ ನಷ್ಟ ಗಳನ್ನು ಅನುಭವಿಸಿದರೂ ತಮ್ಮ ಅಂಧ–ಅನಾಥ ಶಿಷ್ಯರ ಕೈಬಿಡದೆ ನಿಜ ಅರ್ಥದಲ್ಲಿ ಗುರು ಎಂದನಿಸಿಕೊಳ್ಳುತ್ತಾರೆ. ಭಿಕ್ಷೆ, ವಾರಾನ್ನ, ಉಪವಾಸ ಇವುಗಳ ಮಧ್ಯೆ ಅವರು ಉಭಯ ಪದ್ಧತಿಯ ಗಾಯಕರಾಗಿ, ಹತ್ತಾರು ವಾದ್ಯಗಳ ವಾದಕರಾಗಿ ಎಲ್ಲಕಿಂತ ಕರುಣಾಮಯಿ ಗುರುವಾಗಿ ಕಂಗೊಳಿಸುತ್ತಾರೆ. ಕೊನೆಗೆ ಗದಗದಲ್ಲಿ ಶ್ರೀ ವೀರೇಶ್ವರ ಪುಣ್ಯಾಶ್ರಮವನ್ನು ಸ್ಥಾಪಿಸುತ್ತಾರೆ. ತಮ್ಮ ಪ್ರಿಯ ಶಿಷ್ಯನಾಗಿದ್ದ ಪುಟ್ಟರಾಜರನ್ನು ಆಶ್ರಮದ ಉತ್ತರಾಧಿಕಾರಿಯಾಗಿ ನೇಮಿಸಿ, ತಮ್ಮ ಇಹಲೋಕದ ಪಯಣವನ್ನು ಮುಗಿಸುತ್ತಾರೆ.







ಪಂಡಿತ ಪಂಚಾಕ್ಷರಿ ಗವಾಯಿ ಪಂಡಿತ ಪುಟ್ಟರಾಜ ಗವಾಯಿ ಹಾನಗಲ್ಲ ಶ್ರೀಕುಮಾರಸ್ವಾಮಿ

> "ಅಂಧ ಅನಾಥ ಮಕ್ಕಳನ್ನು ಕಂಡರೆ ಮರುಗುವ ಅವರ ಮನವು ಅಂತಹವರಿಗಾಗಿ ಉಚಿತ ಊಟ, ವಸತಿ, ಶಿಕ್ಷಣವನ್ನು ಕೊಟ್ಟು ಸಮಾಜದಲ್ಲಿ ಗೌರವದಿಂದ, ಆತ್ಮವಿಶ್ವಾಸದಿಂದ ತಮ್ಮ ಕಾಲ ಮೇಲೆ ಬದುಕುವಂತೆ ಮಾಡಿದ್ದಾರೆ. ಅವರ ಆಶ್ರಮದಲ್ಲಿ ನೂರಾರು ಅಲ್ಲ ಸಹಸ್ರಾರು ಮಂದಿ ಶಿಷ್ಯರು ಕಲಿತು, ವಿದ್ಯಾವಂತರಾಗಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಆಶ್ರಮವನ್ನು ಯಾವರೀತಿ ಬೃಹತ್ತಾಗಿ ಬೆಳೆಸಿದರೆಂದರೆ, ಇಂದು ಸುಮಾರು ಹದಿನಾಲ್ಕಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು, ಅಂಧರ ವಸತಿ ನಿಲಯಗಳು ಸುಸಜ್ಜಿತವಾದ ಕಟ್ಟಡದಲ್ಲಿ ಆಶ್ರಮದ ವತಿಯಿಂದ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿವೆ ಎಂದರೆ ಅದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇಲ್ಲ.

ಆ ಗುರುವಿನ ಅತ್ಯಂತ ಯೋಗ್ಯ ಶಿಷ್ಯರಾಗಿ, ಅವರು ತೋರಿದ ಹಾದಿಯಲ್ಲಿಯೇ ನಡೆದ ಪುಟ್ಟರಾಜ ಗವಾಯಿಗಳು ಆಶ್ರಮವನ್ನು ಬಹಳ ದೊಡ್ಡದಾಗಿ ಬೆಳೆಸುತ್ತಾರೆ. ಗುರುಗಳಂತೆ ಇವರೂ ಉಭಯ ಗಾನ ಪ್ರವೀಣರು. ಹಲವು ವಾದ್ಯ ನಿಪುಣರು. ಜಾತಿ, ಮತ, ಧರ್ಮ ಯಾವುದಕ್ಕೂ ಮಹತ್ವ ನೀಡದೆ, ತಮ್ಮ ಮಡಿಲಿಗೆ ಬಂದ ಅಂಧ ಅನಾಥ ಮಕ್ಕಳಿಗೆ ತಂದೆ, ತಾಯಿ, ಗುರುವಾಗಿ ಅವರ ಬಾಳಿನಲ್ಲಿ ನಗೆಯ ಹೂವುಗಳು ಅರಳುವಂತೆ ಮಾಡಿದ್ದಾರೆ. ಗುರುಗಳು ಅವರಿಗೆ ಕೊಡಿಸಿದ್ದ ಸಂಸ್ಕೃತ ಮತ್ತು ಹಿಂದೀ ಭಾಷಾ ವಿದ್ಯಾಭ್ಯಾಸ ದಿಂದ ಮೂರು ಭಾಷೆಗಳಲ್ಲಿ ಸಾಹಿತ್ಯವನ್ನು ರಚಿಸಿದವರು. ನಾಟಕ ಕಂಪನಿಯನ್ನು ಕಟ್ಟಿ, ನಾಡಿಗೆ ಹಲವು ಮಂದಿ ಕಲಾವಿದರನ್ನು ನೀಡಿರುವವರು. ಅಂಧ ಅನಾಥ ಮಕ್ಕಳನ್ನು ಕಂಡರೆ ಮರುಗುವ ಅವರ ಮನವು ಅಂತಹವರಿಗಾಗಿ ಉಚಿತ ಊಟ, ವಸತಿ, ಶಿಕ್ಷಣ ವನ್ನು ಕೊಟ್ಟು ಸಮಾಜದಲ್ಲಿ ಗೌರವದಿಂದ, ಆತ್ಮ ವಿಶ್ವಾಸದಿಂದ ತಮ್ಮ ಕಾಲ ಮೇಲೆ ಬದುಕುವಂತೆ ಮಾಡಿದ್ದಾರೆ. ಅವರ ಆಶ್ರಮದಲ್ಲಿ ನೂರಾರು ಅಲ್ಲ ಸಹಸ್ರಾರು ಮಂದಿ ಶಿಷ್ಯರು ಕಲಿತು, ವಿದ್ಯಾವಂತರಾಗಿ ಬದುಕನ್ನು ಕಟ್ಟಿಕೊಂಡಿದ್ದಾರೆ. ಆಶ್ರಮವನ್ನು ಯಾವರೀತಿ ಬೃಹತ್ತಾಗಿ ಬೆಳೆಸಿದರೆಂದರೆ, ಇಂದು ಸುಮಾರು ಹದಿನಾಲ್ಕಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು, ಅಂಧರ ವಸತಿ ನಿಲಯಗಳು ಸುಸಜ್ಜಿತವಾದ ಕಟ್ಟಡದಲ್ಲಿ ಆಶ್ರಮದ ವತಿಯಿಂದ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿವೆ ಎಂದರೆ ಅದರಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇಲ್ಲ.

ಕನ್ನಡ, ಹಿಂದಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅವರು ಬರೆದ ಹಲವು ನಾಟಕಗಳು, ಪುರಾಣಗಳು, ಕಾವ್ಯಗಳಲ್ಲದೆ ಸಂಗೀತಕ್ಕೆ ಸಂಬಂಧಿಸಿದ ಗ್ರಂಥಗಳು ಹೊರಬಂದಿವೆ. ಅವರು ಬಹಳ ಜನಪ್ರಿಯರಾಗಿದ್ದ ಕೀರ್ತನಕಾರರೂ ಆಗಿದ್ದರು. ಕೀರ್ತನ ಕಲೆಯ ಮೂಲಕ ಸಮಾಜೋದ್ಧಾರ ಮಾಡುವ ಕಾಯಕವನ್ನು ಕೈಗೆತ್ತಿಕೊಂಡವರು. ಐಹಿಕ ಭೋಗವಾಗಲೀ, ಕೀರ್ತಿ ಶನಿಯಾಗಲಿ ಅವರು ಅವುಗಳಿಂದ ಮಾರು ದೂರ. ಹಾಗಿದ್ದರೂ ಬಿರುದು, ಗೌರವ ಸನ್ಮಾನಗಳು ಅವರನ್ನು ಅರಸಿಕೊಂಡು ಬಂದವು. ರಾಷ್ಟ್ರಪತಿಗಳ ಸನ್ಮಾನ ಸೇರಿದಂತೆ ನೂರಾರು ಪ್ರಶಸ್ತಿ, ಗೌರವಗಳಿಗೆ ಅವರು ಭಾಜನರಾಗಿದ್ದಾರೆ. ನಾಡಿನ ಉದ್ದಗಲದಲ್ಲಿ ಅವರ ಸಂಗೀತ ಕಛೇರಿಗಳು ನಡೆದಿವೆ. ಅವರ ಗರಡಿಯಲ್ಲಿ ತಯಾರಾದ ಅನೇಕ ಮಂದಿ ಶಿಷ್ಯರು ಇಂದು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದಾರೆ. ಅವರ ಅಸಂಖ್ಯಾತ ಅಭಿಮಾನಿಗಳು, ಭಕ್ತರು ಅವರಿಗೆ ನೂರಾರು ಬಾರಿ ಗೌರವಿಸುವುದೊಂದೇ ಅಲ್ಲದೆ ಅವರ ತುಲಾಭಾರವನ್ನೂ ಮಾಡಿದ್ದಾರೆ. ರಾಜ್ಯ ಸರಕಾರ, ಇತರ ರಾಜ್ಯಗಳ ಸರಕಾರವೂ ಅವರಿಗೆ ಹತ್ತು ಹಲವು ಬಿರುದುಗಳನ್ನು ನೀಡಿ, ಗೌರವ ಸನ್ಮಾನಗಳನ್ನು ಮಾಡಿವೆ. ಅಲ್ಲದೆ ಕೇಂದ್ರ ಸರಕಾರವು ಅತ್ಯುನ್ನತ ಪದ್ಮಭೂಷಣ ಪ್ರಶಸ್ತಿ ನೀಡಿದೆ. ಹೀಗೆ ಬಾಹ್ಯದ ಲೌಕಿಕ ಕಾರ್ಯಗಳಲ್ಲಿ ನಿರತರಾಗಿದ್ದರೂ ಅಂತರಂಗದಲ್ಲಿ ಅವರೊಬ್ಬ ಅತ್ಯಂತ ಸರಳ ಮನಸಿನ ಶುದ್ಧ ಭಕ್ತಿಯ ಶಿವ ಭಕ್ತ. ಮಗುವಿನ ಮನಸಿನ, ನಿಷ್ಕಲ್ಮಷ ನಗೆಯ ಸರಳ ಉಡುಗೆಯ, ಅಸಾಧಾರಣ ಪಾಂಡಿತ್ಯದ ಸಾಕಾರ ಮೂರ್ತಿ.

ಕನ್ನಡ ನಾಡು ಕಂಡ ಈ ಈರ್ವರು ಅಪೂರ್ವ ಗುರು ಶಿಷ್ಯರ ಜಯಂತಿಯನ್ನು ಇದೇ ಮಾರ್ಚ್ 15ರಂದು ಮೈಸೂರಿನ ಸರಸ್ವತೀಪುರಂ ಜೆಎಸ್‌ಎಸ್ ಮಹೀಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಆಚರಿಸಲಿದ್ದಾರೆ.

ರಸ್ತೆ, ನೀರು, ಚರಂಡಿ ಸಮಸ್ಯೆ ಬಗೆಹರಿಸಿ

ಎಂಡಿಎ ಆಯುಕ್ತರಿಗೆ ಪೊಲೀಸ್ ಲೇಔಟ್, ಸರ್ದಾರ್ ವಲ್ಲಭಭಾಯಿ ಪಟೇಲ್‌ನಗರ ನಿವಾಸಿಗಳ ಮನವಿ



ಪೊಲೀಸ್ ಲೇಔಟ್ 2ನೇ ಹಂತ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದ ಸಮಸ್ಯೆಗಳನ್ನು ಬಗೆಹರಿಸುವಂತೆ ನಿವಾಸಿಗಳು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಮೈಸೂರು, ಮಾ.7(ಜಿಎ)–ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಪೊಲೀಸ್ ಲೇಔಟ್ 2ನೇ ಹಂತ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದ ಸಮಸ್ಯೆಗಳನ್ನು ಬಗೆಹರಿಸುವಂತೆ ನಿವಾಸಿಗಳು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಮೈಸೂರಿನ ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದಲ್ಲಿ ನಿವಾಸಿಗಳು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಕ್ಷಿತ್‌ರೊಂದಿಗೆ ಸಭೆ ನಡೆಸಿ, ಬಡಾವಣೆಯ ಸಮಸ್ಯೆ ಬಗ್ಗೆ ತಿಳಿಸಿದರು.

ಪ್ರಮುಖವಾಗಿ ಬಡಾವಣೆಯಲ್ಲಿ 20ಕಿಮಿ ರಸ್ತೆ ಇದ್ದು, ಅದರಲ್ಲಿ 18 ಕಿಮಿನಷ್ಟು ರಸ್ತೆಗಳು ಗುಂಡಿಗಳಿಂದ ಕೂಡಿವೆ. ಕುಡಿಯುವ ನೀರಿಗೆ ಸಾಕಷ್ಟು ಸಮಸ್ಯೆ ಇದೆ. ಯುಜಿಡಿ ನೀರು ತಿಪ್ಪಯ್ಯ ಕೆರೆ ಸೇರುತ್ತಿದೆ. ಈ ಎಲ್ಲಾ ಸಮಸ್ಯೆಗಳನ್ನು ಆದಷ್ಟು ಬೇಗ ಬಗೆಹರಿಸಿ ಎಂದು ಮನವಿ ಮಾಡಿದರು. ಈ ವೇಳೆ ಸಮಸ್ಯೆಗಳನ್ನು ಆಲಿಸಿದ ಪ್ರಾಧಿಕಾರದ ಆಯುಕ್ತ ರಕ್ಷಿತ್, ರಸ್ತೆಗಳ ದುರಸ್ಥಿಯನ್ನು ಏಕ ಕಾಲಕ್ಕೆ ಮಾಡಲು ಸಾಧ್ಯವಿಲ್ಲ. ಹಂತ ಹಂತವಾಗಿ ಮಾಡುತ್ತೇವೆ. ನೀರಿನ ಸಮಸ್ಯೆ ಬಗ್ಗೆ ಈಗಾಗಲೇ ಚರ್ಚಿಸಿದ್ದು, ಶೀಘ್ರದಲ್ಲಿ ಕಬಿನಿ ನೀರು ಬರಲಿದೆ ಎಂದು ಭರವಸೆ ನೀಡಿದರು.

ಮಾ.10 ಮೈಸೂರಲ್ಲಿ ಮಹಿಳಾ ದಿನ ಆಚರಣೆ

ಮೈಸೂರು,ಮಾ.7(ಜಿಎ)–ಅಖಿಲ ಭಾರತ ವೀರಶೈವ ಲಿಂಗಾಯತ ಮಹಾ ಸಭಾ ಜಿಲ್ಲಾ ಮಹಿಳಾ ಘಟಕದಿಂದ ಮಾ.10ರಂದು ಬೆಳಿಗ್ಗೆ 10.30ಕ್ಕೆ ರಾಜೇಂದ್ರ ಭವನದಲ್ಲಿ 'ಮೌಲ್ಯಾಧಾರಿತ ಸಮಾಜ ಹಾಗೂ ಮಹಿಳೆ' ಶೀರ್ಷಿಕೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಯೋಜಿಸಲಾಗಿದೆ ಎಂದು ಘಟಕದ ಅಧ್ಯಕ್ಷೆ ಧನ್ಯಾ ಸತ್ಯೇಂದ್ರಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಉದ್ಘಾಟಿಸುವರು. ಮುಖ್ಯ ಅತಿಥಿಯಾಗಿ ಬಸವ ಜಯಂತಿ ಅಧ್ಯಕ್ಷ ಎಂ.ಚಂದ್ರಶೇಖರ್ ಭಾಗವಹಿಸುವರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ವಿ. ಬಸವರಾಜು ಅಧ್ಯಕ್ಷತೆ ವಹಿಸುವರು ಎಂದರು.

ಈ ವೇಳೆ ದಂತ ವೈದ್ಯೆ ಡಾ.ಬ್ರಿಂದಾ ಸುಹಾಸ್ ಗೋಧಿ ಅವರನ್ನು ಸನ್ಮಾನಿಸಲಾಗುವುದು. ರಾಮನಗರದ ವಿಭೂತಿಕೆರೆ ಗ್ರಾಮದ ಶಶಿಕಲಾ ಶಿವಲಿಂಗಯ್ಯರಿಗೆ ಕಾಯಕಶ್ರೀ ಪ್ರಶಸ್ತಿ, ಮೈವಿವಿ ಚಿನ್ನದ ಪದಕ ಪುರಸ್ಕೃತೆ ಎಂ.ಎಸ್.ಕೀರ್ತನರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು. ಗೋಷ್ಠಿಯಲ್ಲಿ ಘಟಕದ ಉಪಾಧ್ಯಕ್ಷೆ ಮೀನಾಕ್ಷಿ ಶ್ರೀಶೈಲಾ, ಪ್ರಧಾನ ಕಾರ್ಯದರ್ಶಿ ಮಲ್ಲಿಕಾ ಮಹಾದೇವಸ್ವಾಮಿ, ಖಜಾಂಚಿ ಶೈಲಾ ಸಿದ್ದರಾಮಪ್ಪ, ಕಾರ್ಯದರ್ಶಿ ಮಾಲಿನಿ ಪ್ರವೀಣ್ ಇದ್ದರು.

ನೇಮಕ



ಮೈಸೂರು.ಮಾ.7–ಮೈಸೂರು ನಗರಪಾಲಿಕೆ ವ್ಯಾಪ್ತಿಯ ಚಾಮರಾಜ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರನ್ನಾಗಿ, ಜಿ.ವೆಂಕಟೇಶ್ ಅವರನ್ನು ನೇಮಕ ಮಾಡಿ ಮೈಸೂರು ಪಾಲಿಕೆ ಉಪಆಯುಕ್ತರು ಆದೇಶ ಹೊರಡಿಸಿದ್ದಾರೆ.

ವಿಕ್ಟೋರಿಯಾ ಆಸ್ಪತ್ರೆ ಹೆಸರು ಬದಲಾವಣೆ ಐತಿಹಾಸಿಕ ಅಪಚಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಘು ಕೌಟಿಲ್ಯ ವಾಗ್ದಾಳಿ

ಮೈಸೂರು,ಮಾ.7–ವಿಕ್ಟೋರಿಯಾ ಆಸ್ಪತ್ರೆಯ ಹೆಸರನ್ನು ಬದಲಾಯಿಸಿದ್ದು ಐತಿಹಾಸಿಕ ಅಪಚಾರ ಎಂದು ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ ಕಿಡಿಕಾರಿದ್ದಾರೆ.

ಪ್ಲೇಗ್‌ನಂತಹ ಮಹಾಮಾರಿ ರೋಗದಿಂದ ಜನರನ್ನು ರಕ್ಷಿಸಲು ಅಂದು 126 ವರ್ಷಗಳ ಹಿಂದೆ (1900) ಮಹಾರಾಣಿ ಕೆಂಪನಂಜಮ್ಮಣ್ಣಿ (ವಾಣಿವಿಲಾಸ ಸನ್ನಿಧಿ) ಅವರು ಕಟ್ಟಿಸಿ ಜನರಿಗಾಗಿ ಸಮರ್ಪಿಸಿದ ಏಷ್ಯಾದಲ್ಲೇ ಅತೀ ದೊಡ್ಡ ಆಸ್ಪತ್ರೆ ಎಂದು ಹೆಸರಾಗಿ ಬೆಂಗಳೂರಿನ ಪರಂಪರೆಯ ಕೊಂಡಿಯಾಗಿದ್ದ ವಿಕ್ಟೋರಿಯಾ ಆಸ್ಪತ್ರೆಯ ಹೆಸರನ್ನು ಬದಲಾಯಿಸಿದ್ದು ಐತಿಹಾಸಿಕ ಅಪಚಾರವಾಗಿದೆ ಎಂದು ಹೇಳಿದ್ದಾರೆ.

ಮೊದಲಿನಿಂದಲೂ ರಾಜಮನೆತನದ ಬಗ್ಗೆ ಸೇಡಿನ ಮನೋಭಾವದಿಂದ ವರ್ತಿಸುವ ಸಿದ್ದರಾಮಯ್ಯನವರು ಶಾಂತವೇರಿ ಗೋಪಾಲಗೌಡರಂತಹ ಆದರ್ಶ ರಾಜಕಾರಣಿ ಹೆಸರನ್ನು ಮುಂದಿಟ್ಟುಕೊಂಡು ಆಸ್ಪತ್ರೆಯ ಹೆಸರು ಬದಲಿಸಲು ಹೊರಟಿರುವುದು ನಿಜಕ್ಕೂ ವ್ಯಥೆ ತರುವ ವಿಷಯವಾಗಿದೆ. ಸರ್ಕಾರದ ಈ ನಿರ್ಧಾರ ಐತಿಹಾಸಿಕ ಹೆಸರುಗಳು, ಪರಂಪರೆಯನ್ನು ಅಳಿಸಿಹಾಕುವ ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದುತಾಗಿದೆ ಎಂದು ತಿಳಿಸಿದ್ದಾರೆ.

ವಿಕ್ಟೋರಿಯಾ ಹೆಸರು ಇಡುವುದರ ಹಿಂದೆ ಒಂದು ಬಹುದೊಡ್ಡ ಐತಿಹಾಸಿಕ ಹಿನ್ನೆಲೆಯಿದೆ. 'ಇತಿಹಾಸ ತಿಳಿಯದವರು ಇತಿಹಾಸ ಸೃಷ್ಟಿಸಲಾರರು' ಎಂಬ ಮಾತನ್ನು ಸಿದ್ದರಾಮಯ್ಯನವರು ನಿಜ ಮಾಡಿ ತೋರಿಸಿದ್ದಾರೆ. ಐತಿಹಾಸಿಕ ಹಿನ್ನೆಲೆಯ ರಾಣಿ ವಿಕ್ಟೋರಿಯಾ ಅವರ ಹೆಸರನ್ನು ಬದಲಿಸುವ ಅವಶ್ಯಕತೆ ಯಾವುದೇ ಕಾರಣಕ್ಕೂ ಇರಲಿಲ್ಲ. ಈ ಹೆಸರು ಬದಲಾಯಿಸುವುದಕ್ಕೆ ಸಮರ್ಥ ಕಾರಣವೂ ಇಲ್ಲದಿಲ್ಲ. ಒಂದು ವೇಳೆ ಬದಲಾಯಿಸಲೇಬೇಕೆಂಬ ಉದ್ದೇಶವಿದ್ದರೆ ಆಸ್ಪತ್ರೆಯನ್ನು ಕಟ್ಟಿಸಿದ ವಾಣಿವಿಲಾಸ ಸನ್ನಿಧಾನ ಅವರ ಹೆಸರನ್ನೇ ಇಡಬಹುದಾಗಿತ್ತು. ಆದರೆ ಇಂತಹ ಯಾವ ಚಿಂತನೆಯೂ ಸಿದ್ದರಾಮಯ್ಯನವರಿಗೆ ಇರಲು ಸಾಧ್ಯವಿಲ್ಲ. ಏಕೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗಿಂತಲೂ ನಾನೇ ಹೆಚ್ಚು ಕೆಲಸ ಮಾಡಿದ್ದೇನೆಂಬ ಭ್ರಮೆಯಲ್ಲಿರುವ ಅವರು ಮೈಸೂರು ರಾಜಮನೆತನದ ಇತಿಹಾಸವನ್ನೇ ಅಳಿಸಿ ಹಾಕುವ ಅಜೆಂಡಾ ಇಟ್ಟುಕೊಂಡಿರುವಂತಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಪ್ರಿನ್ಸ್ ರಸ್ತೆಗೆ ತಮ್ಮ ಹೆಸರನ್ನು ಇಡಲು ಹೋಗಿ ಮುಖಭಂಗಕ್ಕೀಡಾಗಿ ಅದರ ಸೇಡನ್ನು ವಿಕ್ಟೋರಿಯಾ ಹೆಸರನ್ನು ಅಳಿಸಿಹಾಕುವ ಮೂಲಕ ತೀರಿಸಿಕೊಂಡಿದ್ದಾರೆ ಎಂದು ರಘು ಕೌಟಿಲ್ಯ ಹೇಳಿದರು.



ರಘು ಕೌಟಿಲ್ಯ

ಶಾಂತವೇರಿ ಗೋಪಾಲಗೌಡರು ಕರ್ನಾಟಕ ರಾಜ್ಯ ಕಂಡ ಸರಳ, ಸಜ್ಜನಿಕೆಯ, ವಿರಳ ವ್ಯಕ್ತಿತ್ವದ, ಅಪರೂಪದ ಆದರ್ಶ ರಾಜಕಾರಣಿ. ಅವರು ಒಂದು ವೇಳೆ ಅವರು ಬದುಕಿದ್ದರೆ ಇಂತಹ ಚಾರಿತ್ರಿಕ ಅಪಚಾರದ ನಿರ್ಧಾರವನ್ನು ನಿಷ್ಠುರವಾಗಿ ಖಂಡಿಸುತ್ತಿದ್ದರು. ಶಾಂತವೇರಿ ಗೋಪಾಲಗೌಡರ ಬಗ್ಗೆ ಗೌರವವಿದ್ದರೆ ಅವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸುವ ಕಾಳಜಿ ನಿಜವಾಗಿಯೂ ಇದ್ದದ್ದೇ ಆಗಿದ್ದರೆ ಶಾಂತವೇರಿ ಗೋಪಾಲಗೌಡ ಅವರ ತವರು ಜಿಲ್ಲೆ ಶಿವಮೊಗ್ಗದಲ್ಲಿ ಒಂದು ಬೃಹತ್ ಹೃದ್ರೋಗ ಆಸ್ಪತ್ರೆ ಸ್ಥಾಪಿಸಿ ಗೌರವ ಸಲ್ಲಿಸಬಹುದಾಗಿತ್ತು, ಅಥವಾ ಯಾವುದೇ ಹೊಸ ಯೋಜನೆಗೆ ಅವರ ಹೆಸರು ಇಡಬಹುದಾಗಿತ್ತು. ಆದರೆ ವಿಕ್ಟೋರಿಯಾ ಆಸ್ಪತ್ರೆಗೆ ಅವರ ಹೆಸರನ್ನು ಇಡುವ ಮೂಲಕ ಶಾಂತವೇರಿ ಗೋಪಾಲಗೌಡರ ಮಹಾನ್ ವ್ಯಕ್ತಿತ್ವವನ್ನು ಬಳಸಿಕೊಂಡಿರುವುದು ಅನೀತಿ ರಾಜಕಾರಣದ ಪರಮಾವಧಿಯಾಗಿದೆ ಎಂದು ಪತ್ರಿಕಾ ಪ್ರಕಟಣೆ ಮೂಲಕ ದೂರಿದ್ದಾರೆ.

ಮಹಿಳಾ ದಿನಾಚರಣೆ: ಮಹಿಳೆಯರಿಗೆ ಕ್ಯಾನ್ಸರ್, ಥೈರಾಯ್ಡ್ ಪತ್ತೆ ಶಿಬಿರ

ಮೈಸೂರು, ಮಾ.7(ಜಿಎ)–ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಭಾನವಿ ಆಸ್ಪತ್ರೆಯಲ್ಲಿ ಮಹಿಳೆಯರಿಗಾಗಿ ಕ್ಯಾನ್ಸರ್, ಥೈರಾಯ್ಡ್ ಪತ್ತೆ ಶಿಬಿರವನ್ನು ರಿಯಾಯಿತಿ ದರದಲ್ಲಿ ಮಾ.8ರಿಂದ 31ರವರೆಗೆ ಆಯೋಜಿಸಲಾಗಿದೆ ಎಂದು ಆಸ್ಪತ್ರೆಯ ಹಿರಿಯ ಸ್ತ್ರೀರೋಗ ಸಮಾಲೋಚಕರು ಹಾಗೂ ಪ್ರಸೂತಿ ತಜ್ಞರಾದ ಡಾ.ಆರ್. ಲತಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್, ಗರ್ಭಾಶಯ ಕ್ಯಾನ್ಸರ್, ಥೈರಾಯ್ಡ್ ಸಮಸ್ಯೆಗಳು ಹೆಚ್ಚುತ್ತಿವೆ. ಇವನ್ನು ಆರಂಭದಲ್ಲಿಯೇ ಪತ್ತೆ ಹಚ್ಚಿದಲ್ಲಿ ಚಿಕಿತ್ಸೆ ಸುಲಭ ಹಾಗೂ ಬೇಗ ಗುಣಮುಖರಾಗುತ್ತಾರೆ. ಹೀಗಾಗಿ ಈ ನಿಟ್ಟಿನಲ್ಲಿ ನೆರವಾಗಲು ಈ ಶಿಬಿರ ಆಯೋಜಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಹೆಚ್.ಎನ್.ಚಂದನ್‌ಕುಮಾರ್, ಕೆ.ಎಸ್.ನಿರಂಜನ್‌ಸ್ವಾಮಿ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಮರ್ಥನಂ ಅಂಗವಿಕಲರ ಸಂಸ್ಥೆಯಲ್ಲಿ ವಿಶ್ವ ಮಹಿಳಾ ದಿನಾಚರಣೆ



ಮೈಸೂರು, ಮಾ.7– ಸಮರ್ಥನಂ ಅಂಗ ವಿಕಲರ ಸಂಸ್ಥೆ ವತಿಯಿಂದ ವಿಶ್ವ ಮಹಿಳಾ ದಿನಾಚರಣೆಯನ್ನು ಮೈಸೂರು ನಗರದ ವಿಜಯನಗರ 1ನೇ ಹಂತದಲ್ಲಿರುವ ಪಾರ್ಕ್‌ನಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳೆಯರ ಗೌರವ, ಅವರ ಸಾಧನೆಗಳು ಮತ್ತು ಸಮಾಜದಲ್ಲಿ ಅವರ ಪಾತ್ರವನ್ನು ಸ್ಮರಿಸಲಾಯಿತು.

ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಯು.ಬಿ.ಉದಯ್ ಕುಮಾರ್ ಮಾತನಾಡಿ, ವಿಶ್ವ ಮಹಿಳಾ ದಿನವು ಪ್ರಪಂಚದಾದ್ಯಂತ ಪ್ರೀತಿ ಮತ್ತು ಸಂತೋಷದಿಂದ ಆಚರಿಸಲ್ಪಡುವ ದಿನವಾಗಿದೆ. ನಮ್ಮ ಜೀವನದಲ್ಲಿ ಮಹಿಳೆಯರ ಅಸ್ತಿತ್ವ ಮತ್ತು ಅವರ ಮಹತ್ವವನ್ನು ಅರಿತು ಗೌರವಿಸುವ ಸಂದರ್ಭವೂ ಇದಾಗಿದೆ ಎಂದರು. ಇಂತಹ ದಿನಗಳನ್ನು ಶಾಲಾ–ಕಾಲೇಜುಗಳಲ್ಲಿ ಹೆಚ್ಚಾಗಿ ಆಚರಿಸಲಾಗುತ್ತಿರುವುದು ಸಮಾಜದ ಪ್ರಗತಿಯ ಸಂಕೇತವಾಗಿದೆ ಎಂದು ಹೇಳಿದರು.

ಸಂಸ್ಥೆಯ ಮೈಸೂರು ವಿಭಾಗೀಯ ಮುಖ್ಯಸ್ಥರಾದ ಶಿವರಾಜು ಮಾತನಾಡಿ, ಮಹಿಳೆಯರಿಗೆ ಸ್ವಾತಂತ್ರ್ಯವನ್ನು ಪುರುಷರು ಕೊಡುವುದಿಲ್ಲ; ಅವರು ಹುಟ್ಟುತ್ತಲೇ ಸ್ವತಂತ್ರರಾಗಿರುತ್ತಾರೆ. ಪುರುಷರು ಮಹಿಳೆಯರಿಗೆ ಸ್ವಾತಂತ್ರ್ಯ ಕೊಡುತ್ತೇವೆ ಎನ್ನುವುದು ಪುರುಷ ಪ್ರಧಾನ ಮನೋಭಾವದ ಅವಶೇಷವಾಗಿದೆ ಎಂದರು.

ಮಹಿಳಾ ಪ್ರಧಾನ ಕುಟುಂಬಗಳಲ್ಲಿ ಸಂತೋಷ ಮತ್ತು ಸಮನ್ವಯ ಹೆಚ್ಚಾಗಿದ್ದು, ಪುರುಷ ಪ್ರಧಾನ ಮನೋಭಾವ ಹೆಚ್ಚಿರುವ ಕುಟುಂಬಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹೇಳಿದರು. ಸಂಘದ ನಿರ್ದೇಶಕರಾದ ಸೀತಾರಾಮು, ಭ್ರಮಾರಂಭ, ಬೃಂದಾಬಾಯಿ, ಸುಬ್ರಮಣಿ, ಮಹಾಂತೇಶ್, ಸ್ಪರ್ಶ, ಲತಾ, ಲಕ್ಷ್ಮಿ, ಹೇಮಲತಾ, ಮಹದೇವ್ ಹಲವರು ಉಪಸ್ಥಿತರಿದ್ದರು.

ಸುತ್ತೂರು ಶ್ರೀಗಳ ಆಶೀರ್ವಾದ



ಸಿವಿಲ್ ನ್ಯಾಯಾಧೀಶರುಗಳಾಗಿ ಇತ್ತೀಚೆಗೆ ಆಯ್ಕೆಯಾಗಿರುವ ಜೆಎಸ್‌ಎಸ್ ಕಾನೂನು ಕಾಲೇಜಿನ ಹಿರಿಯ ವಿದ್ಯಾರ್ಥಿಗಳಾದ ರಾಹುಲ್ ನ್ಯಾಮಗೌಡ, ಕೆ.ಬಿ. ರೋಶಿನಿ, ನಿತ್ಯಾ ಗುಜ್ಜರ್, ರಶ್ಮಿ ಮೂಡಲಗಿ, ಕೆ.ಸಿ. ಸುಹಾಸ್ ಹಾಗೂ ಸುಪ್ರಿಯಾ ನವಲಿಯ ಅವರನ್ನು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ಸನ್ಮಾನಿಸಿ, ಆಶೀರ್ವದಿಸಿದರು.

ಕನಕಗಿರಿ ಶನೇಶ್ವರ ಸ್ವಾಮಿ ಪೂಜಾ ಮಹೋತ್ಸವ



ಮೈಸೂರಿನ ಕನಕಗಿರಿಯ ಶ್ರೀ ಶನೇಶ್ವರ ಸ್ವಾಮಿಯ ಪೂಜಾ ಮಹೋತ್ಸವದಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ ಕೆ ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ಮುಖಂಡರಾದ ಮಹೇಶ್, ಮನು, ನಾಗರಾಜು, ಶಿವಣ್ಣ, ಶಿವಮ್ಮ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ ಸೋಮಶೇಖರ್, ವಿಶ್ವನಾಥ್ (ವಿಶ್ವ), ಚಂದ್ರಶೇಖರ್ ಇತರರು ಉಪಸ್ಥಿತರಿದ್ದರು.

ಗ್ರಾಹಕ ಪಂಚಾಯತ್‌ನಿಂದ ಪ್ರಬುದ್ಧ ಮಹಿಳಾ ಗೋಷ್ಠಿ



ಪ್ರಬುದ್ಧ ಮಹಿಳಾ ಗೋಷ್ಠಿಯನ್ನು ಕೆಎಸ್‌ಒಯು ಪ್ರಾಧ್ಯಾಪಕರು ಹಾಗೂ ಶಿಕ್ಷಣ ತಜ್ಞರಾದ ಡಾ ಜ್ಯೋತಿ ಶಂಕರ್ ಉದ್ಘಾಟಿಸಿದರು.

ಮೈಸೂರು, ಮಾ.7– ಮೈಸೂರು ನಗರದಲ್ಲಿ ಗ್ರಾಹಕ ಪಂಚಾಯತ್ ಮಹಿಳಾ ಜಾಗರಣ ಸಮಾವೇಶವನ್ನು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಜಾಹೀರಾತುಗಳಲ್ಲಿ ಮಹಿಳೆಯರ ಪಾತ್ರ ಪ್ರಬುದ್ಧ ಮಹಿಳಾ ಗೋಷ್ಠಿಯನ್ನು ಚಾಮುಂಡಿಪುರಂನಲ್ಲಿರುವ ವನವಾಸಿ ಕಲ್ಯಾಣ ಪ್ರಾಂತ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಅಧ್ಯಕ್ಷತೆಯನ್ನು ಕೆಎಸ್‌ಒಯು ಪ್ರಾಧ್ಯಾಪಕರು ಹಾಗೂ ಶಿಕ್ಷಣ ತಜ್ಞರಾದ ಡಾ ಜ್ಯೋತಿ ಶಂಕರ್, ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯವಾಗಿ ಜಾಹೀರಾತುಗಳಲ್ಲಿ ಮಹಿಳೆಯರ ಪಾತ್ರ ಹಾಗೂ ಅವರ ಅಸ್ಮಿತೆ ಹಾಗೂ ಘನತೆ ಅದರಿಂದ ಸಮಾಜದಲ್ಲಿ ಆಗುತ್ತಿರುವ ಪರಿಣಾಮಗಳು ಈ ವಿಚಾರವಾಗಿ ಗೋಷ್ಠಿ ನಡೆಯಿತು.

ಅತಿಥಿ ವಕ್ತಾರರಾಗಿ ನಿವೃತ್ತ ಆರ್‌ಬಿಐ ಅಧಿಕಾರಿ ಡಾಕ್ಟರ್ ಬಾಲು ಕೆಂಚಪ್ಪ, ಬಾಗಲಕೋಟೆಯ ನಂದಿಮಠ, ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾಕ್ಟರ್ ಚಂದ್ರಿಕಾ ಕುರಂದ್ವಾಡ, ಮೈಸೂರು ನಗರ ಉಪಾಧ್ಯಕ್ಷ ವಿಕ್ರಂ ಅಯ್ಯಂಗಾರ್, ಕಾರ್ಯದರ್ಶಿ ಶ್ರೀಕಂಠೇಶ್, ನಗರ ಪಾಲಿಕೆ ಮಾಜಿ ಸದಸ್ಯರಾದ ಕಮಲಮ್ಮ, ಗಾಯತ್ರಿ ನಾಡಿಗ್, ಎಬಿಜಿಪಿ ಕಾನೂನು ಸಲಹೆಗಾರರಾದ ಪುಷ್ಪ ಇನ್ನಿತರರು ಉಪಸ್ಥಿತರಿದ್ದರು.

ರಷ್ಯಾದಿಂದ ತೈಲ ಖರೀದಿಗೆ ನಮಗೆ ಯಾರ ಅಪ್ಪಣೆ ಬೇಕಾಗಿಲ್ಲ

ಅಮೆರಿಕಾಕ್ಕೆ ಭಾರತ ಟಾಂಗ್



ನವದೆಹಲಿ, ಮಾ.7– ರಷ್ಯಾದಿಂದ ತೈಲ ಖರೀದಿಸಲು ಭಾರತಕ್ಕೆ ಅಮೆರಿಕ 30 ದಿನಗಳ ವಿನಾಯಿತಿ ನೀಡಿದೆ ಎಂಬ ವಿಚಾರಕ್ಕೆ ಭಾರತ ಖಡಕ್ ಪ್ರತಿಕ್ರಿಯೆ ನೀಡಿದೆ. ಅನುಮತಿ ಮೇಲೆ ನಾವು ಎಂದಿಗೂ ಅವಲಂಬಿತರಾಗಿಲ್ಲ ಎಂದು ಭಾರತ ಸ್ಪಷ್ಟಪಡಿಸಿದೆ.

ಇರಾನ್–ಯುಎಸ್–ಇಸ್ರೇಲ್ ಯುದ್ಧದಿಂದಾಗಿ ಹಾರ್ಮುಜ್ ಜಲಸಂಧಿ ಮಾರ್ಗದಲ್ಲಿ ಉದ್ವಿಗ್ನತೆ ಉಂಟಾಗಿರುವುದರಿಂದ, ಭಾರತವು ಕಡಿಮೆ ಬೆಲೆಗೆ ನೀಡುವ ಯಾವುದೇ ಮೂಲದಿಂದ ಕಚ್ಚಾ ತೈಲವನ್ನು ಖರೀದಿಸುವುದನ್ನು ಮುಂದುವರಿಸುತ್ತೇವೆ ಎಂದು ಕೇಂದ್ರ ಶನಿವಾರ ತಿಳಿಸಿದೆ. ಅಡೆತಡೆಗಳ ಹೊರತಾಗಿಯೂ ಭಾರತದ ಇಂಧನ ಸರಬರಾಜು ಸುರಕ್ಷಿತವಾಗಿದೆ ಎಂದು ಸರ್ಕಾರ ತಿಳಿಸಿದೆ.

ಹಾರ್ಮುಜ್ ಮಾರ್ಗದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ಹೊರತಾಗಿಯೂ, ಭಾರತದ ಇಂಧನ ಪೂರೈಕೆ ಸುರಕ್ಷಿತ ಮತ್ತು ಸ್ಥಿರವಾಗಿದೆ. ಭಾರತವು ತನ್ನ ಕಚ್ಚಾ ತೈಲ ಮೂಲಗಳನ್ನು 27ರಿಂದ 40 ದೇಶಗಳಿಗೆ ವಿಸ್ತರಿಸಿದೆ. ಪರ್ಯಾಯ ಪೂರೈಕೆ ಮಾರ್ಗಗಳನ್ನು ಖಚಿತಪಡಿಸಿಕೊಂಡಿದೆ. ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ, ಭಾರತವು ಕೈಗೆಟುಕುವ ದರಗಳು ಲಭ್ಯವಿರುವಲ್ಲೆಲ್ಲಾ ತೈಲವನ್ನು ಖರೀದಿಸುತ್ತದೆ ಎಂದು ಕೇಂದ್ರವು ತಿಳಿಸಿದೆ.

ಅಮೆರಿಕ ನೀಡಿದ ತಾತ್ಕಾಲಿಕ ಮನ್ನಾ ನಂತರ ಭಾರತವು ರಷ್ಯಾದ ತೈಲವನ್ನು ಆಮದು ಮಾಡಿಕೊಳ್ಳುವುದನ್ನು ಮುಂದುವರಿಸುತ್ತಿದೆ ಎಂದು ಶನಿವಾರ ದೃಢಪಡಿಸಿದೆ. ಅಂತಹ ಖರೀದಿಗಳನ್ನು ಮಾಡಲು ಭಾರತಕ್ಕೆ ಯಾವುದೇ ದೇಶದಿಂದ ಅನುಮತಿ ಅಗತ್ಯವಿಲ್ಲ ಎಂದು ಕೇಂದ್ರ ಹೇಳಿದೆ.

ರಷ್ಯಾದ ತೈಲವನ್ನು ಖರೀದಿಸಲು ಭಾರತ ಯಾವುದೇ ದೇಶದ ಅನುಮತಿಯನ್ನು ಎಂದಿಗೂ ಅವಲಂಬಿಸಿಲ್ಲ ಎಂದು ಕೇಂದ್ರ ಹೇಳಿದೆ. 2026ರ ಫೆಬ್ರವರಿಯಲ್ಲೂ ಭಾರತ ರಷ್ಯಾದ ತೈಲವನ್ನು ಆಮದು ಮಾಡಿಕೊಂಡಿದೆ. ರಷ್ಯಾ ಇನ್ನೂ ಭಾರತದ ಅತಿ ದೊಡ್ಡ ಕಚ್ಚಾ ತೈಲ ಪೂರೈಕೆದಾರ. ರಷ್ಯಾ–ಉಕ್ರೇನ್ ಯುದ್ಧದ ಮೂರು ವರ್ಷಗಳ ಕಾಲ, ಯುಎಸ್ ಮತ್ತು ಯುರೋಪಿಯನ್ ಒಕ್ಕೂಟದ ಆಕ್ಷೇಪಣೆಗಳ ಹೊರತಾಗಿಯೂ ಭಾರತ ರಷ್ಯಾದ ತೈಲವನ್ನು ಖರೀದಿಸುತ್ತಲೇ ಇದೆ. ರಿಯಾಯಿತಿ ಬೆಲೆಗಳು ಮತ್ತು ಸಂಸ್ಕರಣಾಗಾರದ ಬೇಡಿಕೆಯಿಂದಾಗಿ 2022 ರ ನಂತರ ಆಮದು ಗಮನಾರ್ಹವಾಗಿ ಹೆಚ್ಚಾಗಿದೆ ಎಂದು ತಿಳಿಸಿದೆ.

ಭಾರತವು 250 ಮಿಲಿಯನ್ ಬ್ಯಾರೆಲ್‌ಗಳಿಗಿಂತ ಹೆಚ್ಚು ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಮೀಸಲು ಮತ್ತು ಅದರ ಪೂರೈಕೆ ಸರಪಳಿಯಲ್ಲಿ ಹೊಂದಿದೆ. ಇದು ಏಳು ಅಥವಾ ಎಂಟು ವಾರಗಳ ಬಳಕೆಗೆ ಸಮಾನವಾದ ಬಫರ್ ಅನ್ನು ಒದಗಿಸುತ್ತದೆ. ಭಾರತದ ಒಟ್ಟು ಸಂಸ್ಕರಣಾ ಸಾಮರ್ಥ್ಯವು ವರ್ಷಕ್ಕೆ 258 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟಿದ್ದು, ಇದು ಪ್ರಸ್ತುತ ದೇಶೀಯ ಬೇಡಿಕೆಯನ್ನು ಮೀರಿದೆ.

ಇರಾನ್ ವಿರುದ್ಧ ಅಮೆರಿಕ–ಇಸ್ರೇಲ್ ಮಿಲಿಟರಿ ಕ್ರಮಗಳು ಮತ್ತು ಕೊಲ್ಲಿಯಲ್ಲಿ ಟೆಹ್ರಾನ್ ನಡೆಸಿದ ಪ್ರತೀಕಾರದ ದಾಳಿಗಳು ಜಾಗತಿಕ ಇಂಧನ ಪೂರೈಕೆ ಮತ್ತು ಹಡಗು ಮಾರ್ಗಗಳನ್ನು ಅಸ್ತವ್ಯಸ್ತಗೊಳಿಸಿದ್ದು, ತೈಲ ಬೆಲೆಗಳನ್ನು ತೀವ್ರವಾಗಿ ಹೆಚ್ಚಿಸಿವೆ.

ತೈಲ ಬೆಲೆ ಏರಿಕೆ ಪ್ರಸ್ತಾವನೆ ಇಲ್ಲ

ದೆಹಲಿ: ಜಾಗತಿಕ ಮಟ್ಟದಲ್ಲಿ ತೈಲ ಬಿಕ್ಕಟ್ಟು ಮತ್ತು ಯುದ್ಧದ ವಾತಾವರಣ ವಿದ್ದರೂ, ಭಾರತದ ಇಂಧನ ದಾಸ್ತಾನು ಸ್ಥಿತಿ ಸುಧಾರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಅಧಿಕೃತ ಮೂಲಗಳು ಪುನರುಚ್ಚರಿಸಿವೆ.

ಈ ಬಗ್ಗೆ ಎಎನ್‌ಐ ಎಕ್ಸ್‌ನಲ್ಲಿ ಹೇಳಿಕೊಂಡಿದೆ. ಭಾರತದ ಇಂಧನ ಸಂಗ್ರಹಣಾ ಸಾಮರ್ಥ್ಯ ಮತ್ತು ಲಭ್ಯತೆ ಉತ್ತಮಗೊಳ್ಳುತ್ತಿದೆ. ಇದು ಸರ್ಕಾರಕ್ಕೆ ಹೆಚ್ಚಿನ ಆತ್ಮವಿಶ್ವಾಸ ನೀಡಿದ್ದು, ಸದ್ಯಕ್ಕೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಮಾಡುವ ಅನಿವಾರ್ಯತೆ ಇಲ್ಲ ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ಏಷ್ಯಾದ ಉದ್ವಿಗ್ನತೆಯಿಂದಾಗಿ 'ಹಾರ್ಮುಜ್ ಜಲಸಂಧಿ' ಮೂಲಕ ನಡೆಯುತ್ತಿದ್ದ ಕಚ್ಚಾ ತೈಲ ಆಮದಿನ ಮೇಲೆ ಭಾರತ ತನ್ನ ಅವಲಂಬನೆಯನ್ನು ಕಡಿಮೆ ಮಾಡಿಕೊಂಡಿದೆ. ಹಾರ್ಮುಜ್ ಜಲಸಂಧಿಯ ಹೊರತಾದ ಇತರ ಮೂಲಗಳಿಂದ ಆಮದು ಮಾಡಿಕೊಳ್ಳುವ ಪ್ರಮಾಣವನ್ನು ಶೇ. 10ರಷ್ಟು ಹೆಚ್ಚಿಸಲಾಗಿದೆ. ಈ ಮೊದಲು ಶೇ. 60ರಷ್ಟಿದ್ದ ಈ ಪ್ರಮಾಣವು ಈಗ ಶೇ. 70ಕ್ಕೆ ಏರಿಕೆಯಾಗಿದೆ. ಇದು ಇಂಧನ ಪೂರೈಕೆಯಲ್ಲಿ ಸ್ಥಿರತೆ ಕಾಪಾಡಲು ಸಹಕಾರಿಯಾಗಿದೆ.

ಎಲ್‌ಪಿಜಿ ಬೆಲೆ ಏರಿಕೆಯಾಗಲಿದೆ ಎಂಬ ಕಾಂಗ್ರೆಸ್ ಪಕ್ಷದ ಆರೋಪಗಳು ಸಂಪೂರ್ಣ ಆಧಾರರಹಿತ ಎಂದು ಸರ್ಕಾರಿ ಮೂಲಗಳು ಹೇಳಿವೆ.ಬೆಲೆ ಸ್ಥಿರತೆಯ ಭರವಸೆಯನ್ನು ಕೇವಲ ಪೆಟ್ರೋಲ್ ಮತ್ತು ಡೀಸೆಲ್ ದರಗಳಿಗೆ ಸಂಬಂಧಿಸಿದಂತೆ ನೀಡಲಾಗಿತ್ತು, ಅದನ್ನು ಎಲ್‌ಪಿಜಿಗೆ ತಳುಕು ಹಾಕುವುದು ತಪ್ಪು. ಇಂದಿಗೂ ನಾವು ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಸುವುದಿಲ್ಲ ಎಂದು ಮತ್ತೊಮ್ಮೆ ಭರವಸೆ ನೀಡುತ್ತಿದ್ದೇವೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಟ್ರಂಪ್ ಹತ್ಯೆಗೆ ಸಂಚು: ಪಾಕ್ ವ್ಯಕ್ತಿ ದೋಷಿ

ನ್ಯೂಯಾರ್ಕ್: 2020ರಲ್ಲಿ ಹತ್ಯೆಯಾದ ಇರಾನ್ ಕುಡ್ಸ್ ಫೋರ್ಸ್ ಕಮಾಂಡರ್ ಖಾಸೆಮ್ ಸೊಲೈಮಾನಿ ಅವರ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳಲು ಯುನೈಟೆಡ್ ಸ್ಟೇಟ್ಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತಿತರ ಅಮೆರಿಕದ ರಾಜಕಾರಣಿಗಳನ್ನು ಹತ್ಯೆ ಮಾಡಲು ಸಂಚು ರೂಪಿಸಿದ್ದಕ್ಕಾಗಿ ಇರಾನ್ ಜೊತೆಗೆ ನಂಟು ಹೊಂದಿರುವ ಪಾಕ್ ವ್ಯಕ್ತಿಗೆ ನ್ಯೂಯಾರ್ಕ್‌ನಲ್ಲಿ ದೋಷಿ ಎಂದು ಘೋಷಿಸಲಾಗಿದೆ.

ರಾಷ್ಟ್ರೀಯ ಗಡಿಗಳನ್ನು ಮೀರಿ ಭಯೋತ್ಪಾದನಾ ಕೃತ್ಯದ ಆರೋಪದ ಮೇರೆಗೆ 48 ವರ್ಷದ ಆಸಿಫ್ ರಝಾ ಮರ್ಚೆಂಟ್‌ನನ್ನು ದೂಷಿ ಎಂದು ಬ್ರೂಕ್ಲಿನ್ ಕೋರ್ಟ್‌ನ ಫೆಡರಲ್ ಜ್ಯೂರಿ ತೀರ್ಪು ನೀಡಿದರು. ಮಾರ್ಚೆಂಟ್ ಜೀವಾವಧಿ ಶಿಕ್ಷೆಯನ್ನು ಎದುರಿಸುತ್ತಾನೆ. ಟ್ರಂಪ್ ಅವರನ್ನು ಕೊಲ್ಲುವ ಸಂಚು ರೂಪಿಸಿ ಮರ್ಚೆಂಟ್ ಅಮೆರಿಕಕ್ಕೆ ಬಂದಿದ್ದ ಎಂದು ಅಮೆರಿಕದ ಅಟಾರ್ನಿ ಜನರಲ್ ಪಮೇಲಾ ಬೊಂಡಿ ಹೇಳಿದರು. ರಾಜಕೀಯ ನಾಯಕರನ್ನು ಹತ್ಯೆ ಮಾಡಲು ತನನ್ನು ಐಆರ್‌ಜಿಸಿ ಕಳುಹಿಸಿರುವುದಾಗಿ 2024 ರಲ್ಲಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ ಎಂದು ಅಮೆರಿಕ ನ್ಯಾಯಾಂಗ ಇಲಾಖೆ ತಿಳಿಸಿದೆ.

ಉಕ್ರೇನ್‌ನ ಖಾರ್ಕಿವ್ ಮೇಲೆ ರಷ್ಯಾ ಮಿಸೈಲ್ ದಾಳಿ: ಇಬ್ಬರು ಮಕ್ಕಳು ಸೇರಿ 8 ಮಂದಿ ಸಾವು



ಕೀವ್: ಉಕ್ರೇನ್‌ನ ಎರಡನೇ ಅತಿ ದೊಡ್ಡ ನಗರವಾದ ಖಾರ್ಕಿವ್‌ನಲ್ಲಿರುವ ಐದು ಅಂತಸ್ತಿನ ವಸತಿ ಕಟ್ಟಡಕ್ಕೆ ರಷ್ಯಾದ ಕ್ಷಿಪಣಿ ಅಪ್ಪಳಿಸಿದ ಪರಿಣಾಮ ಇಬ್ಬರು ಮಕ್ಕಳು ಸೇರಿದಂತೆ ಎಂಟು ಜನರು ಸಾವನ್ನಪ್ಪಿದ್ದು, 10 ಮಂದಿ ಗಾಯಗೊಂಡಿದ್ದಾರೆ.

ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಈ ದಾಳಿಯನ್ನು ಖಂಡಿಸಿದ್ದಾರೆ. ರಷ್ಯಾ 29 ಕ್ಷಿಪಣಿಗಳು ಮತ್ತು 480 ಡ್ರೋನ್‌ಗಳೊಂದಿಗೆ ರಾತ್ರೋರಾತ್ರಿ ಉಕ್ರೇನ್ ಮೇಲೆ ದಾಳಿ ಮಾಡಿದೆ. ಕೀವ್ ಮತ್ತು ಇತರ ಮಧ್ಯ ಪ್ರದೇಶಗಳಲ್ಲಿನ ಇಂಧನ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡಿದೆ. ದೇಶಾದ್ಯಂತ ಏಳು ಸ್ಥಳಗಳಲ್ಲಿ ಹಾನಿಯಾಗಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಏರ್ ಡಿಫೆನ್ಸ್ ಸಿಸ್ಟಮ್ 19 ಕ್ಷಿಪಣಿಗಳು ಮತ್ತು 453 ಡ್ರೋನ್‌ಗಳನ್ನು ಹೊಡೆದುರುಳಿಸಿದ್ದು, 22 ಸ್ಥಳಗಳಲ್ಲಿ ಒಂಬತ್ತು ಕ್ಷಿಪಣಿಗಳು ಮತ್ತು 26 ಸ್ಟ್ರೈಕ್ ಡ್ರೋನ್‌ಗಳಿಂದ ದಾಳಿಗಳು ದಾಖಲಾಗಿವೆ.

ಪ್ರಾಥಮಿಕ ಶಾಲಾ ಶಿಕ್ಷಕಿ ಮತ್ತು ಅವರ ಮಗ, ಎರಡನೇ ತರಗತಿಯ ವಿದ್ಯಾರ್ಥಿನಿ ಅವರ ಮನೆಯಲ್ಲಿ ಸಾವನ್ನಪ್ಪಿದ್ದಾರೆ. ಎಂಟನೇ ತರಗತಿಯ ವಿದ್ಯಾರ್ಥಿನಿ ಕೂಡ ತನ್ನ ತಾಯಿಯೊಂದಿಗೆ ಸಾವನ್ನಪ್ಪಿದ್ದಾರೆ ಎಂದು ನಗರದ ಮೇಯರ್ ಇಹೋರ್ ಟೆರೆಖೋವ್ ತಿಳಿಸಿದ್ದಾರೆ.

ಇಜ್ಜೆಲಿಯೆ–30 ಎಂಬ ಹೊಸ ರಷ್ಯಾದ ಕ್ರೂಸ್ ಕ್ಷಿಪಣಿ ಕಟ್ಟಡವನ್ನು ಹೊಡೆದಿದೆ ಎಂದು ಪ್ರಾದೇಶಿಕ ಪ್ರಾಸಿಕ್ಯೂಟರ್ ಕಚೇರಿ ತಿಳಿಸಿದೆ. ರಷ್ಯಾದ ರಕ್ಷಣಾ ಸಚಿವಾಲಯವು, ದಾಳಿಯು ಉಕ್ರೇನಿಯನ್ ಮಿಲಿಟರಿ ನೆಲೆಗಳು, ಇಂಧನ ಸೌಲಭ್ಯಗಳು ಮತ್ತು ವಾಯು ನೆಲೆಗಳನ್ನು ಗುರಿಯಾಗಿಸಿ ಕೊಂಡಿದೆ ಎಂದು ಹೇಳಿದೆ.

ಸೆಸ್ಕ್‌ನಲ್ಲಿ ಅರ್ಥಗರ್ಭಿತ ಲೈನ್‌ಮ್ಯಾನ್ ದಿವಸ್ ಆಚರಣೆ



ಲೈನ್‌ಮ್ಯಾನ್ ದಿವಸ್ ಕಾರ್ಯಕ್ರಮದಲ್ಲಿ ಲೈನ್‌ಮ್ಯಾನ್‌ಗಳಿಗೆ ಪ್ರಶಂಸನಾ ಪತ್ರ ನೀಡಿ, ಅಭಿನಂದಿಸಲಾಯಿತು.

ಮೈಸೂರು, ಮಾ.7– ಗ್ರಾಹಕರಿಗೆ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಲು ಸಿಬ್ಬಂದಿ ಸುರಕ್ಷತೆ ಮತ್ತು ಎಚ್ಚರಿಕೆಯ ಕೆಲಸ ಅತ್ಯಂತ ಮುಖ್ಯವಾಗಿದೆ ಎಂದು ಸೆಸ್ಕ್ ಅಧ್ಯಕ್ಷ ಹಾಗೂ ಶಾಸಕರೂ ಆದ ರಮೇಶ್ ಬಂಡಿಸಿದ್ದೇಗೌಡ ಹೇಳಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ವತಿಯಿಂದ ಮೈಸೂರಿನ ವಿ.ವಿ.ಮೊಹಲ್ಲಾದಲ್ಲಿರುವ ಸೆಸ್ಕ್‌ನ ಕಾರ್ಯ ಮತ್ತು ಪಾಲನಾ ವಿಭಾಗದ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಲೈನ್‌ಮ್ಯಾನ್ ದಿವಸ್ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಸಂಸ್ಥೆ ಮತ್ತು ಸಿಬ್ಬಂದಿ ನಡುವೆ ಪರಸ್ಪರ ನಂಬಿಕೆ ಹಾಗೂ ವಿಶ್ವಾಸದಿಂದ ಕೆಲಸ ನಡೆಯುತ್ತಿದ್ದು, ಗ್ರಾಹಕರಿಗೆ ಉತ್ತಮ ಸೇವೆ ನೀಡುವ ಜವಾಬ್ದಾರಿ ಎಲ್ಲರ ಮೇಲಿದೆ. ಹೀಗಾಗಿ ವಿದ್ಯುತ್ ಕ್ಷೇತ್ರದಲ್ಲಿ ಕೆಲಸ ಮಾಡುವ ಸಿಬ್ಬಂದಿ ಯಾವುದೇ ಅವಘಡಗಳು ಸಂಭವಿಸದಂತೆ ಹೆಚ್ಚಿನ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಿದೆ. ಆದ್ದರಿಂದ ವಿದ್ಯುತ್ ಅವಘಡಗಳನ್ನು ತಗ್ಗಿಸುವಲ್ಲಿ ಹಾಗೂ ಲೈನ್‌ಮ್ಯಾನ್‌ಗಳ ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ ಫೀಡರ್‌ಗಳ ನಿರ್ವಹಣೆಗೆ ಕ್ರಮಕೈಗೊಳ್ಳಲಾಗಿದೆ. ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ವಿದ್ಯುತ್ ಅವಘಡಗಳನ್ನು ತಪ್ಪಿಸಬಹುದು ಎಂದು ಅವರು ತಿಳಿಸಿದರು.

ಸಿಬ್ಬಂದಿ, ಜನರ ಸುರಕ್ಷತೆ ಮುಖ್ಯ: ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು ಮಾತನಾಡಿ, ಸೆಸ್ಕ್ ವತಿಯಿಂದ ಮಾ.4 ರಿಂದ 10 ರವರೆಗೆ ಸುರಕ್ಷಾ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಸಿಬ್ಬಂದಿಯ ಸುರಕ್ಷತೆ ಮಾತ್ರವಲ್ಲದೆ ಸಾರ್ವಜನಿಕರ ಸುರಕ್ಷತೆಯೂ ಅತ್ಯಂತ ಮುಖ್ಯವಾಗಿದ್ದು, ಯಾವುದೇ ವಿದ್ಯುತ್ ಅವಘಡಗಳು ಸಂಭವಿಸದಂತೆ ಎಲ್ಲರೂ ಹೆಚ್ಚಿನ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕಿದೆ. ಸೆಸ್ಕ್ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಲೈನ್‌ಮ್ಯಾನ್‌ಗಳು ಅಪಾಯ ಉಂಟಾಗುವ ಸಾಧ್ಯತೆ ಇರುವ ಸ್ಥಳಗಳಿಗೆ ತೆರಳಿ, ಸಮಸ್ಯೆಗಳನ್ನು ಪರಿಶೀಲಿಸಿ ಸರಿಪಡಿಸುವ ಜವಾಬ್ದಾರಿ ಹೊತ್ತು ಕೆಲಸ ಮಾಡಬೇಕು. ಸುರಕ್ಷತೆ ಅತ್ಯಂತ ಪ್ರಮುಖವಾಗಿದ್ದು, ಎಲ್ಲರೂ ಈ ಬಗ್ಗೆ ಹೆಚ್ಚಿನ ಗಮನ ನೀಡಿ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು.

ಅಧೀಕ್ಷಕ ಇಂಜಿನಿಯರ್ ಸುನೀಲ್ ಕುಮಾರ್ ಮಾತನಾಡಿ, ಲೈನ್‌ಮ್ಯಾನ್ ದಿನದ ಮಹತ್ವ ತಿಳಿಸಿದರು. ಇದೇ ಸಂದರ್ಭದಲ್ಲಿ ಉತ್ತಮ ರೀತಿಯಲ್ಲಿ ಕರ್ತವ್ಯನಿರ್ವಹಿಸಿ, ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಸಿ ಸೆಸ್ಕ್‌ನ ವಿಶ್ವಾಸಾರ್ಹತೆ ಹೆಚ್ಚಿಸಿರುವ 10ಕ್ಕೂ ಹೆಚ್ಚು ಲೈನ್‌ಮ್ಯಾನ್‌ಗಳಿಗೆ ಪ್ರಶಂಸನಾ ಪತ್ರವನ್ನು ನೀಡಿ, ಅಭಿನಂದಿಸಲಾಯಿತು. ಇದಕ್ಕೂ ಮುನ್ನ ಲೈನ್‌ಮ್ಯಾನ್‌ಗಳಿಗೆ ಸುರಕ್ಷತೆ ಮತ್ತು ಜವಾಬ್ದಾರಿಯ ಕುರಿತಂತೆ ಸುರಕ್ಷತಾ ಮಂತ್ರವನ್ನು ಬೋಧಿಸಲಾಯಿತು.

ಸಮಾರಂಭದಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕ ಡಿ.ಜೆ. ದಿವಾಕರ್, ವಿವಿ ಮೊಹಲ್ಲಾ ವಿಭಾಗದ ಕಾರ್ಯಪಾಲಕ ಅಭಿಯಂತರ ಡಿ. ಸಂದೀಪ್, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ(659)ದ ಉಪಾಧ್ಯಕ್ಷ ಎಚ್.ವಿ. ಸಂದೀಪ್ ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಲೈನ್‌ಮ್ಯಾನ್‌ಗಳು ಇದ್ದರು.

> ನಮ್ಮ ಒಂದು ತಪ್ಪು ಅಥವಾ ದುಡುಕಿನ ನಿರ್ಧಾರದಿಂದ ವಿದ್ಯುತ್ ಅವಘಡಗಳು ಸಂಭವಿಸಿದರೆ ಅದು ಸಿಬ್ಬಂದಿಯ ಕುಟುಂಬಕ್ಕೆ ದೊಡ್ಡ ನಷ್ಟವಾಗುವುದರ ಜತೆಗೆ ಸಂಸ್ಥೆಗೂ ಕಪ್ಪುಚುಕ್ಕೆ ಆಗಲಿದೆ. ಆದ್ದರಿಂದ ಲೈನ್‌ಮ್ಯಾನ್‌ಗಳು ತಮ್ಮ ಸುರಕ್ಷತೆ ಜತೆಗೆ ಕುಟುಂಬ ಮತ್ತು ಸಂಸ್ಥೆಯ ಹಿತವನ್ನು ಗಮನದಲ್ಲಿಟ್ಟುಕೊಂಡು ಜವಾಬ್ದಾರಿಯಿಂದ ಕೆಲಸ ಮಾಡಬೇಕು.
>
> **– ರಮೇಶ್ ಬಂಡಿಸಿದ್ದೇಗೌಡ, ಶಾಸಕರು ಹಾಗೂ ಸೆಸ್ಕ್ ಅಧ್ಯಕ್ಷರು.**

ಇಂದು ಸ್ವಾತಿ ನಕ್ಷತ್ರ ವಿಶೇಷ ಪೂಜೆ

ಮೈಸೂರು: ಮೈಸೂರಿನ ವಿಜಯನಗರದಲ್ಲಿರುವ ಯೋಗಾನರ ಸಿಂಹ ಸ್ವಾಮಿ ದೇವಸ್ಥಾನದಲ್ಲಿ ಭಾನುವಾರ (ಮಾ.8) ಬೆಳಗ್ಗೆ 9 ಗಂಟೆಗೆ ಸ್ವಾತಿ ನಕ್ಷತ್ರ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ. ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿತರಣೆ ಮಾಡಲಾಗುವುದು ಎಂದು ದೇವಸ್ಥಾನದ ಆಡಳಿತಾಧಿಕಾರಿ ಡಾ. ಎನ್. ಶ್ರೀನಿವಾಸನ್ ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ಪೆಟ್ರೋಲ್ ದರ 55 ರೂ. ಏರಿಕೆ

ಅಲ್ಲಿ ಈಗ 1 ಲೀಟರ್ ಪೆಟ್ರೋಲ್‌ಗೆ 321 ರೂ.!



ಇಸ್ಲಾಮಾಬಾದ್, ಮಾ.7– ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಕೊಲ್ಲಿ ಯುದ್ಧದ ಹಿನ್ನೆಲೆಯಲ್ಲಿ ಪಾಕಿಸ್ತಾನ ಸರ್ಕಾರ ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್ ಬೆಲೆಯನ್ನು 55 ರೂಪಾಯಿ ಏರಿಕೆ ಮಾಡಿದೆ.ಹೊಸ ಬೆಲೆಗಳ ಅನ್ವಯ ಪೆಟ್ರೋಲ್ ಬೆಲೆ 321.17 ರೂ. ಆಗಿದ್ದರೆ ಡೀಸೆಲ್ ಬೆಲೆ 275.70 ರೂ.ನಿಂದ 335.86 ರೂ.ಗೆ ಏರಿಕೆಯಾಗಲಿದೆ.

ಸಂಘರ್ಷ ಹೆಚ್ಚಾದ ನಂತರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆಗಳು ಭಾರೀ ಏರಿಕೆಯಾದ ಬೆನ್ನಲ್ಲೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ತಕ್ಷಣ ಹೆಚ್ಚಿಸುವಂತೆ ಒತ್ತಾಯಿಸಿತ್ತು. ದೇಶದಲ್ಲಿ ಇಂಧನ ಕೊರತೆಯಾಗಬಹುದು ಎಂಬ ಸುದ್ದಿ ಹಬ್ಬಿದ್ದರಿಂದ ಪಾಕಿಸ್ತಾನದಲ್ಲಿ ಈಗ ಪೆಟ್ರೋಲ್ ತುಂಬಿಸಲು ಬಂಕ್‌ಗಳ ಮುಂದೆ ಜನ ಸಾಲುಗಟ್ಟಿ ನಿಂತಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಬಂಕ್ ಮುಂದೆ ವಾಹನಗಳು ಸಾಲುಗಟ್ಟಿ ನಿಂತಿರುವ ವಿಡಿಯೋಗಳು ವೈರಲ್ ಆಗಿವೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ

ಮಹಿಳೆಯರಿಗೆ 'ಸ್ತ್ರೀ ಕಸ್ತೂರಿ ಪ್ರಶಸ್ತಿ' ಪ್ರದಾನ



ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರಿಗೆ ಸ್ತ್ರೀ ಕಸ್ತೂರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಮಾ.7– ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಶಕ್ತಿ ಸ್ವರೂಪಿಣಿ, ಆದಿಶಕ್ತಿ ಪರಾಶಕ್ತಿ ಎಂದೆಲ್ಲಾ ವರ್ಣಿಸಿ ಅಪಾರ ಸ್ಥಾನಮಾನವನ್ನು ನೀಡಲಾಗಿದೆ ಎಂದು ಖ್ಯಾತ ಕವಯಿತ್ರಿ ಡಾ.ಲತಾ ರಾಜಶೇಖರ್ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಚಿಗುರು ಸಾಹಿತ್ಯ ಬಳಗ ಈ ಎರಡು ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಭವನದಲ್ಲಿ ಆಯೋಜಿಸಲಾದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಇಂದು ಮಹಿಳೆ ಕಾಲಮಿತಿ ಇಲ್ಲದೆ ದುಡಿಯುತ್ತಿದ್ದು, ಹೊರಗಡೆಯೂ ದುಡಿಯಬೇಕಾದ ಅನಿವಾರ್ಯತೆಯಲ್ಲಿದ್ದು, ಇದರ ನಡುವೆಯೂ ಸಾಧನೆಗೈಯ್ಯುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ಇದು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆ ತನ್ನ ಛಾಪನ್ನು ಮೂಡಿಸುತ್ತಿರುವುದು ಮಹಿಳೆಯ ವಿಶೇಷತೆಗೆ ಸಾಕ್ಷಿ ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನಾಡಿದರು. ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭ ಗಮಕ ಕ್ಷೇತ್ರದಲ್ಲಿ ಶ್ರೀಮತಿ ಮಂಗಳಾ ರಾಮಮೂರ್ತಿ, ಸಂಗೀತ ಕ್ಷೇತ್ರದಲ್ಲಿ ವಿಜಯ ಸುದರ್ಶನ್, ವೈದ್ಯಕೀಯ ಕ್ಷೇತ್ರದಲ್ಲಿ ಸೀಮಾ ಯೋಗಣ್ಣ ಮತ್ತು ಡಾ. ಬಿ. ಗಾಯತ್ರಿ, ಹಾಗೂ ಡಾ. ಕಾವ್ಯ, ಸಾಹಿತ್ಯ ಕ್ಷೇತ್ರದಲ್ಲಿ ಡಾ.ಎಚ್.ಎಸ್. ಸುಧಾ ಜೋಶಿ ಇವರಿಗೆ ಸ್ತ್ರೀ ಕಸ್ತೂರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ಡಾ.ನಾಗರಾಜು ವಿ.ಭೈರಿ, ಆಧ್ಯಾತ್ಮಿಕ ಚಿಂತಕಿ ಸುಮತಿ ಸುಬ್ರಹ್ಮಣ್ಯ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಎನ್. ಅನಂತ, ಚಿಗುರು ಸಾಹಿತ್ಯ ಬಳಗದ ಕಾರ್ಯದರ್ಶಿ ನಾಗೇಂದ್ರ ಹೆಬ್ಬಾರ್, ಸಂಚಾಲಕ ಎಂ.ವಿ. ನಾಗೇಂದ್ರ ಬಾಬು, ಎ.ಹರ್ಷವರ್ಧನ ಮತ್ತಿತರರು ಉಪಸ್ಥಿತರಿದ್ದರು.

ಇಂದು ತ್ಯಾಜ್ಯ ಸಂಗ್ರಹಣೆ ವ್ಯತ್ಯಯ

ಮೈಸೂರು: ಘನ ತ್ಯಾಜ್ಯ ನಿರ್ವಹಣಾ (SWM) ಎಕ್ಸ್‌ಪೋ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಗಳನ್ನು ನಗರದ ವಿವಿಧ ಸ್ಥಳಗಳಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮಗಳಲ್ಲಿ ನಗರಪಾಲಿಕೆ ಅಧಿಕಾರಿಗಳು, ಸಿಬ್ಬಂದಿ, ಪೌರಕಾರ್ಮಿಕರು ಹಾಗೂ ಪಾಲಿಕೆ ವಾಹನ ವಿಭಾಗವನ್ನು ಸಹ ಸಂಪೂರ್ಣವಾಗಿ ಭಾಗವಹಿಸಲಿರುವ ಹಿನ್ನೆಲೆಯಲ್ಲಿ ಮಾ.8 ರಂದು ಮನೆ–ಮನೆಗಳಿಂದ ತ್ಯಾಜ್ಯ ಸಂಗ್ರಹಣೆ ಕಾರ್ಯವನ್ನು ಕೈಗೊಳ್ಳಲು ಅಡಚಣೆ ಉಂಟಾಗಲಿದ್ದು ಪಾಲಿಕೆಯು ವಿಷಾದ ವ್ಯಕ್ತಪಡಿಸಿದೆ. ಆದ್ದರಿಂದ ಮೈಸೂರು ನಗರದ ಸಾರ್ವಜನಿಕರು ತಮ್ಮ ಮನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ತಮ್ಮಲ್ಲೇ ಸಂಗ್ರಹಿಸಿಕೊಂಡು, ಮರು ದಿನ ವಾಹನಗಳು ಬಂದಾಗ ತ್ಯಾಜ್ಯವನ್ನು ನೀಡುವಂತೆ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.






ಅಂತರಾಷ್ಟ್ರೀಯ ಮಹಿಳಾ ದಿನದ ವಿಶೇಷ

8 ಮಾರ್ಚ್

ಹೆಣ್ಣಿಲ್ಲದ ಜೀವವಿಲ್ಲ, ಮಾತೃವಿಲ್ಲದ ಜೀವನವಿಲ್ಲ. ಹೆಣ್ಣಿನಿಂದಲೇ ಬಾಳು ಬಂಗಾರ, ಹೆಣ್ಣಿಲ್ಲದ ಬದುಕು ನಿಸ್ಸಾರ, ಹೆಣ್ಣನ್ನು ಗೌರವಿಸಿ, ಹೆಣ್ಣು ಮಕ್ಕಳನ್ನು ರಕ್ಷಿಸಿ. ನೇರಳೆ, ಹಸಿರು ಮತ್ತು ಬಿಳಿ ಬಣ್ಣಗಳು ಅಂತರರಾಷ್ಟ್ರೀಯ ಮಹಿಳಾ ದಿನದ ಬಣ್ಣಗಳಾಗಿವೆ. ನೇರಳೆ ನ್ಯಾಯ ಮತ್ತು ಘನತೆಯನ್ನು ಸೂಚಿಸುತ್ತದೆ. ಹಸಿರು ಭರವಸೆಯನ್ನು ಸಂಕೇತಿಸುತ್ತದೆ ಮತ್ತು ಬಿಳಿ ಶುದ್ಧತೆಯನ್ನು ಪ್ರತಿನಿಧಿಸುತ್ತದೆ. ನಾರಿ ಶಕ್ತಿಯನ್ನು ಸೃಷ್ಟಿಯ ಆದಿಶಕ್ತಿ ಎಂದು ಕರೆಯುತ್ತಾರೆ. ನಾರಿಯು ಸಮಾಜದ ಅತ್ಯಂತ ಶ್ರೇಷ್ಠ ಭಾಗವಾಗಿದ್ದಾಳೆ. ನಾರಿ ಸ್ವರ್ಗಕ್ಕೆ ದಾರಿಯಾಗಿದ್ದಾಳೆ. ಯತ್ರ ನಾರ್ಯಸ್ತು ಪೂಜ್ಯಂತೇ ತತ್ರ ರಮಂತೇ ದೇವತಾಃ ನಾರಿ ಒಬ್ಬಳು ಕಲಿತರೆ ಶಾಲೆಯನ್ನು ತೆರೆದಂತೆ ಎಂಬ ನಾಣ್ಣುಡಿ ಇದೆ. ನಾರಿಯು ಸಮಾಜದ ಚುಕ್ಕಾಣಿಯನ್ನು ಹಿಡಿದು ಅಭಿವೃದ್ಧಿ ಕಡೆಗೆ ಕರೆದೊಯ್ಯುವ ಸಾಧಕಿಯಾಗಿದ್ದಾಳೆ.

“

ದಿನೇ ದಿನೇ ಬದಲಾಗುತ್ತಿರುವ ಉದ್ಯೋಗ ವ್ಯವಸ್ಥೆಯಲ್ಲಿ ಇಂದಿನ ಮಹಿಳೆಯರೂ ಈ ಡಿಜಿಟಲೀಕರಣದ ಕಲಿಕೆಯ ಅನಿವಾರ್ಯತೆಯೂ, ಅವರನ್ನು ಮುಖ್ಯವಾಹಿನಿ ವ್ಯಾಪ್ತಿಯಲ್ಲಿ ಆರಕ್ಷಣೆ, ಆರ್ಥಿಕ ಸ್ವಾತಂತ್ರ್ಯ, ಶಿಕ್ಷಣ, ಆರೋಗ್ಯ, ಸುರಕ್ಷತೆಯ ಅರಿವು, ಆತ್ಮವಿಶ್ವಾಸವನ್ನು ನೀಡಿ ಭಾಗವಹಿಸಲು ಸಾಧ್ಯ ಎಂಬುದು ಸ್ಪಷ್ಟವಾಗಿದೆ! ಇದರ ಉಪಯೋಗದ ಸುರಕ್ಷತೆಯ ಮತ್ತು ಭದ್ರತೆಯ ಬಗ್ಗೆ ಅವರಿಗೆ ಜಾಗೃತಿ ಮೂಡಿಸುವುದು ಸರ್ಕಾರ ಮತ್ತು ಸಂಘ ಸಂಸ್ಥೆಗಳ ಕರ್ತವ್ಯವಾಗಿದೆ!



ಈ ನಾಡು ಮಹಾ ಮಾತೆಯರ ಬೀಡು..!

[illegible]



ಮಧ್ಯಕಾಲದಲ್ಲಿ ಸ್ತ್ರೀಯರ ಸ್ಥಾನ ಮಾನವು ಕುಸಿಯಿತು. ಬಾಲ್ಯವಿವಾಹ, ಪುನರ್ ವಿವಾಹ ತಡೆ, ಬಹು ವಿವಾಹ, ದೇವದಾಸಿ, ಪರ್ದಾ, ರಾಜಸ್ಥಾನ ನಾರಿಯರ ಜೋಹರ್ ವ್ರತ ಹಾಗೂ ಸತಿ ಸಹಗಮನ ಪದ್ಧತಿಯಂತಹ ಅನಿಷ್ಟ ಪದ್ಧತಿಗಳು ನಾರಿಯನ್ನು ಬಂಧಿಸಿದ್ದವು. ಆದರೂ ಈ ಸಮಯದಲ್ಲಿ ಅನೇಕ ವೀರ ನಾರಿಯರು ರಾಜಕೀಯ, ಸಾಹಿತ್ಯ, ಶಿಕ್ಷಣ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಯನ್ನು ಮೆರೆದಿದ್ದಾರೆ. ರಜಿಯಾ ಸುಲ್ತಾನ್, ರಾಣಿ ದುರ್ಗಾವತಿ, ರಾಣಿ ನೂರ್ ಜಹಾನ್, ಶಿವಾಜಿಯ ತಾಯಿ ಜೀಜಾಬಾಯಿ ಮುಂತಾದ ಮಹಿಳೆಯರು ನಾರಿ ಕುಲಕ್ಕೆ ಗೌರವವನ್ನು ತಂದುಕೊಟ್ಟಿದ್ದಾರೆ. ಮೀರಾಬಾಯಿಯು ಭಕ್ತಿ ಆಂದೋಲನದಲ್ಲಿ ಸ್ಥಾನ ಪಡೆದುಕೊಂಡಿದ್ದಾಳೆ.



ರಾಜಯೋಗಿನಿ ಬ್ರಹ್ಮ ಕುಮಾರಿ ದಾನೇಶ್ವರಿ

ಮೊ: 9341837082

ಆತ್ಮವಿಶ್ವಾಸದಿಂದ ಮುನ್ನಡೆಯೋಣ..!

[illegible]







ಡಾ. ಸುಧಾ. ಎಂ.ಎಸ್

ಆಯುರ್ವೇದ ಮತ್ತು ಯೋಗ ತಜ್ಞರು, ಮೈಸೂರು

ಮೊ: 9448072933

e-mail: drsudhamn@yahoo.com

ಸಾಧಿಸಬೇಕೆಂದಿರುವ ಮಹಿಳೆಯರಿಗೆ: ನೆಲ್ಲಿ ಬ್ಲೈ ನೆಲ್ಲಿ ದಾರಿದೀಪ..!

[illegible]






ಸುಚಿತ್ರಾ ಹೆಗಡೆ

ಲೇಖಕಿ

ಮೊ:9482817407



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

[illegible]

ಮಕ್ಕಳ ಚಿತ್ರಕಥೆ: ಆನೆಯಲ್ಲಲ್ಲ ಮಾವುತನಲ್ಲಿ ದೇವರಿದ್ದ...!?

■ ಹೆಚ್.ಜಿ.ಎಸ್.ಪ್ರಸಾದ್

ಮೊ. 98453 76199



ವಾರಭವಿಷ್ಯ

8.03.2026 ರಿಂದ 14.03.2026

[illegible]



ವಿ. ಕೇಶವಮೂರ್ತಿ

ಮೊ: 9740973224, 9739548721

ಮೇಷ [illegible]

ವೃಷಭ [illegible]

ಮಿಥುನ [illegible]

ಕಟಕ [illegible]

ಸಿಂಹ [illegible]

ಕನ್ಯಾ [illegible]

ತುಲಾ [illegible]

ವೃಶ್ಚಿಕ [illegible]

ಧನುಸ್ಸು [illegible]

ಮಕರ [illegible]

ಕುಂಭ [illegible]

ಮೀನ [illegible]

ಕೂಡು ಕುಟುಂಬ ಮಾಯವಾಗಿ, ವೃದ್ಧಾಶ್ರಮ ಜಾಸ್ತಿಯಾಗುತ್ತಿವೆ

ವಿರಾಜಪೇಟೆ, ಮಾ.7–ವಿಜಯನಗರದಲ್ಲಿರುವ ಪುಟಾಣಿ ಮಕ್ಕಳ ಚೋಟ ಚಾಂಪ್ಸ್ ಗುರುಕುಲಂ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮ ನಿಸರ್ಗ ಬಡಾವಣೆಯ ದೈವಜ್ಞ ಬ್ರಾಹ್ಮಣರ ಸಮಾಜದಲ್ಲಿ ನಡೆಯಿತು.

ಜೀವನ ಜ್ಯೋತಿ ಸಂಸ್ಥೆಯ ಸ್ಥಾಪಕ ಅಜಯ್ ನಾರಾಯಣ ರಾವ್ ಉದ್ಘಾಟಿಸಿ, ಮೊದಲು ದೇಶದಲ್ಲಿ ಕೂಡು ಕುಟುಂಬದ ಸದಸ್ಯರು ಇದ್ದಾಗ ಮಕ್ಕಳಿಗೆ ಗುರು ಹಿರಿಯರು ಸಂಸ್ಕಾರ ಹೇಳಿಕೊಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಕೂಡು ಕುಟುಂಬ ಮಾಯವಾಗಿ, ವೃದ್ಧಾಶ್ರಮಗಳು ಜಾಸ್ತಿಯಾಗುತ್ತಿವೆ. ಮಕ್ಕಳು ದುಶ್ಚಟಗಳಿಗೆ ಬಲಿಯಾಗುತ್ತಾರೆ, ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಮುಖ್ಯವಾಗಿ ಸಂಸ್ಕಾರ, ಸಂಸ್ಕೃತಿ ಕಲಿಸಬೇಕು. ಒಳ್ಳೆಯತನ ಕಲಿತಲ್ಲಿ ಸಮಾಜಕ್ಕೆ ಒಳಿತನ್ನು ನೀಡಬಹುದು. ಮಕ್ಕಳನ್ನು ಉತ್ತಮ ಸಂಸ್ಕಾರದೊಂದಿಗೆ ಬೆಳೆಸುವುದು ನಮ್ಮ ಕರ್ತವ್ಯ. ಮಕ್ಕಳ ಮನಸ್ಸು ಬಹಳ ಮೃದುವಾಗಿದ್ದು, ಮಕ್ಕಳೊಂದಿಗೆ ಮಕ್ಕಳಾಗಿ ಬೆರೆತಾಗ ಅವರ ಭಾವನೆಗಳನ್ನು ಅರಿತುಕೊಳ್ಳಲು ಸಾಧ್ಯ. ಅವರ ಸುಪ್ತ ಪ್ರತಿಭೆ ಹೊರಬರಲು ಸಾಧ್ಯವಾಗುತ್ತದೆ. ಅದಕ್ಕೆ ಪೋಷಕರು ಕಾರಣಕರ್ತರಾಗಬೇಕು ಎಂದರು.

ಸಮಾಜ ಸೇವಕ ಚಮ್ಮಟ್ಟಿರ ಪ್ರವೀಣ್ ಉತ್ತಪ್ಪ ಮಾತನಾಡಿ ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿ ಯಾವುದೇ ಜಾತಿ ಅಥವಾ ರಾಜಕೀಯ ವಿಷಯಗಳ ಬಗ್ಗೆ ವಿಷ ಬೀಜ ಬಿತ್ತಬಾರದು. ಪೋಷಕರು ಮಕ್ಕಳಿಗೆ ಆಚಾರ ವಿಚಾರ, ಸಂಸ್ಕೃತಿ ಸಂಸ್ಕಾರವನ್ನು ಕಲಿಸುವಂತಾಗಬೇಕು. ಮಕ್ಕಳನ್ನು ದುಶ್ಚಟಗಳಿಂದ ದೂರವಿರುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು. ಚೋಟ ಚಾಂಪ್ಸ್' ಗುರುಕುಲಂ ಮುಖ್ಯಸ್ಥ ಧನುಕುಮಾರ್ ಮಾತನಾಡಿ, ವಿದ್ಯೆ ಇಲ್ಲದ ಜೀವನ ಪರಿಮಳವಿಲ್ಲದ ಹೂವಿನಂತೆ. ನಮ್ಮ ಶಾಲೆಯಲ್ಲಿ ಭಾರತ ದೇಶದ ಸಂಸ್ಕೃತಿ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಬಾಲ್ಯದಲ್ಲೇ ಮಕ್ಕಳಿಗೆ ಸಂಸ್ಕಾರ ನೀಡುವುದು, ಶಾಲೆಯಲ್ಲಿ ಅಕ್ಷರ ಜ್ಞಾನ ಬಿತ್ತುವುದು ನಮ್ಮ ಸಂಸ್ಥೆಯ ಮುಖ್ಯ ಉದ್ದೇಶ ವಾಗಿದೆ ಎಂದರು.

ಚೋಟ ಚಾಂಪ್ಸ್ ಶಾಲೆಯ ಪ್ರಾಂಶುಪಾಲೆ ಚಂಗೇಟೀರ ಅಕ್ಕಮ್ಮ ಧನುಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಹಳೆಯ ಕಾಲದ ನೋಟು ಹಾಗೂ ನಾಣ್ಯಗಳ ಸಂಗ್ರಹದಲ್ಲಿ ಗಿನ್ನೀಸ್ ದಾಖಲೆ ನಿರೀಕ್ಷೆಯಲ್ಲಿರುವ ಅಜಯ್‌ರನ್ನು ಸನ್ಮಾನಿಸಲಾಯಿತು. ವಿವಿಧ ಕ್ರೀಡೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ, ಪುಟ್ಟ ಮಕ್ಕಳ ನೃತ್ಯ ಪ್ರದರ್ಶನ ನಡೆಯಿತು.



ಹಳೆಯ ಕಾಲದ ನೋಟುಹಾಗೂ ನಾಣ್ಯಗಳ ಸಂಗ್ರಹದಲ್ಲಿ ಗಿನ್ನೀಸ್ ದಾಖಲೆ ನಿರೀಕ್ಷೆಯಲ್ಲಿರುವ ಅಜಯ್ ಅವರನ್ನು ಸನ್ಮಾನಿಸಲಾಯಿತು.

ರೈಲ್ವೆ ಬ್ಯಾರಿಕೇಡ್ ಯೋಜನೆಗೆ ಭೂಮಿಪೂಜೆ

ಮಡಿಕೇರಿ, ಮಾ.7– ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಯೋಜನೆಗೆ ಭೂಮಿಪೂಜೆ ನೆರವೇರಿಸಲು ಪೊನ್ನಂಪೇಟೆ ತಾಲೂಕು ತಿತಿಮತಿ ಭಾಗಕ್ಕೆ ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ ಇಂದು ಭೇಟಿ ನೀಡಿದ್ದರು.

ಈ ಭಾಗದ ದಶಕಗಳ ಸಮಸ್ಯೆಯಾದ ಮಾನವ–ವನ್ಯಜೀವಿ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ, ಸರಕಾರ ಹಮ್ಮಿಕೊಂಡಿರುವ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಯೋಜನೆಗೆ ಭೂಮಿ ಪೂಜೆ ನೆರವೇರಿಸಿದರು. ರೈಲ್ವೆ ಬ್ಯಾರಿಕೇಡ್ ಯೋಜನೆಯನ್ನು 88 ಲಕ್ಷ ರೂ.ಗಳಲ್ಲಿ ಕೈಗೊಳ್ಳಲಾಗಿದ್ದು, ರಾಜ್ಯ ಸರ್ಕಾರ ಬ್ಯಾರಿಕೇಡ್ ನಿರ್ಮಾಣಕ್ಕಾಗಿ 20 ಕೋಟಿ ರೂ. ಮೀಸಲಿರಿಸಿದೆ. ಬಂಬು ಕಾರ್ಡ್ ಪೈಸಾರಿ ಭಾಗದ ಸುಮಾರು 7 ಕಿ. ಮೀ. ವ್ಯಾಪ್ತಿಯಲ್ಲಿ ಬ್ಯಾರಿಕೇಡ್ ಅಳವಡಿಸುವ ಕಾಮಗಾರಿ ನಡೆಯಲಿದೆ.

ಬಂಬುಕಾಡು ಪೈಸಾರಿಯಿಂದ ಕಿಸಾನ್ ತೋಟದ ಮೂಲೆಯವರೆಗೆ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾಮಗಾರಿಯಾಗಿದ್ದು, ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ಸರಕಾರ ಅನೇಕ ವೈಜ್ಞಾನಿಕ ಯೋಜನೆಗಳನ್ನು ರೂಪಿಸುತ್ತಿದೆ ಎಂದರು. ಸ್ಥಳೀಯರನ್ನು ನಿರಂತರವಾಗಿ ಕಾಡುತ್ತಿರುವ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದು ಸರಕಾರದ ಇಚ್ಛೆಯಾಗಿದೆ. ಈ ಸಲುವಾಗಿ ತಾವು ಸಾಧ್ಯವಿರುವ ಎಲ್ಲಾ ಮಾರ್ಗವನ್ನು ಅಳವಡಿಸಲು ಸಿದ್ಧ ಇದಕ್ಕೆ ಜನರು ಸಹಕರಿಸಬೇಕೆಂದು ಹೇಳಿದರು.



ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಯೋಜನೆಗೆ ಶಾಸಕ ಪೊನ್ನಣ್ಣ ಶನಿವಾರ ಭೂಮಿಪೂಜೆ ನೆರವೇರಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆ ಸಮಿತಿಯ ಅಧ್ಯಕ್ಷ ತಿತೀರ ಧರ್ಮಜ ಉತ್ತಪ್ಪ, ಬ್ಲಾಕ್ ಅಧ್ಯಕ್ಷ ಮಿದೇರಿರ ನವೀನ್, ಬ್ಲಾಕ್ ಪ್ರಧಾನ ಕಾರ್ಯದರ್ಶಿ ಎ.ಜೆ.ಬಾಬು, ವಲಯ ಅಧ್ಯಕ್ಷ ನವೀನ್, ಮಾಯಮುಡಿ ಪಂಚಾಯಿತಿ ಅಧ್ಯಕ್ಷೆ ಹಾಗೂ ತಾಲೂಕು ಪ್ರಚಾರ ಸಮಿತಿ ಅಧ್ಯಕ್ಷ ಟಾಟು ಮೊಣ್ಣಪ್ಪ, ಜಿಲ್ಲಾ ಗ್ಯಾರಂಟಿ ಯೋಜನಾ ಉಪಾಧ್ಯಕ್ಷೆ ಪಂಕಜ, ಅಜ್ಜಿಕುಟ್ಟಿರ ಗಿರೀಶ್, ವಿಲ್ಸನ್, ಮದ್ಯಸ್ತ ಫಿಲೋಮಿನಾ, ಅಪ್ರೋಜ್, ಅರಣ್ಯ ಅಧಿಕಾರಿಗಳು, ಐಟಿಡಿಪಿ ಇಲಾಖೆಯ ಅಧಿಕಾರಿ ಉಪಸ್ಥಿತರಿದ್ದರು.

ಮಾ.10, ಪಾಲೆಮಾಡು ಶ್ರೀ ಭದ್ರಕಾಳಿ ದೇವಾಲಯದ ವಾರ್ಷಿಕ ಉತ್ಸವ

ನಾಪೋಕ್ಲು: ಸಮೀಪದ ಹೊದ್ದೂರು ಗ್ರಾಮದ ಪಾಲೆಮಾಡು ಶ್ರೀ ಭದ್ರಕಾಳಿ ದೇವಾಲಯದ 5ನೇ ವರ್ಷದ ವಾರ್ಷಿಕ ಉತ್ಸವವು ಇದೇ ಹತ್ತರಂದು ಜರುಗಲಿದೆ. ಅಂದು ಬೆಳಿಗ್ಗೆ 9ಕ್ಕೆ ಗಣಪತಿ ಹೋಮ, ಕಳಸ ಅಭಿಷೇಕ ಪೂಜೆ, ಮಹಾಪೂಜೆ, ದರ್ಶನ, ಪ್ರಸಾದ ವಿತರಣೆ ಬಳಿಕ ಅನ್ನ ಸಂತರ್ಪಣೆಗಳು ಜರುಗಲಿದೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.

ಸಂಪಾಜೆಯಲ್ಲಿ ಕಾಡಾನೆಗಳ ದಾಳಿ : ಬೆಳೆ ನಾಶ



ಆನೆಗಳ ಹಿಂಡು ದಾಳಿ ಮಾಡಿ ಕೃಷಿ ಗಿಡಗಳನ್ನು ನಾಶಪಡಿಸಿರುವುದು.

ನಾಪೋಕ್ಲು, ಮಾ.7–ಸಂಪಾಜೆ ಗ್ರಾಮದಲ್ಲಿ ನಿರಂತರ ಕಾಡಾನೆಗಳು ದಾಳಿ ಮಾಡಿ ಅಪಾರ ಪ್ರಮಾಣದ ಬೆಳೆಯನ್ನು ನಾಶಪಡಿಸಿರುವ ಘಟನೆ ಜರುಗಿದೆ.

ಕೊಡಗು ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಭಾಗವಾದ ಸಂಪಾಜೆ ಗ್ರಾಮದ ಎಸ್.ಪಿ ಕರುಣಾಕರ ಅವರ ತೋಟಕ್ಕೆ ಆನೆಗಳ ಹಿಂಡು ದಾಳಿ ಮಾಡಿರುವುದಲ್ಲದೆ ಗ್ರಾಮದ ಇತರ ಕೃಷಿಕರ ತೋಟಗಳಿಗೆ ಕಾಡಾನೆಗಳು ಲಗ್ಗೆ ಇಡುತ್ತಿರುವುದರಿಂದ ಅಪಾರ ಪ್ರಮಾಣದ ನಷ್ಟ ಸಂಭವಿಸುತ್ತಿದೆ. ತೋಟಕ್ಕೆ ದಾಳಿ ನಡೆಸಿದ ಆನೆಗಳು ಅಡಿಕೆ, ತೆಂಗು, ಬಾಳೆ ಇತರ ಬೆಳೆಗಳನ್ನು ನಾಶಪಡಿಸಿವೆ.

ಈ ಭಾಗದಲ್ಲಿ ನಿರಂತರವಾಗಿ ಕಾಡಾನೆಗಳು ದಾಳಿ ಮಾಡುತ್ತಿದ್ದು, ರೈತರು ಸಂಕಷ್ಟ ದಲ್ಲಿ ಜೀವನ ನಡೆಸುತ್ತಿದ್ದು ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಹಾಗೂ ನಷ್ಟಕ್ಕೆ ಒಳಗಾದ ಕೃಷಿಕರಿಗೆ ನಷ್ಟ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಇಂದು ಮಹಿಳಾ ದಿನಾಚರಣೆ

ಮಡಿಕೇರಿ ಮಾ.7–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಸಹಯೋಗದಲ್ಲಿ ಮಾ.8 ರ ಬೆಳಗ್ಗೆ 10.30ಕ್ಕೆ ನಗರದ ಗಾಂಧಿ ಭವನದಲ್ಲಿ ಅಂತ ರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು, ಶಾಸಕರಾದ ಡಾ.ಮಂತರ್‌ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್, ರಾಜ್ಯಸಭಾ ಸದಸ್ಯ ಅಜಯ್ ಮಾಕನ್, ಎಂಎಲ್ಸಿ ಸುಜಾ ಕುಶಾಲಪ್ಪ, ಎಸ್.ಎಲ್.ಬೋಜೇಗೌಡ, ಡಾ.ಧನಂಜಯ ಸರ್ಜಿ, ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ, ನಗರಸಭೆ ಅಧ್ಯಕ್ಷೆ ಕಲಾವತಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ತಾಲೂಕು ಅಧ್ಯಕ್ಷ ಮಂದ್ರಿರ ಮೋಹನ್‌ದಾಸ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ. ಪ್ರಸಾದ್, ಡಿಸಿ ಎಸ್.ಜೆ.ಸೋಮಶೇಖರ್, ಜಿ.ಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಎಸ್ಪಿ ಆರ್.ಎನ್.ಬಿಂದುಮಣಿ, ಪಾಲ್ಗೊಳ್ಳುವರೆಂದು ಪ್ರಕಟಣೆ ತಿಳಿಸಿದೆ.

ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ ಸಭೆ

ಮಡಿಕೇರಿ, ಮಾ.7–ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ ಸಭೆ ನಡೆಯಿತು.

ಸಭೆಯಲ್ಲಿ ಯೋಜನಾ ಸಮನ್ವಯಾಧಿಕಾರಿ ಎಸ್.ಹೊನ್ನೇಗೌಡ ಅವರು ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಸ್ವೀಕೃತವಾಗಿರುವ ಅನುಮೋದಿಸಿರುವ ಹಾಗೂ ತಿರಸ್ಕರಿಸಿರುವ ಅರ್ಜಿಗಳ ವಿವರವನ್ನು ಸಭೆಗೆ ತಿಳಿಸಿದರು.

ಸಭೆಯಲ್ಲಿ ಬಾಳೆಕೋವು ಹಾಡಿಯಿಂದ ನಾಗರಹೊಳೆ ಗದ್ದೆಹಾಡಿ, ಗೋಣಿಗದ್ದೆ ಹಾಡಿ ಕೊಡಂಗೆ ಹಾಡಿ, ನಾಣಚ್ಚಿಗದ್ದೆ ಹಾಡಿ ಮತ್ತು ಕೊಲ್ಲಿ ಹಾಡಿಯಲ್ಲಿ ಭೂಗತ ಕೇಬಲ್ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಸೆಸ್ಕ್ ವತಿಯಿಂದ ನಿರ್ವಹಿಸಲು ಅನುಮೋದನೆ ನೀಡಲಾಯಿತು. ಸಮುದಾಯ ಹಕ್ಕು ಪತ್ರ ಪಡೆದಿರುವ ಕ್ಲೇಮುದಾರರಿಗೆ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಲು ಜಂಟಿ ಗುರುತಿನ ಚೀಟಿ ನೀಡಲು ತೀರ್ಮಾನಿಸಲಾಯಿತು.

ಸಾಕ್ಷ್ಯಗಳ ಕೊರತೆಯಿಂದ ತಿರಸ್ಕರಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಸಂಬಂಧಿಸಿದ ಇಲಾಖೆಗಳು ಜಂಟಿ ಸ್ಥಳ ಮಹಜರ್ ನಡೆಸಿ ಈ ವರದಿಯನ್ನು ಸಾಕ್ಷಿಯಾಗಿ ಪರಿಗಣಿಸಲು ಕ್ರಮವಹಿಸಿ ನಿಗದಿತ ನಮೂನೆಯಲ್ಲಿ ಮಾಹಿತಿ ನೀಡಲು ಗ್ರಾಮ ಮಟ್ಟದ ಅರಣ್ಯ ಹಕ್ಕು ಸಮಿತಿಗಳಿಗೆ ನಿರ್ದೇಶನ ನೀಡಲು ತೀರ್ಮಾನಿಸಲಾಯಿತು.

ಶಾಸಕ ಪೊನ್ನಣ್ಣರನ್ನು ಸನ್ಮಾನಿಸಿದ ಯುಕೊ ಸಂಘಟನೆ

ಗೋಣಿಕೊಪ್ಪ, ಮಾ.7–ಕೊಡವ ಅಭಿವೃದ್ಧಿ ನಿಗಮ ಸ್ಥಾಪನೆಗೆ ಕಾರಣರಾದ ಶಾಸಕ ಪೊನ್ನಣ್ಣರವರನ್ನು ಗೋಣಿಕೊಪ್ಪಲುವಿನಲ್ಲಿ ಸನ್ಮಾನಿಸುವ ಮೂಲಕ ಸಂಭ್ರಮ ಆಚರಿಸಿದರು.

ಯುಕೊ ಸಂಘಟನೆ ಕಾರ್ಯಕರ್ತರು ಗೋಣಿಕೊಪ್ಪಲುವಿನಲ್ಲಿ ಯುಕೋ ಸಂಘಟನೆ ಅಧ್ಯಕ್ಷರು, ಸದಸ್ಯರುಗಳು ಶಾಸಕರನ್ನು ಆತ್ಮೀಯವಾಗಿ ಬರಮಾಡಿಕೊಂಡು ಸನ್ಮಾನಿಸುವ ಮೂಲಕ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು. ಶಾಸಕರೊಂದಿಗೆ ಯುಕೋ ಸಂಘಟನೆಯ ಅಧ್ಯಕ್ಷ ಮಂಜು ಚಿನ್ನಪ್ಪನವರನ್ನು ಸಹ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪೊನ್ನಣ್ಣರ ಪತ್ನಿ ಕಾಂಚನ್ ಪೊನ್ನಣ್ಣ ಉಪಸ್ಥಿತರಿದ್ದರು.



ಕಚೇರಿಯಲ್ಲಿ ಖಾಲಿ ಕುರ್ಚಿ ಕಂಡು ಆಕ್ರೋಶಗೊಂಡ ಶಾಸಕ ಪೊನ್ನಣ್ಣ

ಗೋಣಿಕೊಪ್ಪ, ಮಾ.7–ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕಚೇರಿಗೆ ದಿಢೀರ್ ಭೇಟಿ ನೀಡಿದ ಶಾಸಕ ಪೊನ್ನಣ್ಣ ಸಮಯ ಪಾಲನೆ ಮಾಡದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಪೊನ್ನಂಪೇಟೆ ತಾಲೂಕು ತಿತಿಮತಿ ಭಾಗದ ಪ್ರವಾಸದಲ್ಲಿದ್ದ ಶಾಸಕರು ಪೊನ್ನಂಪೇಟೆ ಪರಿಶಿಷ್ಟ ವರ್ಗಗಳ ಕಲ್ಯಾಣಧಿಕಾರಿಗಳ ಕಚೇರಿಗೆ ದಿಢೀರ್ ಭೇಟಿ ನೀಡಿದರು. ಬೆಳಗ್ಗೆ 10.30 ಆಗಿದ್ದರೂ ಖಾಲಿ ಕುರ್ಚಿಗಳನ್ನು ಕಂಡು ಕಚೇರಿಗೆ ಆಗಮಿಸದ ಅಧಿಕಾರಿಗಳ ಗೈರು ಹಾಜರಿ ಬಗ್ಗೆ ಆಕ್ರೋಶಗೊಂಡು ಕೂಡಲೇ ಹಿರಿಯ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ವಿವರಣೆ ಕೇಳಿದರು. ಈ ವೇಳೆ ದೌಡಾಯಿಸಿಕೊಂಡು ಆಗಮಿಸಿದ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರಲ್ಲದೆ ವಿವರಣೆ ನೀಡುವಂತೆ ಸೂಚಿಸಿದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ತಿತೀರ ಧರ್ಮಜ ಉತ್ತಪ್ಪ, ಬ್ಲಾಕ್ ಅಧ್ಯಕ್ಷ ಮಿದೇರೀರ ನವೀನ್, ಬ್ಲಾಕ್ ಪ್ರಧಾನ ಕಾರ್ಯದರ್ಶಿ ಎ.ಜೆ.ಬಾಬು, ತಾಲೂಕು ಪ್ರಚಾರ ಸಮಿತಿ ಅಧ್ಯಕ್ಷ ಟಾಟು ಮೊಣ್ಣಪ್ಪ, ವಲಯ ಅಧ್ಯಕ್ಷ ನವೀನ್, ಜಿಲ್ಲಾ ಗ್ಯಾರಂಟಿ ಯೋಜನಾ ಸಮಿತಿಯ ಉಪಾಧ್ಯಕ್ಷೆ ಪಂಕಜ, ವಿಲ್ಸನ್, ಅಪ್ರೂಜ್, ಫಿಲೋಮೀನಾ, ಮಧ್ಯಸ್ತಾ ಉಪಸ್ಥಿತರಿದ್ದರು.



ದಿಢೀರ್ ಭೇಟಿ ನೀಡಿದ ಶಾಸಕ ಪೊನ್ನಣ್ಣ ಸಮಯ ಪಾಲಿಸದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಶ್ರೀಮತಿ ಪ್ಯಾಟ್ಸಿ ನಿಧನ

ಮೈಸೂರು: ಬೆಂಗಳೂರಿನ ನಿವಾಸಿ ಕುಟ್ಟಂಡ ಶ್ರೀಮತಿ ಪ್ಯಾಟ್ಸಿ(74) ಇಂದು ಬೆಳಿಗ್ಗೆ ನಿಧನರಾದರು.

ಮೂಲತಃ ವಿರಾಜಪೇಟೆ ತಾಲೂಕಿನ ಕುಕ್ಲೂರು ಗ್ರಾಮದ ಕುಟ್ಟಂಡ ನೇತಾಜಿ (ತಮನೆ– ಕಿರಿಯ ಮಾದ)ಯವರ ಪತ್ನಿಯಾದ ಇವರು, ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನಲ್ಲಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ನಿವೃತ್ತರಾದ ನಂತರವೂ ಬೆಂಗಳೂರಿನ ಮಾಗಡಿಯಲ್ಲಿನ ಬಿಇಎಲ್ ಬಡಾವಣೆಯಲ್ಲಿಯೇ ವಾಸವಾಗಿದ್ದರು. ಕೆಲ ಕಾಲದಿಂದ ಅಸ್ವಸ್ಥರಾಗಿದ್ದ ಪ್ಯಾಟ್ಸಿಯವರು ಇಂದು ಬೆಳಿಗ್ಗೆ 11.15ರ ಸಮಯದಲ್ಲಿ ನಿಧನರಾದರು. ಮೃತರು ಪತಿ, ಪುತ್ರ ಪುತ್ರಿಯರನ್ನು ಅಗಲಿದ್ದಾರೆ.



ಮೃತರ ಅಂತ್ಯಕ್ರಿಯೆ ನಾಳೆ (ಭಾನುವಾರ) ಬೆಳಿಗ್ಗೆ ಕೆಂಗೇರಿಯ ರುದ್ರಭೂಮಿಯಲ್ಲಿ ನೆರವೇರುವುದೆಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾ.ನಗರ ಮುಂದುವರಿದ ಜಿಲ್ಲೆ ಮಾಡುವ ಗುರಿ

ಸಂವಾದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಮಾಹಿತಿ

ಚಾಮರಾಜನಗರ: ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ಹಿಂದುಳಿದ ಜಿಲ್ಲೆಯ ಹಣೆಪಟ್ಟಿ ಕಳಚಿ ಮುಂದುವರಿದ ಜಿಲ್ಲೆಯಾಗಿ ಮಾಡುವ ಚಿಂತನೆ ಹೊಂದಲಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಕರ್ತರ ಸಂಘದ ವತಿಯಿಂದ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಜಿಲ್ಲೆಯಲ್ಲಿ ಶೇ.52 ರಷ್ಟು ಅರಣ್ಯ ಪ್ರದೇಶವಿದ್ದು ಮಹದೇಶ್ವರ ಬೆಟ್ಟ, ಬಿಳಿಗಿರಿರಂಗನಬೆಟ್ಟ, ಹಿಮವದ್ ಗೋಪಾಲಸ್ವಾಮಿಬೆಟ್ಟ ಸೇರಿದಂತೆ ಇತರೆ ಪ್ರವಾಸಿ ತಾಣಗಳಿವೆ. ಇವುಗಳನ್ನು ಹೊರತುಪಡಿಸಿ ಉಳಿದ ಹಲವು ಪ್ರವಾಸಿ ತಾಣಗಳು ಜಿಲ್ಲೆಯಲ್ಲಿದ್ದು ಅವುಗಳನ್ನು ಅಭಿವೃದ್ಧಿಪಡಿಸಿ ಜಿಲ್ಲೆಯ ಯುವಜನತೆಗೆ ಉದ್ಯೋಗ ಕೊಡಬೇಕು. ಆ ಮೂಲಕ ವಿದೇಶಿಯರನ್ನು ಆಕರ್ಷಿಸಲು ಅಗತ್ಯ ಕ್ರಮವಹಿಸಲಾಗುವುದು ಎಂದರು.

ಈಗಾಗಲೇ ಸುವರ್ಣಾವತಿ ಜಲಾಶಯದಲ್ಲಿ ಜಲಕ್ರೀಡೆ ಆಯೋಜಿಸಲಾಗಿದ್ದು ಅಲ್ಲಿಯೂ ಪ್ರವಾಸಿ ತಾಣವನ್ನಾಗಿಸುವುದು. ಚಾ.ನಗರದಲ್ಲಿ ಪಾರ್ಕ್‌ಗಳ ಅಭಿವೃದ್ಧಿ ಹಾಗೂ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು ಎಂದರು.

ಜಿಲ್ಲೆಯಲ್ಲಿ ಬಾಲ್ಯವಿವಾಹ ಹೆಚ್ಚಾಗಿದ್ದು ಜಿಲ್ಲೆಯ ಒಂದೊಂದು ತಾಲೂಕಿನಲ್ಲಿಯೂ ತಲಾ ಒಂದೊಂದು ಗ್ರಾಮವನ್ನು ಆಯ್ಕೆ ಮುಕ್ತ ಗ್ರಾಮವನ್ನಾಗಿ ಮಾಡಲು ಕ್ರಮವಹಿಸಲಾಗುವುದು. ಹನೂರು ತಾಲೂಕು ವ್ಯಾಪ್ತಿಯಲ್ಲಿರುವ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.



ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವ ಜಿಲ್ಲಾಧಿಕಾರಿ ಶ್ರೀರೂಪ.

ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಿ ವಾರಾಂತ್ಯದಲ್ಲಿ ಅವಕಾಶ ಕಲ್ಪಿಸಿದರೆ ಹೆಚ್ಚಿನ ಪ್ರವಾಸಿಗರು ಬರಲಿದ್ದಾರೆ. ಕುಶಾಲನಗರ ಮಾದರಿಯಲ್ಲಿಯೇ ಒಡೆಯರಪಾಳ್ಯ ಟಿಬೆಟಿಯನ್ ಕ್ಯಾಂಪ್ ಅನ್ನು ಪ್ರವಾಸಿ ತಾಣವನ್ನಾಗಿ ಮಾಡಲು ಯೋಜಿಸಲಾಗುವುದು ಎಂದು ಹೇಳಿದರು. ಇದರೊಂದಿಗೆ ಕೃಷಿ ಪ್ರವಾಸೋದ್ಯಮಕ್ಕೂ ಗಮನಹರಿಸಲಾಗುವುದು. ಅಲ್ಲದೇ ಜಿಲ್ಲೆಯಲ್ಲಿನ ಮಾನವ–ಪ್ರಾಣಿ ಸಂಘರ್ಷ ತಡೆಗೆ ಯೋಜನೆ ರೂಪಿಸಲಾಗಿದೆ ಎಂದರು.

ಜಿಲ್ಲೆಯ ಕಾಡಂಚಿನ ಗ್ರಾಮಗಳಲ್ಲಿ ರೇಷ್ಮೆ ಬೆಳೆಗೆ ಪ್ರೋತ್ಸಾಹಿಸುವ ಮೂಲಕ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಬಹುದು. ಆ ನಿಟ್ಟಿನಲ್ಲಿ ರೇಷ್ಮೆ ಬೆಳೆ ಬೆಳೆಯಲು ರೈತರಿಗೆ ಅರಿವು ಮೂಡಿಸಲು ಕ್ರಮವಹಿಸಲಾಗುವುದು, ಏರೋ ವಾಟರ್ ಘಟಕಗಳ ಸ್ಥಾಪನೆಗೆ ಆದ್ಯತೆ ನೀಡಲಾಗುವುದು ಎಂದರು.

ಚಾ.ನಗರವನ್ನು ಸ್ವಚ್ಛ ನಗರವನ್ನಾಗಿ ಮಾಡುವ ನಿಟ್ಟಿನಲ್ಲಿ ಪೌರಕಾರ್ಮಿಕರಿಂದ ಸ್ವಚ್ಛಗೊಳಿಸಿದ ನಂತರ ಸಿಸಿ ಕ್ಯಾಮರಾ ಕಣ್ಗಾವಲಿನ ಮೂಲಕ ಆ ನಂತರ ಕಸ ಹಾಕುವವರಿಗೆ ದಂಡ ವಿಧಿಸಲು ಕ್ರಮವಹಿಸಲಾಗುವುದು. ಜಿಲ್ಲೆಯನ್ನು ಪ್ಲಾಸ್ಟಿಕ್ ಮುಕ್ತ ಮಾಡಲಾಗುವುದು ಎಂದು ಹೇಳಿದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಸಂವಾದ ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ಲಕ್ಕೂರು ಎಸ್. ಪ್ರಸಾದ್, ಪತ್ರಕರ್ತರು ಹಾಜರಿದ್ದರು.

ಮಹಿಳೆಯರು ಉತ್ಪಾದಿಸಿರುವ ಉತ್ಪನ್ನಗಳ ವಸ್ತು ಪ್ರದರ್ಶನ, ಮಾರಾಟ ಮೇಳಕ್ಕೆ ಚಾಲನೆ

ಚಾಮರಾಜನಗರ, ಮಾ.7– ಸಂಜೀವಿನಿ ಕೆಎಸ್‌ಆರ್‌ಎಲ್‌ಪಿಎಸ್ ಯೋಜನೆಯಡಿ ಮಹಿಳಾ ಸ್ವ ಸಹಾಯ ಸಂಘದ ಗುಂಪುಗಳ ಸದಸ್ಯರು ಉತ್ಪಾದಿಸಿರುವ ಮೂರು ದಿನಗಳ ಉತ್ಪನ್ನಗಳ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಮಾ.7 ರಿಂದ 9 ರವರೆಗೆ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಆಯೋಜಿಸಲಾಗಿರುವ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಶಾಸಕರು ಉದ್ಘಾಟಿಸಿ ಮಾರಾಟ ಮಳಿಗೆಗಳನ್ನು ವೀಕ್ಷಿಸಿದರು.

ಪ್ರತಿ ಮಳಿಗೆಗೂ ಭೇಟಿ ನೀಡಿ ಅಲ್ಲಿ ಇಡಲಾಗಿದ್ದ ವಿವಿಧ ಬಗೆಯ ಉತ್ಪನ್ನಗಳು ಹಾಗೂ ತಯಾರಿ, ಆದಾಯ ಕುರಿತು ಮಹಿಳಾ ಸದಸ್ಯರಿಂದಲೇ ಶಾಸಕರು ಮಾಹಿತಿ ಪಡೆದರು. ಹಲವು ಮಳಿಗೆಗಳಲ್ಲಿ ಶಾಸಕರು ಉತ್ಪನ್ನಗಳನ್ನು ಖರೀದಿಸುವ ಮೂಲಕ ಮಾರಾಟಕ್ಕೆ ಉತ್ತೇಜನ ನೀಡಿದರು. ಮಳಿಗೆಯೊಂದರಲ್ಲಿ ಮಾರಾಟಕ್ಕೆ ಇಡಲಾಗಿದ್ದ ಪಾನಿಪುರಿಯನ್ನು ಶಾಸಕರು ಸವಿದರು.




ಮಾರಾಟ ಮೇಳಕ್ಕೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಮಹಿಳೆಯರು ಹಲವು ಗೃಹ ಕೈಗಾರಿಕೆಗಳಲ್ಲಿ ತೊಡಗಿ ಹಪ್ಪಳ, ಉಪ್ಪಿನಕಾಯಿ, ಜೇನುತುಪ್ಪ, ಬಿದಿರು ಬುಟ್ಟಿ ಸೇರಿದಂತೆ ಅನೇಕ ಕರಕುಶಲ ವಸ್ತುಗಳು, ತಿನಿಸುಗಳನ್ನು ತಯಾರಿಸುತ್ತಿದ್ದಾರೆ. ಸ್ವಾವಲಂಬಿ ಜೀವನಕ್ಕಾಗಿ ಮಹಿಳೆಯರು ಇಂದು ಹೆಚ್ಚು ಸಂಖ್ಯೆಯಲ್ಲಿ ಇಂತಹ ಉತ್ಪನ್ನಗಳನ್ನು ಸಹಾಯ ಸಂಘಗಳ ಮೂಲಕ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿದ್ದು, ಆರ್ಥಿಕ ಸಬಲೀಕರಣಕ್ಕೂ ಅನುಕೂಲವಾಗಿದೆ ಎಂದು ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಪಂ ಸಿಇಓ ಅಧಿಕಾರಿ ಮೋನಾ ರೋತ್, ಉಪ ಕಾರ್ಯದರ್ಶಿಗಳು ಹಾಗೂ ಎನ್‌ಆರ್‌ಎಲ್‌ಎಂ ನೋಡಲ್ ಅಧಿಕಾರಿ ಶೃತಿ, ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಕೌಶಲ್ಯಾಭಿವೃದ್ಧಿ ಇಲಾಖೆಯ ಮಲ್ಲೇಶ್, ವೆಂಕಟನಾಯಕ್ ಇನ್ನಿತರರಿದ್ದರು.

ಕಮಲ ಬಿಟ್ಟು ಕೈ ಹಿಡಿದ ಲಿಂಗಪ್ಪ



ಬೇಗೂರು: ಗ್ರಾಮದ ಬಿಜೆಪಿ ಮುಖಂಡ ಲಿಂಗಪ್ಪ(ಗುಂಡಪ್ಪ) ಬಿಜೆಪಿ ತೊರೆದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಸಮ್ಮುಖದಲ್ಲಿ ಕಾಂಗ್ರೆಸ್ ಕೈ ಹಿಡಿದರು.

ಬೇಗೂರು ಬಿಜೆಪಿ ಮುಖಂಡ ಲಿಂಗಪ್ಪ(ಗುಂಡಪ್ಪ) ಮನೆಗೆ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಆಗಮಿಸಿದಾಗ ಗುಂಡಪ್ಪ ಸ್ವಾಗತಿಸಿದ ಬಳಿಕ ಅಧಿಕೃತವಾಗಿ ಕಾಂಗ್ರೆಸ್‌ಗೆ ಸೇರಿಕೊಂಡರು. ಪಕ್ಷಕ್ಕೆ ಸೇರ್ಪಡೆಗೊಂಡ ಲಿಂಗಪ್ಪರನ್ನು ಶಾಸಕರು ಬರ ಮಾಡಿಕೊಂಡರು. ಈ ಸಮಯದಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್. ನಂಜುಂಡಪ್ರಸಾದ್, ಬೇಗೂರು ಫ್ಯಾಕ್ಸ್ ಉಪಾಧ್ಯಕ್ಷ ಸದಾನಂದ, ಯಜಮಾನ ನಾರಾಯಣ, ಗ್ರಾಪಂ ಸದಸ್ಯ ಬಿ.ಎನ್.ಪುನೀತ್, ಫ್ಯಾಕ್ಸ್ ನಿರ್ದೇಶಕ ಚಂದ್ರು, ಮುಖಂಡರಾದ ದೊಡ್ಡಹುಂಡಿ ಸತೀಶ್, ಬಿ.ಆರ್.ಮಹದೇವಸ್ವಾಮಿ, ಬೆಳಚಲವಾಡಿ ಶಿವಣ್ಣ, ಬಡ್ಡಿ ನಾಗಪ್ಪ,ಸುರೇಶ್, ಆಟೋ ಮಹೇಶ್ ಸೇರಿದಂತೆ ಹಲವರಿದ್ದರು.

ಇಂದು ಕೊಳ್ಳೆಗಾಲದ ಕೆಲವೆಡೆ ವಿದ್ಯುತ್ ವ್ಯತ್ಯಯ

ಕೊಳ್ಳೇಗಾಲ: ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ, ಮಾ.8 ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಭೀಮನಗರ, ನೂರ್ ಮೊಹಲ್ಲಾ, ಆದರ್ಶನಗರ, ಆಶ್ರಯ ಬಡಾವಣೆ, ದೇವಾಂಗಪೇಟೆ, ದೊಡ್ಡನಾಯಕರ ಬೀದಿ, ಬೆಂಡ್ರಳ್ಳಿ– ಬೂದಿತಿಟ್ಟು, ಮುಡಿಗುಂಡ, ಶಂಕನಪುರ, ಬಾಪುನಗರ, ಕೊಳ್ಳೇಗಾಲ ಮೋಳೆ, ದಾಸನಪುರ, ಹರಳೆ, ಹಳೆ ಅಣಗಳ್ಳಿ ಹಾಗೂ ತಾಲೂಕಿನ ಉತ್ತಂಬಳ್ಳಿ, ತೇರಂಬಳ್ಳಿ, ಗೊಬ್ಬಳಿಪುರ, ಕುಣಗಳ್ಳಿ, ಸೂರಪುರ, ಮುಳ್ಳೂರು, ಹಳೇ ಹಂಪಾಪುರ, ಹೊಸ ಹಂಪಾಪುರ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಜಾನಪದ ವಿವಿ ಜಿಲ್ಲೆಯ ಕೈ ತಪ್ಪಿದ್ದು ಚಾರಿತ್ರಿಕ ಮೋಸ

ಯಳಂದೂರು, ಮಾ.7– ಜನಪದ ಕಲೆಗಳ ತವರೂರಾದ ಚಾಮರಾಜನಗರ ಜಿಲ್ಲೆಗೆ ಒಲಿಯಬೇಕಾದ ಜಾನಪದ ವಿಶ್ವವಿದ್ಯಾಲಯ ಬೇರೆ ಜಿಲ್ಲೆಯ ಪಾಲಾಗಿದ್ದು ಚಾರಿತ್ರಿಕ ಮೋಸ ಎಂದು ವಕೀಲ ಗೌಡಹಳ್ಳಿ ಮಹೇಶ್ ವಿಷಾದಿಸಿದರು.

ತಾಲೂಕಿನ ಮಲಾರಪಾಳ್ಯ ಗ್ರಾಮದಲ್ಲಿ ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜು ಕೊಳ್ಳೇಗಾಲ ಇವರ ವತಿಯಿಂದ ಹಮ್ಮಿಕೊಂಡಿರುವ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಜನಪದ ಮಹಾಕಾವ್ಯಗಳು ಕುರಿತ ಉಪನ್ಯಾಸ ನೀಡಿ ಮಾತನಾಡಿದರು. ಫಿನ್‌ಲ್ಯಾಂಡಿನ ಕಲ್ಯೆವಾಲವನ್ನು ಹೊರತುಪಡಿಸಿದರೆ ಈ ಜಗತ್ತಿನಲ್ಲಿ ಎರಡನೇ ಅತಿ ದೊಡ್ಡ ಜನಪದ ಮಹಾಕಾವ್ಯ ಪರಂಪರೆ ಎಂದರೆ ಅದು ಮಲೆಮಹದೇಶ್ವರ ಕಾವ್ಯ ಪರಂಪರೆ. ಜಿಲ್ಲೆಯಲ್ಲಿ ಮಹದೇಶ್ವರ ಕಾವ್ಯ, ಬೀಸು ಕಂಸಾಳೆ, ಗೊರವರ ಕುಣಿತ, ಮಂಟೆಸ್ವಾಮಿ ಕಾವ್ಯ, ಲಂಬಾಣಿ ನೃತ್ಯ, ಪಿನಾಸಿ ನೃತ್ಯ, ಕೋಲಾಟ, ಸೋಬಾನೆ ಪದ, ವೀರ ಮಕ್ಕಳ ಕುಣಿತ, ಸುಗ್ಗಿ ಕುಣಿತ, ಬೀಸು ಕಲ್ಲಿನ ಪದ ಸೇರಿದಂತೆ ಹಲವು ಪ್ರಕಾರದ ಜನಪದ ಕಲೆಗಳ ಹಿನ್ನೆಲೆ ಇದೆ ಎಂದರು.

ಚಾಮರಾಜನಗರ ಜಿಲ್ಲೆಯ ಪ್ರತಿ ಐದು ಮಂದಿಯಲ್ಲಿ ಒಬ್ಬರಿಗೆ ಜನಪದ, ಇಬ್ಬರಿಗೆ ರಂಗಭೂಮಿ, ಮತ್ತಿಬ್ಬರಿಗೆ ಜನಪದ ಮತ್ತು ರಂಗಭೂಮಿ ಎರಡರ ಪರಿಚಯವೂ ಇದೆ. ಇಂತಹ ಜಿಲ್ಲೆಗೆ ಜಾನಪದ ವಿವಿ ಕೈ ತಪ್ಪಲು ರಾಜಕೀಯ ಇಚ್ಛಾಶಕ್ತಿಯೂ ಕಾರಣವಾಗಿದೆ. ಮತ್ತೆ ಇದನ್ನು ಜಿಲ್ಲೆಗೆ ದಕ್ಕಿಸಿಕೊಳ್ಳುವ ಕೆಲಸವನ್ನು ಎಲ್ಲರೂ ಸೇರಿ ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ದೊಡ್ಡ ಹೋರಾಟದ ಅಗತ್ಯವಿದೆ ಎಂದರು.



ವಾರ್ಷಿಕ ಶಿಬಿರದಲ್ಲಿ ವಕೀಲ ಗೌಡಹಳ್ಳಿ ಮಹೇಶ್ ಮಾತನಾಡಿದರು.

ಯೂತ್ ಫಾರ್ ಸೇವಾ ಸಂಸ್ಥೆಯ ಜಿಲ್ಲಾ ಸಂಚಾಲಕ ತೇಜನಾಯಕ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಅಮೃತೇಶ್ವರ್ ಮಾತನಾಡಿದರು. ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ರಾಜೇಶ್‌ರಂಗಯ್ಯ, ಸ್ಕೌಟ್ ಅಂಡ್ ಗೈಡ್ಸ್‌ನ ಪ್ರದೀಪ್, ಎಸ್‌ಡಿಎಂಸಿ ಸದಸ್ಯರಾದ ಸುಂದ್ರಮ್ಮ, ಕವಿತ, ಶೃತಿ, ಶಿಬಿರಾಧಿಕಾರಿಗಳಾದ ಮಂಜಪ್ಪ ಸಹ ಶಿಬಿರಾಧಿಕಾರಿ ಮಹೇಶ್, ಪ್ರಕಾಶ್, ಪುಟ್ಟಮ್ಮ, ಮಮತ ಹಾಗೂ ಶಿಬಿರಾರ್ಥಿಗಳು ಇದ್ದರು.

ಮಾಡ್ರಹಳ್ಳಿ ಬಳಿ ಜೂಜುಕೋರರು ವಶಕ್ಕೆ

ಗುಂಡ್ಲುಪೇಟೆ: ತಾಲೂಕಿನ ಮಾಡ್ರಹಳ್ಳಿ ಗ್ರಾಮದ ಹೊರವಲಯದಲ್ಲಿ ಜೂಜಾಡುತ್ತಿದ್ದ 9 ಜನರನ್ನು ಪಟ್ಟಣದ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಗ್ರಾಮದ ಹೊರವಲಯದಲ್ಲಿ ದೊಡ್ಡ ಪ್ರಮಾಣದ ಜೂಜಾಟ ನಡೆಯುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ಸರ್ಕಲ್ ಇನ್ಸ್ ಪೆಕ್ಟರ್ ಎನ್.ಜಯಕುಮಾರ್ ಹಾಗೂ ಸಬ್ ಇನ್ಸ್ ಪೆಕ್ಟರ್ ನರೇಶ್ ಕುಮಾರ್ ಅವರ ನೇತೃತ್ವದಲ್ಲಿ ಪೊಲೀಸರು ದಾಳಿ ನಡೆಸಿದರು. ಜೂಜಾಟದಲ್ಲಿ ತೊಡಗಿದ್ದ 9 ಜನರಿಂದ ಪಣಕ್ಕಿಟ್ಟಿದ್ದ 1 ಲಕ್ಷ.380 ರೂಪಾಯಿ ನಗದನ್ನು ವಶಕ್ಕೆ ಪಡೆದರು. ಕಾರ್ಯಾಚರಣೆಯಲ್ಲಿ ಸಿಬ್ಬಂದಿ ನಟೇಶ, ಕಿಶೋರ್ ಹಾಗೂ ಶಿವರಾಜು ಇದ್ದರು.

ಬೇಗೂರು ಸಿದ್ದಪ್ಪಾಜಿ ದೇವಾಲಯಕ್ಕೆ ದೇಣಿಗೆ



ಗುಂಡ್ಲುಪೇಟೆ: ತಾಲೂಕಿನ ಬೇಗೂರು ಗ್ರಾಮದಲ್ಲಿ ಸಿದ್ದಪ್ಪಾಜಿ ದೇವಾಲಯಕ್ಕೆ ಎಚ್.ಎಂ.ಗಣೇಶ್ ಪ್ರಸಾದ್ ಒಂದು ಲಕ್ಷ ರೂ. ದೇಣಿಗೆಯನ್ನು ಗೆಜ್ಜಗಾರರ ಯಜಮಾನರಿಗೆ ವಿತರಿಸಿದರು.

ಗೆಜ್ಜಗಾರರ ಸಮಾಜದ ಸೇಟು, ಮಹೇಶ್, ಸಿದ್ದರಾಜು, ಸುಂದ್ರಗೆ ಶಾಸಕರು ವೈಯಕ್ತಿಕವಾಗಿ ದೇಣಿಗೆಯನ್ನು ಹಸ್ತಾಂತರಿಸಿ ಬೇಗ ದೇವಸ್ಥಾನ ಕಟ್ಟುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್. ನಂಜುಂಡ ಪ್ರಸಾದ್, ಬೇಗೂರು ಫ್ಲ್ಯಾಕ್ ಉಪಾಧ್ಯಕ್ಷ ಸದಾನಂದ, ಗೌಡಿಕೆ ಹೋಟೆಲ್ ಸೋಮಣ್ಣ, ಯಜಮಾನರಾದ ಶಿವಮೂರ್ತಿ, ನಾರಾಯಣ, ಗ್ರಾಪಂ ಮಾಜಿ ಸದಸ್ಯರಾದ ಬಿ.ಎನ್. ಪುನೀತ್, ಬಿ.ಆರ್.ಮಹದೇವ ಸ್ವಾಮಿ, ಕೆ. ಮಹದೇವ ಶೆಟ್ಟಿ, ಫ್ಲ್ಯಾಕ್ ನಿರ್ದೇಶಕ ಚುದ್ರು ಅರಸಶೆಟ್ಟಿ ಸೇರಿದಂತೆ ಹಲವರಿದ್ದರು.

ಲೋಕಾಯುಕ್ತ ಅಧಿಕಾರಿಗಳ ಭೇಟಿ: ದೂರು ಸ್ವೀಕಾರ

ಚಾಮರಾಜನಗರ, ಮಾ.7– ಜಿಲ್ಲೆಯ ಲೋಕಾಯುಕ್ತ ಅಧಿಕಾರಿಗಳು ಕೊಳ್ಳೇಗಾಲಕ್ಕೆ ಮಾರ್ಚ್ 11 ರಂದು ಭೇಟಿ ನೀಡಿ ಅಲ್ಲಿನ ತಾಲೂಕು ಪ್ರವಾಸಿ ಮಂದಿರದಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾರ್ವಜನಿಕರಿಂದ ದೂರು ಅರ್ಜಿಗಳನ್ನು ಸ್ವೀಕರಿಸಿ ವಿಚಾರಣೆ ನಡೆಸುವರು.

ಸರ್ಕಾರಿ ಕಚೇರಿಗಳಲ್ಲಿ ಕೆಲಸದ ಅನಗತ್ಯ ವಿಳಂಬ ಹಾಗೂ ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ ನೌಕರರ ವಿರುದ್ಧ ಸಾರ್ವಜನಿಕರು ನಿಗದಿತ ನಮೂನೆ 1 ಮತ್ತು 2 ರಲ್ಲಿ ಭರ್ತಿ ಮಾಡಿ ದೂರುಗಳನ್ನು ನೀಡಬಹುದು. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಭಾನುವಾರ 8 ಮಾರ್ಚ್ 2026

ಶ್ರೀರಂಗಪಟ್ಟಣ: ಅರ್ಚಕನ ಶವ ನಾಲೆಯಲ್ಲಿ ಪತ್ತೆ: ಕೊಲೆ ಶಂಕೆ



ಸಿದ್ದಲಿಂಗಪ್ಪ

ಶ್ರೀರಂಗಪಟ್ಟಣ, ಮಾ.7–ತಾಲೂಕಿನ ಮರಳಗಾಲ ಗ್ರಾಮದ ಬಳಿಯ ಸಿಡಿಎಸ್ ನಾಲೆಯಲ್ಲಿ ಅರ್ಚಕನ ಬೈಕ್ ಮತ್ತು ಶವ ಪತ್ತೆಯಾಗಿದೆ.

ತಾಲೂಕಿನ ಮರಳ ಗಾಲ ಗ್ರಾಮದ ನಿವಾಸಿ ಅರ್ಚಕ ಸಿದ್ದ ಲಿಂಗಪ್ಪ (46) ಎಂಬುವರ ಶವ ಅನುಮಾನಾಸ್ಪದ ರೀತಿ ಯಲ್ಲಿ, ಗ್ರಾಮದ ಬಳಿ ಹರಿಯುತ್ತಿರುವ ಸಿಡಿಎಸ್ ನಾಲೆಯಲ್ಲಿ ಪತ್ತೆಯಾಗಿದ್ದು, ಸಿದ್ದಲಿಂಗಪ್ಪರನ್ನು ಹಲ್ಲೆ ನಡೆಸಿ ಬೈಕ್ ಸಮೇತ ನಾಲೆಗೆ ನೂಕಿರಬಹುದೆಂದು ಗ್ರಾಮಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ.

ಶುಕ್ರವಾರ ಸಂಕಷ್ಟ ಚತುರ್ಥಿಯ ಅಂಗವಾಗಿ ರಾತ್ರಿ 9ರ ಸಮಯದಲ್ಲಿ ಕೆ.ಶೆಟ್ಟಹಳ್ಳಿ ಬಳಿಯ ದೇವಾಲಯದಲ್ಲಿ ಪೂಜೆ ಮುಗಿಸಿ ವಾಪಸ್ ರಾತ್ರಿ ಮನೆಗೆ ಬರುತ್ತಿರುವಾಗ ಮರಳಗಾಲದ ಬಳಿಯ ಸಿಡಿಎಸ್ ನಾಲೆಯಲ್ಲಿ ಅಪಘಾತವಾಗಿ ನಾಲೆಗೆ ಬಿದ್ದು, ನೀರಿನಲ್ಲಿ ಕೊಚ್ಚಿ ಕೊಂಡು ಹೋಗಿರಬಹುದೆಂದು ಸಾರ್ವಜನಿಕರು ಊಹಿಸಿ ದ್ದರು ಆದರೆ ದಡದಲ್ಲಿ ಚಪ್ಪಲಿ ಮತ್ತು ರಕ್ತದ ಗುರುತು ಕಂಡು ಬಂದಿದ್ದು, ಯಾರೋ ರಸ್ತೆಯಲ್ಲಿ ಹೊಡೆದು ನಂತರ ನಾಲೆಗೆ ತಳ್ಳಿರಬಹುದು ಎಂದು ಶಂಕಿಸಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ ಹಿರಿಯ ಪೊಲೀಸ್ ಅಧಿ ಕಾರಿಗಳೊಂದಿಗೆ ಆಗಮಿಸಿ ಸ್ಥಳ ಪರಿ ಶೀಲಿಸಿ, ಪ್ರಕರಣದ ತನಿಖೆ ಹಾಗೂ ಆರೋಪಿ ಪತ್ತೆಯ ಬಗ್ಗೆ ತನಿಖಾಧಿಕಾರಿಗಳಿಗೆ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ನೀಡಿದರು. ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿ ಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ವಿ.ಸಿ.ಫಾರಂನಲ್ಲಿ 14 ಕೋಟಿ ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ

ಮಾ.14, ಕೇಂದ್ರ ಕ್ರೀಡಾ ಸಚಿವ ಮಾನ್ಸೂಖ್ ಮಾಂಡವಿಯ ಶಂಕುಸ್ಥಾಪನೆ



ವಿ.ಸಿ. ಫಾರಂನಲ್ಲಿ ಕಾರ್ಯಕ್ರಮದ ಸಿದ್ಧತೆಗಳನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಪರಿಶೀಲಿಸಿದರು

ಮಂಡ್ಯ, ಮಾ.7–ತಾಲೂಕಿನ ವಿ.ಸಿ. ಫಾರಂನಲ್ಲಿ ಕೇಂದ್ರ ಸರ್ಕಾರದ ಖೇಲೋ ಇಂಡಿಯಾ ಯೋಜನೆಯಡಿ 14 ಕೋಟಿ ವೆಚ್ಚದಲ್ಲಿ ನಿರ್ಮಿಸಲಿರುವ ಬಹೋಪಯೋಗಿ ಒಳಾಂಗಣ ಕ್ರೀಡಾಂಗಣಕ್ಕೆ ಈ ತಿಂಗಳ 14ರಂದು ಕೇಂದ್ರ ಸಚಿವ ಮಾನ್ಸೂಕ್ ಮಾಂಡವೀಯ ಶಂಕುಸ್ಥಾಪನೆ ನೆರವೇರಿಸುವರು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಕ್ರೀಡಾಂಗಣ ನಿರ್ಮಾಣ ಆಗಲಿರುವ ಸ್ಥಳ ಹಾಗೂ ವೇದಿಕೆ ಕಾರ್ಯಕ್ರಮದ ಸಿದ್ಧತೆಗಳನ್ನು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿ.ಸಿ.ಫಾರಂನ 1.5 ಎಕರೆ ಜಾಗದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲಿದ್ದೇವೆ. ಸ್ವತಃ ಕೇಂದ್ರದ ಕ್ರೀಡಾ ಸಚಿವರೇ ಬರುತ್ತಿದ್ದಾರೆ. ಗ್ರಾಮೀಣ ಮಕ್ಕಳಿಗೆ ಕ್ರೀಡೆಯಲ್ಲಿ ಪ್ರೋತ್ಸಾಹ ನೀಡಲು ಮುಂದಾಗಿದ್ದೇವೆ. ಅಲ್ಲದೆ, ಈ ಜಾಗದಲ್ಲಿ ಇನ್ನೂ ಹೆಚ್ಚಿನ ಕ್ರೀಡಾ ಸೌಲಭ್ಯ ಕಲ್ಪಿಸಲು ಮತ್ತಷ್ಟು ಜಾಗ ಬೇಕಿದೆ. ರಾಜ್ಯ ಸರ್ಕಾರ ಜಾಗ ಕೊಡುತ್ತದೆ ಎನ್ನುವ ನಿರೀಕ್ಷೆ ಇದೆ ಎಂದು ಹೇಳಿದರು.

ಎರಡು ವರ್ಷದ ಮಗನನ್ನು ಉಳಿಸಿಕೊಡಿ

ಅಪರೂಪ ಕಾಯಿಲೆಯಿಂದ ಬಳಲುತ್ತಿರುವ ತಾಲೂಕಿನ ಶಿವಾರ ಗ್ರಾಮದ ಎರಡು ವರ್ಷದ ಸಾಯಿ ಚಿರಾಗ್ ಎಂಬ ಬಾಲಕನಿಗೆ ಸೂಕ್ತ ಚಿಕಿತ್ಸೆ ಕೊಡಿಸುವುದಾಗಿ ಕೇಂದ್ರ ಸಚಿವರು ಆಶ್ವಾಸನೆ ನೀಡಿದ್ದಾರೆ.

ವಿ.ಸಿ.ಫಾರಂನಲ್ಲಿ ಸಚಿವರನ್ನು ಭೇಟಿಯಾದ ಶಿವಾರ ಗ್ರಾಮದ ಪೋಷಕರು ತಮ್ಮ ಎರಡು ವರ್ಷದ ಮಗನನ್ನು ಉಳಿಸಿಕೊಡಿ; ಬಾಲಕನ ಚಿಕಿತ್ಸೆಗೆ ಭಾರತದಲ್ಲಿ 16 ಕೋಟಿ ಖರ್ಚಾಗುತ್ತದೆ ಆದರೆ, ವಿದೇಶದಲ್ಲಿ 1.75 ಕೋಟಿಗೆ ಚಿಕಿತ್ಸೆ ಸಿಗಲಿದೆ. ದಯವಿಟ್ಟು ಮಗನ ಚಿಕಿತ್ಸೆಗೆ ಸಹಾಯ ಮಾಡಿ ಎಂದು ಬಾಲಕನ ತಂದೆ ಚೇತನ್, ತಾಯಿ ಭಾರ್ಗವಿ ಅವರು ಸಚಿವರಲ್ಲಿ ಅಲವತ್ತು ತೋಡಿಕೊಂಡರು. ಪೋಷಕರ ನೋವಿಗೆ ಸ್ಪಂದಿಸಿದ ಸಚಿವ ಕುಮಾರಸ್ವಾಮಿ ಪ್ರಧಾನಿಗಳ ಪರಿಹಾರ ನಿಧಿಯಿಂದ ಹಣ ಕೊಡಿಸುವುದರ ಜೊತೆಗೆ ವೈಯಕ್ತಿಕವಾಗಿಯೂ ನೆರವು ನೀಡುವುದಾಗಿ ಭರವಸೆ ನೀಡಿದರು.

6 ತಿಂಗಳೊಳಗೆ ಆ ಬಾಲಕನಿಗೆ ಚಿಕಿತ್ಸೆ ಕೊಡಿಸಲೇಬೇಕು. ಇಲ್ಲವಾದರೆ ಮಗುವನ್ನು ಕಳೆದುಕೊಳ್ಳಬೇಕಾಗುತ್ತದೆ. ಸೂಕ್ತ ಕಾಲದಲ್ಲಿ ಚಿಕಿತ್ಸೆ ಕೊಡಿಸದಿದ್ದರೆ ಜೀವನ ಪರ್ಯಂತ ಮಗು ವಿಕಲಚೇತನನಾಗುವ ಆತಂಕ ಇದೆ. ಮೊದಲು ಕಾಲುಗಳಲ್ಲಿ ಕಾಣಿಸಿಕೊಂಡ ಸೋಂಕು ನಂತರ ಸೊಂಟದವರೆಗೂ ವ್ಯಾಪಿಸಿದೆ. ಚಿಕಿತ್ಸೆ ತಡವಾದಷ್ಟು ದೇಹಪೂರ್ತಿ ಸೋಂಕು ಆವರಿಸುವ ಭೀತಿಯನ್ನು ಪೋಷಕರು ತೋಡಿಕೊಂಡರು.

ವಿಕಲಚೇತನರಿಗೆ 388 ಎಲೆಕ್ಟ್ರಿಕ್ ವಾಹನ ವಿತರಣೆ: ಕೇಂದ್ರ ಸಚಿವರು, 14ರಂದು ನಡೆಯಲಿರುವ ಕ್ರೀಡಾಂಗಣ ಉದ್ಘಾಟನಾ ಕಾರ್ಯಕ್ರಮದಲ್ಲಿಯೇ 388 ವಿಕಲಚೇತನರಿಗೆ ಹಂಚಿಕೆ ಮಾಡಲಿರುವ ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳನ್ನು ಪರಿಶೀಲನೆ ನಡೆಸಿದರು.

ಸರ್ಕಾರಕ್ಕೆ ಅಭಿನಂದನೆ: ಆಟೋಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ARAI) ಸಂಶೋಧನೆ ಮತ್ತು ಪರೀಕ್ಷಾ ಕೇಂದ್ರ ತೆರೆಯಲು 100 ಎಕರೆ ಭೂಮಿಯನ್ನು ನೀಡುವುದಾಗಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿಯೇ ಘೋಷಣೆ ಮಾಡಿರುವುದು ಸ್ವಾಗತಾರ್ಹ. ಇದಕ್ಕಾಗಿ ಸರ್ಕಾರ ಮತ್ತು ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ ಎಂದು ಹೇಳಿದರು.

ಈಗಾಗಲೇ ರಾಜ್ಯದಲ್ಲಿ ಎಲೆಕ್ಟ್ರಿಕ್ ವಾಹನ ಕ್ಷೇತ್ರಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಎಫ್‌ಕೆಸಿಸಿಐ ಪದಾಧಿಕಾರಿಗಳು ಸೇರಿ 50ಕ್ಕೂ ಹೆಚ್ಚು ಕೈಗಾರಿಕೋದ್ಯಮಿಗಳೊಂದಿಗೆ ಸಭೆ ನಡೆಸಿದ್ದೇನೆ. ರಾಜ್ಯಕ್ಕೆ ಒಳ್ಳೆಯದಾಗಬೇಕು ಎನ್ನುವ ಉದ್ದೇಶದಿಂದ ಕೆಲಸ ಮಾಡುತ್ತಿದ್ದೇನೆ. ಯಾರನ್ನೋ ಮೆಚ್ಚಿಸಲು ಕೆಲಸ ಮಾಡುತ್ತಿಲ್ಲ. ಜನರ ಋಣ ತೀರಿಸಲು ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರು.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಪಿಇಟಿ ಅಧ್ಯಕ್ಷ ಕೆ.ಎಸ್. ವಿಜಯಾನಂದ, ಜಿ.ಪಂ. ಮಾಜಿ ಸದಸ್ಯ ಅಶೋಕ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಎಎಸ್ಪಿ ತಿಮ್ಮಯ್ಯ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು ಉಪಸ್ಥಿತರಿದ್ದರು.

ಸಾಮರಸ್ಯದಿಂದ ಮಾದರಿ ಸಮಾಜ ನಿರ್ಮಾಣ ಮಾಡೋಣ



ಮಂಡ್ಯ, ಮಾ.7–ಎಲ್ಲರೂ ಸಾಮರಸ್ಯದಿಂದ ಮತ್ತು ಸಮಾನತೆಯಿಂದ ಬದುಕಿ ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಮಾದರಿ ಸಮಾಜ ನಿರ್ಮಾಣ ಮಾಡೋಣ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ಹೇಳಿದ್ದಾರೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳ ಮೇಲೆ ಉಂಟಾಗುತ್ತಿರುವ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟುವ ಬಗ್ಗೆ ಹಾಗೂ ಅಸ್ಪೃಶ್ಯತೆ ನಿರ್ಮೂಲನೆ ಕುರಿತು ವಿಚಾರಗೋಷ್ಠಿ ಮತ್ತು ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಾನವಕುಲ ಒಂದೇ, ಜಾತಿ ಎಂಬುದು ಹಳೆಯ ಕಾಲದಿಂದಲೂ ಬಂದಿದೆ. ಇಂದಿಗೂ ನಾವು ದೌರ್ಜನ್ಯ ಹಾಗೂ ಅಸ್ಪೃಶ್ಯತೆ ಬಗ್ಗೆ ಮಾತನಾಡುತ್ತೇವೆ ಎಂದರೆ ಬೇಸರದ ಸಂಗತಿ. ಒಂದೆರಡು ಕಡೆ ದೌರ್ಜನ್ಯ ಪ್ರಕರಣ ಕಂಡುಬರುತ್ತಿದೆ ಅದು ಕೂಡ ತಲೆ ತಗ್ಗಿಸುವ ಕೆಲಸವಾಗಿದೆ ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ಕಾಯ್ದೆಯು ನಮ್ಮಲ್ಲಿ ಅಸ್ತಿತ್ವದಲ್ಲಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಕ್ಕಾಗಿ 40ರಿಂದ 50 ಕೋಟಿ ಹಣ ಅಭಿವೃದ್ಧಿಗೆ ಬಳಕೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಜಿಲ್ಲೆಯಲ್ಲಿ ವರ್ಷದಲ್ಲಿ 50ರಿಂದ 60 ದೌರ್ಜನ್ಯ ಪ್ರಕರಣ ದಾಖಲಾಗುತ್ತಿದೆ. 10 ವರ್ಷದಲ್ಲಿ 850 ಪ್ರಕರಣ ದಾಖಲಾಗಿದ್ದು, 12 ಕೋಟಿ ಪರಿಹಾರ ನೀಡಲಾಗಿದೆ. ಇದುವರೆಗೂ 37ಪ್ರಕರಣ ಅಂತಿಮ ತೀರ್ಪು ಪಡೆದಿದ್ದು ಶೇ. 5 ರಷ್ಟು ಪ್ರಮಾಣದಲ್ಲಿ ಶಿಕ್ಷೆಯಾಗಿದೆ. ದೌರ್ಜನ್ಯವನ್ನು ತಡೆ ಗಟ್ಟುವ ನಿಟ್ಟಿನಲ್ಲಿ ರಾಜ್ಯದಲ್ಲಿ 33 ಪ್ರತ್ಯೇಕವಾಗಿ ಪೊಲೀಸ್ ಠಾಣೆಯನ್ನು ತೆರೆದಿದೆ. ಇದರಿಂದ ತ್ವರಿತವಾಗಿ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಹಲವು ಸಭೆಯನ್ನು ಮಾಡಲಾಗಿದೆ ಎಂದು ಹೇಳಿದರು.

ಕಲಬುರ್ಗಿ ಜಿಲ್ಲೆಯ ಕೋಡ್ಲಾದ ಉರಿ ಲಿಂಗಪೆದ್ದೇಶ್ವರ ಮಹಾಸಂಸ್ಥಾನ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಮಾತನಾಡಿದರು. ಅನುಸೂಚಿತ ಬುಡಕಟ್ಟು ಮತ್ತು ಪ.ಜಾತಿ, ಪ.ಪಂಗಡಗಳ ಆಯೋಗದ ಅಧ್ಯಕ್ಷ ಡಾ.ಮೂರ್ತಿ, ಎಸ್ಪಿ ಡಾ.ವಿ. ಜೆ.ಶೋಭಾರಾಣಿ, ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಆನಂದ್, ಮೈಶುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಉಪಾಧ್ಯಕ್ಷೆ ವಿಜಯಲಕ್ಷ್ಮೀ ರಘುನಂದನ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

3 ವರ್ಷದಿಂದ ಕಚೇರಿಗೆ ಗೈರು ಹಾಜರಿ: ಈಗ ಕಾರಣ ಕೇಳಿ ನೋಟಿಸ್

ಮಂಡ್ಯ,ಮಾ.7–ಮೂರು ವರ್ಷಗಳಿಂದ ಸತತವಾಗಿ ಕಚೇರಿಗೆ ಬಾರದ ಉದ್ಯೋಗಿಯೊಬ್ಬರಿಗೆ ಇದೀಗ ಕಾರಣ ಕೇಳಿ ತಹಶೀಲ್ದಾರ್ ನೊಟೀಸ್ ನೀಡಿರುವ ದೃಷ್ಟಾಂತ ಬೆಳಕಿಗೆ ಬಂದಿದೆ.

ನಾಗಮಂಗಲದ ತಾಲೂಕು ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಕರಾಗಿ ಕಾರ್ಯನಿರ್ವಹಿಸುತ್ತಿದ್ದ ಎಂ.ಡಿ. ಗಗನ್ ಮೂರು ವರ್ಷಗಳಿಂದ ಗೈರು ಹಾಜರಿಯಾಗಿರುವ ಉದ್ಯೋಗಿ.

ಈತ 2023ರ ಜ.19 ರಿಂದ ಈವರೆವಿಗೂ ಕಚೇರಿಗೆ ಬಾರದೆ ಅನಧಿಕೃತ ಗೈರು ಹಾಜರಾಗಿರುತ್ತಾರೆ. ಅನಧಿಕೃತ ಗೈರು ಹಾಜರಿ ಸಂಬಂಧ ಸದರಿ ನೌಕರರ ವಿಳಾಸಕ್ಕೆ ಕಾರಣ ಕೇಳಿ ನೋಟೀಸ್ ಅನ್ನು ನೀಡಲಾಗಿದ್ದು, ಅವರು ಪತ್ರವನ್ನು ಪಡೆಯದಿರುವುದರಿಂದ ವಾಪಸ್ಸು ಕಛೇರಿಗೆ ಬಂದಿದೆ. ಜಿಲ್ಲಾಧಿಕಾರಿಗಳಿಗೆ ವರದಿ ಕಳಿಸಿರುವುದಾಗಿ ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಕ್ಕರೆ ನಾಡಲ್ಲಿ ಮತ್ತೋರ್ವ ರೈತ ಪುತ್ರ ಯುಪಿಎಸ್‌ಸಿ ಪರೀಕ್ಷೆ ಪಾಸ್



ಮುತ್ತೇಶ್‌ಗೌಡ

ಕೆ.ಆರ್.ಪೇಟೆ, ಮಾ.7–ತಾಲೂಕಿನ ಅಂಬಿಗರಹಳ್ಳಿ ಗ್ರಾಮದ ಸುಪುತ್ರ ಯುಪಿಎಸ್‌ಸಿ ಪರೀಕ್ಷೆಯನ್ನು ಮೂರನೇ ಪ್ರಯತ್ನದಲ್ಲಿ ತೇರ್ಗಡೆಯಾಗಿದ್ದರೂ ಐಎಎಸ್ ಅಧಿಕಾರಿ ಆಗಬೇಕೆಂಬ ಆಸೆಗೆ ಫಲ ಸಿಕ್ಕಿಲ್ಲ.

ರೈತ ಶಿವರಾಮು ಮತ್ತು ಅರುಣಕುಮಾರಿ ದಂಪತಿಗಳ ಸುಪುತ್ರರಾಗಿರುವ ಡಾ.ಎ.ಎಸ್. ಮುತ್ತೇಶ್‌ಗೌಡ ಐ.ಎ.ಎಸ್. ಪರೀಕ್ಷೆಯಲ್ಲಿ 622ನೇ ರ‍್ಯಾಂಕ್ ಪಡೆದುಕೊಳ್ಳುವ ಮೂಲಕ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಪರಿಚಯ : ಅಂಬಿಗರಹಳ್ಳಿ ಶಿವರಾಮು ಮತ್ತು ಅರುಣಕುಮಾರಿ ದಂಪತಿಗಳ ಪುತ್ರನಾಗಿ 1998ರ ಜ.13ರಂದು ಜನಿಸಿದ ಇವರು ಪ್ರಾಥಮಿಕ ಶಿಕ್ಷಣವನ್ನು ಪಟ್ಟಣದ ಆಶೀರ್ವಾದ್ ಪ್ರಾಥಮಿಕ ಶಾಲೆಯಲ್ಲಿ, ಪ್ರೌಢ ಶಿಕ್ಷಣವನ್ನು ತೇಗನಹಳ್ಳಿ ಆಶೀರ್ವಾದ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಓದಿ ಎಸ್.ಎಸ್. ಎಲ್.ಸಿ ಪರೀಕ್ಷೆಯಲ್ಲಿ ಶೇ.97.50ರಷ್ಟು ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣ ಹೊಂದಿದ್ದಾರೆ. ಪಿಯುಸಿಯನ್ನು ಮೂಡು ಬಿದ್ರೆ ಆಳ್ವಾಸ್ ಕಾಲೇಜಿನಲ್ಲಿ ಶೇ.98ರಷ್ಟು ಅಂಕಗಳನ್ನು ಪಡೆದುಕೊಂಡು ಉತ್ತೀರ್ಣ ಹೊಂದಿದ್ದಾರೆ. ನೀಟ್ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ, ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಎಂ.ಬಿ.ಬಿ.ಎಸ್ ಪದವಿ ಪಡೆದುಕೊಂಡಿದ್ದಾರೆ. ನಂತರ ಪಟ್ಟಣದ ತಾಲೂಕು ಆಸ್ಪತ್ರೆಯಲ್ಲಿ ವರ್ಷ ಕಾಲ ವೈದ್ಯರಾಗಿ ಗ್ರಾಮೀಣ ಸೇವೆಯನ್ನು ಸಲ್ಲಿಸಿದ್ದಾರೆ. ಅನಂತರ ಐ.ಎ.ಎಸ್. ಪರೀಕ್ಷೆ ಬರೆಯುವ ಉದ್ದೇಶದಿಂದ ಬೆಂಗಳೂರಿನಲ್ಲಿ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾ, ಐ.ಎ.ಎಸ್. ಪರೀಕ್ಷಾ ತರಬೇತಿಯನ್ನು ಬೆಂಗಳೂರಿನ ಖಾಸಗಿ ಕೋಚಿಂಗ್ ಸೆಂಟರ್‌ನಲ್ಲಿ ಪಡೆದುಕೊಂಡು ಕಳೆದ ಬಾರಿ ಯುಪಿಎಸ್‌ಸಿ ಪರೀಕ್ಷೆಯನ್ನು ತೆಗೆದುಕೊಂಡಿದ್ದರಾದರೂ ಪ್ರಯತ್ನ ಫಲಿಸಿರಲಿಲ್ಲ. ಈ ಬಾರಿ ಛಲಬಿಡದ ತ್ರಿವಿಕ್ರಮನಂತೆ ಯು.ಪಿ.ಎಸ್.ಸಿ ಪರೀಕ್ಷೆಯನ್ನು ಬರೆದು ಅಖಿಲ ಭಾರತ ಮಟ್ಟದಲ್ಲಿ 622ನೇ ರ‍್ಯಾಂಕ್ ಪಡೆದುಕೊಂಡು ಉತ್ತೀರ್ಣ ಹೊಂದಿದ್ದಾರೆ.

ಐಎಎಸ್ ಅಧಿಕಾರಿ ಆಗಬೇಕೆಂಬ ಆಸೆ: ಐ ಎ ಎಸ್ ಅಧಿಕಾರಿ ಆಗಬೇಕೆಂಬ ಮನದಾಸೆಯಿಂದ ಮೂರು ವರ್ಷದಿಂದ ಯುಪಿಎಸ್‌ಸಿ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದರೂ ತಮ್ಮ ಐಎಎಸ್ ಅಧಿಕಾರಿ ಆಗಬೇಕೆಂಬ ಆಸೆಗೆ ಇನ್ನೂ ಫಲ ಸಿಕ್ಕಿಲ್ಲ ಎಂದು ಮುತ್ತೇಶ್ ಗೌಡ ಮೈಸೂರು ಮಿತ್ರನಿಗೆ ತಿಳಿಸಿದರು. ಐಆರ್‌ಎಸ್ ಅಧಿಕಾರಿಯಾಗಿ ಕಂದಾಯ ವಿಭಾಗದಲ್ಲಿ ಸಹಾಯಕ ಆಯುಕ್ತರಾಗಿ ಸೇವೆ ಸಲ್ಲಿಸಬಹುದು, ಪ್ರಯತ್ನಪಟ್ಟರೆ ಐಪಿಎಸ್ ಅಧಿಕಾರಿಯೂ ಆಗಬಹುದು ಆದರೆ ಐಎಎಸ್ ಅಧಿಕಾರಿ ಆಗಲೇಬೇಕೆಂಬ ನಿಟ್ಟಿನಲ್ಲಿ ಮತ್ತೆ ಮುಂದಿನ ಬಾರಿ ಯುಪಿಎಸ್‌ಸಿ ಪರೀಕ್ಷೆಯನ್ನು ತೆಗೆದುಕೊಳ್ಳಲು ನಿರ್ಧರಿಸಿದ್ದೇನೆ ಎಂದು ತಿಳಿಸಿದರು.

ಅಭಿನಂದನೆ: ತಾಲೂಕಿನ ಕೀರ್ತಿಯನ್ನು ರಾಷ್ಟ್ರ ಮಟ್ಟದಲ್ಲಿ ಹೆಚ್ಚಿಸಿರುವ ಅಂಬಿಗರಹಳ್ಳಿ ಡಾ.ಎ.ಎಸ್. ಮುತ್ತೇಶ್‌ಗೌಡ ಅವರನ್ನು ಶಾಸಕ ಹೆಚ್.ಟಿ. ಮಂಜು, ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ಮಾಜಿ ಸಚಿವ ನಾರಾಯಣಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಆರ್.ಟಿ.ಓ ಮಲ್ಲಿಕಾರ್ಜುನ್, ಮಿತ್ರ ಫೌಂಡೇಷನ್ ಅಧ್ಯಕ್ಷ ವಿಜಯ್‌ರಾಮೇಗೌಡ, ಮನ್‌ಮುಲ್ ನಿರ್ದೇಶಕ ಡಾಲು ರವಿ, ಎಂ.ಬಿ.ಹರೀಶ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಅಂಬರೀಶ್, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಅಂಚಿ. ಸಣ್ಣಸ್ವಾಮಿಗೌಡ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಬಿ.ಪುಟ್ಟಸ್ವಾಮಿ ಗೌಡ, ಬಿ.ಎನ್.ಶಿವರಾಮೇಗೌಡ ಮೊದಲಾದವರು ಅಭಿನಂದಿಸಿದ್ದಾರೆ.

ಒಂದನೇ ಪುಟದಿಂದ

ಅಧಿಕಾರ ಬಿಡ್ತೇನೆ...!

ನಿರ್ಧಾರವೇ ಅಂತಿಮ ಎಂದು ಹೇಳಿದರು. ನನಗೆ ಬಜೆಟ್ ಮಂಡನೆಯ ದಾಖಲೆಗಳ ಮೇಲೆ ನಂಬಿಕೆ ಇಲ್ಲ. ಆದರೆ ಹೈಕಮಾಂಡ್ ಅವಕಾಶ ಕೊಟ್ಟರೆ ಮತ್ತೆರಡು ಬಜೆಟ್ ಮಂಡಿಸುತ್ತೇನೆ. ಈ ವಿಚಾರದಲ್ಲಿ ಎಲ್ಲವನ್ನು ತೀರ್ಮಾನ ಮಾಡುವುದು ಹೈಕಮಾಂಡ್ ಎಂದರು. ಮತ್ತೆರಡು ಬಾರಿ ಬಜೆಟ್ ಮಂಡಿಸಲು ಹೈಕಮಾಂಡ್ ಅವಕಾಶ ನೀಡುತ್ತದೆ ಎಂಬ ನಂಬಿಕೆ ಇದೆಯೇ ಎಂಬ ಪ್ರಶ್ನೆಗೆ, ಹೈಕಮಾಂಡ್ ಮೇಲೆ ನನಗೆ ವಿಶ್ವಾಸವಿದೆ ಎಂದರು. ಅಧಿಕಾರ ಹಸ್ತಾಂತರ ವಿಚಾರವಾಗಿ ಹಿಂದೆ, ಮುಂದೆ ಮಾಡಿ ನನಗೆ ಏನೇ ಪ್ರಶ್ನೆ ಕೇಳಿದರೂ ನನ್ನ ಉತ್ತರ ಹೈಕಮಾಂಡ್ ಅಷ್ಟೆ ಎಂದರು. ವೇದಿಕೆಯಲ್ಲಿ ವಿಧಾನಪರಿಷತ್ ಸದಸ್ಯರಾದ ಯತೀಂದ್ರ, ಡಾ.ಡಿ.ತಿಮ್ಮಯ್ಯ, ಕೆ.ಶಿವಕುಮಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಪಿಲ್ಲಹಳ್ಳಿ ಗ್ರಾಪಂ ಸದಸ್ಯರಾದ ಶಿವಕುಮಾರ್, ತಾಪಂ ಮಾಜಿ ಸದಸ್ಯ ಚಿಕ್ಕಳ್ಳಿ ಕೃಷ್ಣಮೂರ್ತಿ ಹಾಗೂ ಇತರರಿದ್ದರು.

ಅಭಿವೃದ್ಧಿಗಾಗಿ ಸಾಲ ಮಾಡಿದ್ದೇನೆ...

ಎಂದು ಅಂಕಿ ಅಂಶಗಳ ಸಹಿತ ವಿವರಣೆ ನೀಡಿದ ಸಿಎಂ ತಾವು ಮಾಡಿರುವ ಸಾಲವನ್ನು ಸಮರ್ಥಿಸಿಕೊಂಡರು. ಕೇಂದ್ರ ಸರ್ಕಾರದ ಒಟ್ಟಾರೆ ಸಾಲದ ಪ್ರಮಾಣ 218 ಲಕ್ಷ ಕೋಟಿ ಇದೆ. ನರೇಂದ್ರ ಮೋದಿ ಅವರು ಅಧಿಕಾರಕ್ಕೆ ಬಂದ ನಂತರ 165 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಇದು ಹೊಣೆಗಾರಿಕೆ ಕಾಯ್ದೆಯ ಶೇಕಡ 55.6ರಷ್ಟಿದೆ ಎಂದು ಆರೋಪಿಸಿದರು. ರಾಜ್ಯದ ವಿತ್ತಿಯ ಕೊರತೆ ಶೇಕಡ 2.95ರಷ್ಟಿದ್ದರೆ, ಭಾರತ ಸರ್ಕಾರದ ವಿತ್ತಿಯ ಕೊರತೆ ಶೇಕಡ 4.4ರಷ್ಟಿದೆ ಎಂದು ಮಾಹಿತಿ ನೀಡಿದರು.

ನಾನು ಸಾಲ ಮಾಡಿದ್ದರೂ ಅದು ರಾಜ್ಯದ ಆರ್ಥಿಕತೆಯ ಶಿಸ್ತಿನ ಪರಿಮಿತಿಯೊಳಗೆ ಮಾತ್ರ. ಆರ್ಥಿಕ ಹೊಣೆಗಾರಿಕೆ ಕಾಯ್ದೆ ತಿಳಿಸಿರುವ ಮಾನದಂಡಗಳ ಮಿತಿಯಲ್ಲಿ ಸಾಲದ ಪ್ರಮಾಣ ಇದೆ ಎಂದು ಪುನರ್ ಸ್ಪಷ್ಟನೆ ನೀಡಿದರು.

ಜಿಎಸ್‌ಟಿ ಸೇರಿದಂತೆ ಇತರೆ ಅನುದಾನವನ್ನು ಕೇಂದ್ರ ಸರ್ಕಾರ ನ್ಯಾಯಯುತವಾಗಿ ರಾಜ್ಯಕ್ಕೆ ನೀಡದೆ ಅನ್ಯಾಯ ಮಾಡಿದ್ದ ಕಾರಣ ರಾಜ್ಯದ ಜನರಿಗೆ ಹೊರೆಯಾಗಿದೆ. ಕೇಂದ್ರ ಸರ್ಕಾರದ ಜಿಎಸ್‌ಟಿ ಪರಿಷ್ಕರಣೆಯಿಂದ ರಾಜ್ಯಕ್ಕೆ 10 ಸಾವಿರ ಕೋಟಿ ನಷ್ಟವಾಗಿದೆ ಎಂದರು. ನಾನು ಸಾಲ ಮಾಡಿರುವ ಬಗ್ಗೆ ಬಿಜೆಪಿ ನಾಯಕರು ಟೀಕೆ ಮಾಡುತ್ತಾರೆ. ಆದರೆ ಪ್ರಧಾನಿ ಮೋದಿ ಅವರು ಅಧಿಕಾರಕ್ಕೆ ಬಂದ ನಂತರ ಎಷ್ಟು ಸಾಲ ಮಾಡಿದ್ದಾರೆ ಎಂಬ ಬಗ್ಗೆ ಬಿಜೆಪಿ ನಾಯಕರು ಸ್ಪಷ್ಟನೆ ನೀಡಬೇಕು. ನನ್ನ ಬಗ್ಗೆ ಆರೋಪ ಮಾಡುವ ಬಿಜೆಪಿ ನಾಯಕರಿಗೆ ಈ ವಿಚಾರ ತಿಳಿದಿದೆಯೇ ಎಂದು ತಿರುಗೇಟು ನೀಡಿದರು. ನಾನು ಯಾವುದೇ ಒಂದು ವರ್ಗದ ಪರವಾಗಿ ಬಜೆಟ್ ಮಂಡಿಸಿಲ್ಲ. ಸಾಮಾಜಿಕ ನ್ಯಾಯವನ್ನು ಕೇಂದ್ರೀಕರಿಸಿ ಆಯವ್ಯಯ ಮಂಡಿಸಿದ್ದು, ಎಲ್ಲಾ ವರ್ಗದವರ ಬಜೆಟ್ ಆಗಿದೆ. ಈ ಮೂಲಕ ರಾಜ್ಯದ ಬೆಳವಣಿಗೆಯ ನಿರೀಕ್ಷಿತ ಬಜೆಟ್ ಆಗಿದೆ ಎಂದು ತಿಳಿಸಿದರು.

ದೇವರು ದೇವಸ್ಥಾನದಲ್ಲಿ ಮಾತ್ರವಲ್ಲ; ಎಲ್ಲೆಲ್ಲೂ ಇದ್ದಾನೆ...!

ನೀಡುತ್ತಿದ್ದ ನೆನಪನ್ನು ಮೆಲುಕು ಹಾಕಿದ ಸಿದ್ದರಾಮಯ್ಯ ಅವರು, ದೇವರನ್ನು ಕಷ್ಟ ಬಂದಾಗ ಮಾತ್ರ ನೆನಪು ಮಾಡಿಕೊಳ್ಳುವುದಲ್ಲ, ಎಲ್ಲಾ ಸಮಯದಲ್ಲೂ ಸ್ಮರಿಸಬೇಕು ಎಂದು ಸಲಹೆ ನೀಡಿದರು. 1978ರಲ್ಲಿ ನಡೆದ ತಾಲೂಕು ಅಭಿವೃದ್ಧಿ ಮಂಡಳಿಯ ಪ್ರಥಮ ಬಾರಿಯ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದಾಗ ಇಲ್ಲಿನ ಜನರು ನನ್ನನ್ನು ಆಶೀರ್ವದಿಸಿದ್ದಾರೆ. ಜನರ ಆಶೀರ್ವಾದದಿಂದ ಚಾಮುಂಡೇಶ್ವರಿ ಹಾಗೂ ವರುಣ ವಿಧಾನಸಭಾ ಕ್ಷೇತ್ರದಲ್ಲಿ 8 ಚುನಾವಣೆಯಲ್ಲಿ ಗೆಲವು ಸಾಧಿಸಲು ಸಾಧ್ಯವಾಯಿತು. ಜನರ ಬೆಂಬಲದಿಂದ ಮುಖ್ಯಮಂತ್ರಿ ಆಗಲು ಸಾಧ್ಯವಾಯಿತು. ಜನರ ಆಶೀರ್ವಾದ ಇದ್ದರೆ ಮಾತ್ರ ಸಿಎಂ ಆಗಲು ಸಾಧ್ಯ ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ನಿಲ್ದಾಣದ ಮೇಲೆಯೇ ಇರಾನ್ ಡ್ರೋನ್ ದಾಳಿ

ಎಂದು ಎಮಿರೇಟ್ಸ್ ಸರ್ಕಾರ ಹೇಳಿದೆ.

ಫೆಬ್ರವರಿ 28 ರಿಂದ ಮಾರ್ಚ್ 31 ರವರೆಗೆ ಪ್ರಯಾಣಿಸಲು ಬುಕ್ ಮಾಡಿದ ಗ್ರಾಹಕರಿಗೆ ಮರು ಬುಕ್ ಮಾಡಲು ಅಥವಾ ಮರುಪಾವತಿಗಾಗಿ ವಿನಂತಿಸಲು ಆಯ್ಕೆಗಳನ್ನು ನೀಡ ಲಾಗಿದೆ. ದುಬೈ ಮೇಲೆ ಯಾಕೆ ದಾಳಿ: ಇರಾನಿಗೆ ಅಮೆರಿಕದ ಮೇಲೆ ನೇರವಾಗಿ ದಾಳಿ ನಡೆಸಲು ಸಾಧ್ಯವಿಲ್ಲ. ಹೀಗಾಗಿ ಮಧ್ಯಪ್ರಾಚ್ಯದಲ್ಲಿರುವ ಅಮೆರಿಕದ ನೆಲೆಗಳಿರುವ ದೇಶಗಳ ಮೇಲೆ ಇರಾನ್ ದಾಳಿ ನಡೆಸುತ್ತಿದೆ.

ನಿಮ್ಮ ನೆಲೆಗಳನ್ನು ಬಳಸಿ ನಮ್ಮ ಮೇಲೆ ಅಮೆರಿಕ ದಾಳಿ ನಡೆಸುತ್ತಿದೆ. ಆ ನೆಲೆಗಳನ್ನು ಬಳಸಲು ಅವಕಾಶ ನೀಡಿದರೆ ನಿಮ್ಮ ಮೇಲೆ ದಾಳಿ ನಡೆಸುತ್ತೇವೆ ಎಂಬ ಸಂದೇಶಕ್ಕಾಗಿ ಈಗ ಡ್ರೋನ್, ಕ್ಷಿಪಣಿ ದಾಳಿ ನಡೆಸುತ್ತಿದೆ.

ಮಧ್ಯಪ್ರಾಚ್ಯದಲ್ಲಿ ಇನ್ನೂ ಉದ್ವಿಗ್ನತೆ

ಮತ್ತು ಇಸ್ರೇಲ್ ಮಿಲಿಟರಿ ಪಡೆಗಳು ಮತ್ತು ಸ್ವತ್ತುಗಳನ್ನು ಪ್ರಾಥಮಿಕ ಗುರಿಗಳೆಂದು ಪರಿಗಣಿಸ ಲಾಗುತ್ತದೆ ಎಂದು ಎಚ್ಚರಿಸಲಾಗಿದೆ.

ಇರಾನ್ ಅಧ್ಯಕ್ಷರ ಹೇಳಿಕೆಗಳ ಬಗ್ಗೆ ಅವರ ಕಚೇರಿಯ ಉಪ ಮುಖ್ಯಸ್ಥರು ಪ್ರಕಟಣೆ ನೀಡಿದ್ದು, ಯುದ್ಧದ ವಿಚಾರದಲ್ಲಿ ನಮ್ಮ ಅಧ್ಯಕ್ಷರ ಸಂದೇಶ ಸ್ಪಷ್ಟ ಎಂದಿದ್ದಾರೆ. ನೆರೆಹೊರೆ ದೇಶಗಳು, ಇರಾನ್ ಮೇಲಿನ ಅಮೆರಿಕದ ದಾಳಿಗೆ ಸಹಕರಿಸದಿದ್ದರೆ, ನಾವು ಅವುಗಳ ಮೇಲೆ ದಾಳಿ ಮಾಡುವುದಿಲ್ಲ. ಇರಾನ್ ಎಂದಿಗೂ ಬಲವಂತಕ್ಕೆ ಮಣಿಯುವು ದಿಲ್ಲ. ನಮ್ಮ ಪ್ರಬಲ ಸಶಸ್ತ್ರ ಪಡೆಗಳು ಈ ಪ್ರದೇಶದಲ್ಲಿನ ಅಮೆರಿಕದ ನೆಲೆಗಳಿಂದ ಯಾವುದೇ ಆಕ್ರಮಣಕ್ಕೆ ನಿರ್ಣಾಯಕ ಪ್ರತಿಕ್ರಿಯೆಯನ್ನು ನೀಡುತ್ತವೆ ಎಂದು ತಿಳಿಸಿದ್ದಾರೆ.

ತೀವ್ರ ಹೊಡೆತದ ಎಚ್ಚರಿಕೆ: ಇರಾನ್, ನೆರೆಹೊರೆ ರಾಷ್ಟ್ರಗಳಿಗೆ ಕ್ಷಮೆಯಾಚಿಸಿದ ಬೆನ್ನಲ್ಲೇ ಕೆಂಡಾಮಂಡಲಗೊಂಡಿರುವ ಅಮೆರಿಕಾ ಅಧ್ಯಕ್ಷ ಟ್ರಂಪ್, ಇರಾನ್‌ಗೆ ತೀವ್ರ ಹೊಡೆತ ಬೀಳಲಿದೆ ಎಂದು ಬೆದರಿಕೆ ಹಾಕುವ ಹೇಳಿಕೆಯನ್ನು ತಮ್ಮ ಟ್ರೂತ್ ಸೋಶಿಯಲ್ ಪ್ಲಾಟ್‌ಫಾರ್ಮ್‌ನಲ್ಲಿ ಹಂಚಿಕೊಂಡಿದ್ದಾರೆ.

ಇರಾನ್ ತನ್ನ ಮಧ್ಯಪ್ರಾಚ್ಯದ ನೆರೆಹೊರೆಯವರಿಗೆ ಕ್ಷಮೆಯಾಚಿಸಿ, ಶರಣಾಗತಿಯಾಗಿದೆ. ಇನ್ನು ಮುಂದೆ ಅವರ ಮೇಲೆ ಗುಂಡು ಹಾರಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಇದು ಅಮೆರಿಕಾ ಹಾಗೂ ಇಸ್ರೇಲ್ ನಿರಂತರ ದಾಳಿಯ ಪರಿಣಾಮ. ಇರಾನ್‌ನ ಕೆಟ್ಟ ನಡವಳಿಕೆಯಿಂದಾಗಿ ಸಂಪೂರ್ಣ ವಿನಾಶದತ್ತ ಸಾಗುತ್ತಿದೆ. ಈ ಕ್ಷಣದವರೆಗೂ ಗುರಿಯಾಗಿ ಪರಿಗಣಿಸದ ಪ್ರದೇಶಗಳು ಮತ್ತು ಜನ ವಸತಿ ಪ್ರದೇಶಗಳಿವೆ ಎಂದು ಪರೋಕ್ಷವಾಗಿ ದಾಳಿ ತೀವ್ರಗೊಳಿಸುವ ಎಚ್ಚರಿಕೆ ನೀಡಿದ್ದಾರೆ.

ಹಾರ್ಮುಜ್ ಸಂಕಷ್ಟ ಶಮನ: ಅಮೆರಿಕಾ ಹಾಗೂ ಇಸ್ರೇಲ್ ದಾಳಿಯಿಂದ ಕೆರಳಿದ್ದ ಇರಾನ್, ತೈಲ ಸಾಗಾಣಿಕೆಯ ಪ್ರಮುಖ ಹಾರ್ಮುಜ್ ಜಲಸಂಧಿಯನ್ನೇ ಮುಚ್ಚುವ ಮೂಲಕ ಜಾಗತಿಕ ತೈಲಬಿಕ್ಕಟ್ಟು ಸೃಷ್ಟಿಸುವ ಭೀತಿ ಹುಟ್ಟಿಸಿತ್ತು. ಆದರೆ, ಇರಾನ್ ಇದೀಗ ತನ್ನ ನೆರೆಹೊರೆ ರಾಷ್ಟ್ರಗಳಿಗೆ ಕ್ಷಮೆ ಯಾಚಿಸಿದ ಬೆನ್ನಲ್ಲೇ ಹಾರ್ಮುಜ್ ಜಲಸಂಧಿಯ ಬಳಿ ಸರಕು ಸಾಗಣೆ ಆರಂಭವಾಗಿದೆ. ಹಾರ್ಮುಜ್‌ನಲ್ಲಿ ನಿರ್ಣಾಯಕ ಹಡಗು ಮಾರ್ಗದಿಂದ ಸಾಗಣೆ ಶೀಘ್ರದಲ್ಲೇ ಪ್ರಾರಂಭವಾಗಬಹುದು ಎಂದು ಸರ್ಕಾರಿ ಮೂಲಗಳು ತಿಳಿಸಿವೆ. ಇರಾನ್ ತನ್ನ ನೆರೆಹೊರೆಯವರನ್ನು ತಮ್ಮ ಪ್ರದೇಶದಿಂದ ದಾಳಿ ಮಾಡದ ಹೊರತು ಗುರಿಯಾಗಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ ನಂತರ ಈ ಮಹತ್ವದ ಬೆಳವಣಿಗೆ ಆಗಿದೆ ಎಂದು ವರದಿಯಾಗಿದೆ.

ಲೆಬನಾನ್‌ನಲ್ಲಿ ಇಸ್ರೇಲ್ ದಾಳಿ: ಲೆಬನಾನ್ ಪೂರ್ವ ಪಟ್ಟಣವಾದ ನಬಿ ಚಿಟ್ ಮತ್ತು ನೆರೆಹೊರೆ ಪ್ರದೇಶಗಳ ಮೇಲೆ ಇಸ್ರೇಲ್ ಸೇನೆ, ವೈಮಾನಿಕ ಹಾಗೂ ಭೂದಾಳಿ ನಡೆಸಿದೆ. ದಾಳಿಯಲ್ಲಿ ಮೂವರು ಸೈನಿಕರು ಸೇರಿ 41 ಜನ ಸಾವನ್ನಪ್ಪಿದ್ದು, 40 ಜನ ಗಾಯಗೊಂಡಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ತಿಳಿಸಿದೆ. ಇದೇ ವೇಳೆ ಇಸ್ರೇಲ್ ಸೈನ್ಯವು ದಕ್ಷಿಣ ಲೆಬನಾನ್‌ನಲ್ಲಿರುವ ಜನರಿಗೆ ಬಲವಂತದ ಸ್ಥಳಾಂತರದ ಬೆದರಿಕೆ ಒಡ್ಡಿದೆ. ಲಿಟಾನಿ ನದಿಯ ದಕ್ಷಿಣದಲ್ಲಿ ನೆಲೆಸಿರುವ ನಿವಾಸಿಗಳಿಗೆ ಬೆದರಿಕೆ ಹಾಕಿರುವುದಾಗಿ ವರದಿಯಾಗಿದೆ.

ದಕ್ಷಿಣ ಲೆಬನಾನ್‌ನಲ್ಲಿರುವ ವಿಶ್ವಸಂಸ್ಥೆಯ ನೆಲೆಯ ಮೇಲೆ ಶುಕ್ರವಾರ ನಡೆದ ದಾಳಿಯಲ್ಲಿ ಮೂವರು ಘಾನಾದ ವಿಶ್ವಸಂಸ್ಥೆಯ ಶಾಂತಿಪಾಲನಾ ಸಿಬ್ಬಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆಯನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಮತ್ತು ಘಾನಾ ಖಂಡಿಸಿವೆ. ಈ ಸಂಬಂಧ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆ ತನಿಖೆ ನಡೆಸುವುದಾಗಿ ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ತಿಳಿಸಿದ್ದಾರೆ.

ಯುಎಇ ಮೇಲೆ ಡ್ರೋನ್ ಮಳೆ: ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಮೇಲೆ ಇರಾನ್ ಕನಿಷ್ಠ 16 ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು 121 ಡ್ರೋನ್‌ಗಳನ್ನು ಹಾರಿಸಲಾಗಿದೆ. ಸಮುದ್ರಕ್ಕೆ ಬಿದ್ದ ಒಂದನ್ನು ಹೊರತುಪಡಿಸಿ ಉಳಿದ ಎಲ್ಲಾ ಕ್ಷಿಪಣಿಗಳನ್ನು ತಡೆಹಿಡಿಯಲಾಗಿದೆ. ಎರಡು ಡ್ರೋನ್‌ಗಳು ಮಾತ್ರ ಯುಎಇ ಪ್ರದೇಶದೊಳಗೆ ಅಪ್ಪಳಿಸಿವೆ ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿರುವುದಾಗಿ ಅಲ್ಜಜೀರಾ ವರದಿ ಮಾಡಿದೆ. ಪ್ರಾದೇಶಿಕ ಬಿಕ್ಕಟ್ಟು ಆರಂಭವಾದಾಗಿನಿಂದ ಯುಎಇನಲ್ಲಿ 221 ಬ್ಯಾಲಿಸ್ಟಿಕ್ ಕ್ಷಿಪಣಿಗಳು ಪತ್ತೆಯಾಗಿವೆ. 205 ನಾಶವಾಗಿದ್ದು, 14 ಸಮುದ್ರಕ್ಕೆ ಬಿದ್ದಿವೆ. 1,305 ಇರಾನ್ ಡ್ರೋನ್‌ಗಳು ಪತ್ತೆಯಾಗಿದ್ದು, 1,229 ತಡೆಹಿಡಿಯಲಾಗಿದೆ ಮತ್ತು 76 ಯುಎಇ ಪ್ರದೇಶದಲ್ಲಿ ಬಿದ್ದಿವೆ. ಎಂಟು ಕ್ರೂಸ್ ಕ್ಷಿಪಣಿಗಳನ್ನೂ ಪತ್ತೆಹಚ್ಚಿ ನಾಶಪಡಿಸಲಾಗಿದೆ ಎಂದು ವರದಿ ಮಾಡಲಾಗಿದೆ.

ಇಂದು ಐಸಿಸಿ ಟಿ20 ವಿಶ್ವಕಪ್ ಫೈನಲ್



ಆಗಿದ್ದು, ಟೀಂ ಇಂಡಿಯಾದ ಬಹುತೇಕ ಗೆಲುವನ್ನು ಈತನೇ ನಿರ್ಧರಿಸಲಿದ್ದಾನೆ. ಅರ್ಶ್‌ದೀಪ್ ಕೊಂಚ ದುಬಾರಿಯಾದರೂ ಬುಮ್ರಾಗೆ ಸಾಥ್ ನೀಡುತ್ತಿದ್ದಾರೆ. ವರುಣ್ ಚಕ್ರವರ್ತಿ ಹಾಗೂ ಅಭಿಷೇಕ್ ಶರ್ಮಾ ಫಾರ್ಮ್‌ಗೆ ಮರಳಿದ್ದಲ್ಲಿ ಬಲಿಷ್ಠ ತಂಡವಾಗಲಿದೆ. ಕಿವೀಸ್ ಪಡೆಗೆ ಏಕಾಂಗಿಯಾಗಿ ನಿಂತು ತಂಡ ಗೆಲ್ಲಿಸಿಕೊಡಬಲ್ಲ ಯಾವೊಬ್ಬ ಆಟಗಾರನೂ ಇಲ್ಲ ಒಂದೊಂದು ಪಂದ್ಯದಲ್ಲಿ ಒಬ್ಬೊಬ್ಬ ಆಟಗಾರ ಮಾತ್ರ ಉತ್ತಮ ಪ್ರದರ್ಶನ ತೋರುತ್ತಿದ್ದು, ತಂಡದ ಒಗ್ಗಟ್ಟು ಪ್ರದರ್ಶನ ತೋರಿದ್ದೆ ಆದಲ್ಲಿ ಚೊಚ್ಚು ಟ್ರೋಫಿ ಗೆಲ್ಲುವ ಕನಸು ನನಸಾಗಲಿದೆ.

ಟಿ20 ವಿಶ್ವಕಪ್‌ನಲ್ಲಿ ಕಿವೀಸ್‌ದೆ ಮೇಲುಗೈ: ಟೀಂ ಇಂಡಿಯಾ ಎಲ್ಲಾ ವಿಭಾಗದಲ್ಲಿಯೂ ಉತ್ತಮ ಲಯದಲ್ಲಿದ್ದು, ಟ್ರೋಫಿ ಗೆಲ್ಲುವ ನೆಚ್ಚಿನ ತಂಡವಾಗಿದ್ದರು ಸಹ ಟಿ20 ವಿಶ್ವಕಪ್ ಟೂರ್ನಿ ಎಂದು ಬಂದಾಗ ಭಾರತ ತಂಡ ಕಿವೀಸ್ ವಿರುದ್ಧ ಈವರೆಗೆ ಒಂದೇ ಒಂದು ಗೆಲುವನ್ನು ದಾಖಲಿಸಲಾಗಿಲ್ಲ. 2007, 2016 ಹಾಗೂ 2021ರಲ್ಲಿ ಇತ್ತಂಡಗಳು ಮುಖಾಮುಖಿಯಾಗಿದ್ದು, ಈ ಮೂರು ಪಂದ್ಯದಲ್ಲಿಯೂ ನ್ಯೂಜಿಲೆಂಡ್ ಗೆಲುವು ದಾಖಲಿಸಿದೆ. ಇದು ಇತ್ತಂಡಗಳ ನಡುವಣ ಕಾದಾಟಕ್ಕೆ ಮತ್ತಷ್ಟು ಪುಷ್ಠಿ ನೀಡಲಿದೆ.

ಪಿಚ್ ಹೇಗಿದೆ: ಅಹ್ಮದಾಬಾದ್ ಪಿಚ್ ಕೆಂಪು ಮತ್ತು ಜೇಡಿಮಣ್ಣಿನ ಮಿಶ್ರಣದಿಂದ ಸಿದ್ಧಪಡಿಸಲಾಗುತ್ತಿದೆ. ಇದು ಸಾಮಾನ್ಯವಾಗಿ ಬ್ಯಾಟ್ಸ್‌ಮನ್‌ಗಳಿಗೆ ಹೆಚ್ಚು ನೆರವು ನೀಡಲಿದೆ. ಚೆಂಡು ಉತ್ತಮ ಬೌನ್ಸ್ ಪಡೆಯಲಿದ್ದು, ಬ್ಯಾಟ್ಸ್‌ಮನ್‌ಗಳು ದೊಡ್ಡ ಹೊಡೆತಗಳನ್ನು ಆಡಲು ಸುಲಭವಾಗುತ್ತದೆ. ಬ್ಯಾಟ್ಸ್‌ಮನ್‌ಗಳು ಪಿಚ್ ಅನ್ನು ಅರ್ಥ ಮಾಡಿಕೊಂಡರೆ, ದೊಡ್ಡ ಸ್ಕೋರ್ ಗಳಿಸುವ ಸಾಧ್ಯತೆಗಳಿವೆ. ಆದ್ದರಿಂದ, ಫೈನಲ್‌ನಲ್ಲಿಯೂ ರನ್‌ಗಳ ಸುರಿಮಳೆಯನ್ನು ಕಾಣಬಹುದಾಗಿದೆ.

ಪಂದ್ಯ ವೀಕ್ಷಣೆ ಹೇಗೆ: ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಫೈನಲ್ಸ್ ಪಂದ್ಯವನ್ನು ಸ್ಟಾರ್ ಸ್ಪೋರ್ಟ್ಸ್ ಕನ್ನಡ ಮತ್ತು ಇತರೆ ಭಾಷೆಗಳಲ್ಲಿ ವೀಕ್ಷಣೆ ಮಾಡಬಹುದಾಗಿದೆ. ಜಿಯೋ ಸ್ಟಾರ್‌ನಲ್ಲಿ ಲೈವ್ ಸ್ಟ್ರೀಮಿಂಗ್ ಮೂಲಕ ಪಂದ್ಯವನ್ನು ವೀಕ್ಷಿಸಬಹುದಾಗಿದೆ. ಈ ಪಂದ್ಯವು ಮಾ.8ರ ಭಾನುವಾರ ಸಂಜೆ 7ಕ್ಕೆ ಪ್ರಾರಂಭವಾಗಲಿದೆ.

ಔತಣಕೂಟ...



ಮೈಸೂರು ನರಸಿಂಹರಾಜ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್ ಏರ್ಪಡಿಸಿದ ಔತಣಕೂಟದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಶಾಸಕ ತನ್ವೀರ್ ಸೇಠ್, ಕಾಂಗ್ರೆಸ್ ಹಿರಿಯ ಮುಖಂಡರಾದ ಲಕ್ಷ್ಮಣ್, ಸಾಹುಕಾರ್ ಚನ್ನಯ್ಯ ಬ್ಲಾಕ್ ಅಧ್ಯಕ್ಷ ಮಂಜುನಾಥ್, ರವಿ ಮಂಚೇಗೌಡನಕೊಪ್ಪಲು ಭಾಗವಹಿಸಿದ್ದರು.

ಅತಿವೇಗ, ಮದ್ಯಪಾನ ಮಾಡಿ ವಾಹನ ಚಾಲನೆ; 152 ಪ್ರಕರಣ ದಾಖಲು

ಮೈಸೂರು, ಮಾ.7(ಎಸ್‌ಪಿಎನ್)–ಮೈಸೂರು ನಗರದಲ್ಲಿ ಅತಿವೇಗ ಹಾಗೂ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತಿದ್ದ 152 ಮಂದಿ ವಿರುದ್ಧ ಮೈಸೂರು ನಗರ ಪೊಲೀಸರು ವಿಶೇಷ ತಪಾಸಣೆ ವೇಳೆ ಪ್ರಕರಣ ದಾಖಲಿಸಿದ್ದಾರೆ.

ಮಾ.1ರಿಂದ 7ರವರೆಗೆ ಸಂಚಾರ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ವಿಶೇಷ ತಪಾಸಣೆ ಕೈಗೊಂಡಿರುವ ಮೈಸೂರು ನಗರ ಪೊಲೀಸರು, ಅತೀವೇಗದ ಚಾಲನೆ ಮಾಡುತ್ತಿದ್ದ 111 ಮಂದಿ ಹಾಗೂ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದ 41 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಸಂಚಾರ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಐಎಂವಿ ಕಾಯ್ದೆಯಡಿಯಲ್ಲಿ ಚಾಲನಾ ಪರವಾನಗಿ ಅಮಾನತು ಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ನೇಪಾಳ ಚುನಾವಣೆ: ಪ್ರಚಂಡ ಗೆಲುವಿನತ್ತ ಆರ್‌ಎಸ್‌ಪಿ

ಬೆಂಗಳೂರಿನಲ್ಲಿ ಪದವಿ ಪಡೆದಿದ್ದ ಬಲೇನ್ ಶಾ, 35 ವರ್ಷಕ್ಕೆ ಪ್ರಧಾನಿ ಪಟ್ಟ!

ಕಠ್ಮಂಡು: ಬಲೇಂದ್ರ ಶಾ ನೇತೃತ್ವದ ರಾಷ್ಟ್ರೀಯ ಸ್ವತಂತ್ರ ಪಕ್ಷ (RSP) ನೇಪಾಳದ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಚಂಡ ಗೆಲುವು ಪಡೆಯುವತ್ತ ಸಾಗಿದೆ. ದೀರ್ಘಕಾಲ ರಾಜಕೀಯವಾಗಿ ಅಸ್ಥಿರವಾಗಿರುವ ಈ ದೇಶದಲ್ಲಿ ಸಾಂಪ್ರದಾಯಿಕ ಪಕ್ಷಗಳ ಪ್ರಾಬಲ್ಯವನ್ನು ಪ್ರಶ್ನಿಸುವ ಮೂಲಕ ಆರ್‌ಎಸ್‌ಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮುವ ನಿರೀಕ್ಷೆಯಿದೆ. ನೇಪಾಳದ ಚುನಾವಣಾ ಆಯೋಗದ ಪ್ರಕಾರ, 165 ಕ್ಷೇತ್ರಗಳ ಪೈಕಿ RSP 47 ಸ್ಥಾನಗಳನ್ನು ಈಗಾಗಲೇ ವಶಪಡಿಸಿಕೊಂಡಿದ್ದು 72 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಬಲೇನ್ ಎಂದು ಕರೆಯಲ್ಪಡುವ 35 ವರ್ಷದ ಎಂಜಿನಿಯರ್ ನೇಪಾಳದ ಮುಂದಿನ ಪ್ರಧಾನಿಯಾಗುವ ನಿರೀಕ್ಷೆಯಿದೆ.

2025ರ ಸೆಪ್ಟೆಂಬರ್ 8–9ರಂದು ನೇಪಾಳದಲ್ಲಿ Gen Z ಪ್ರತಿಭಟನೆಗಳ ನಡೆದಿದ್ದು ಇದಾದ ನಂತರ ಚುನಾವಣೆಗಳು ನಡೆಯಿತು. ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ಹಳತಾದ ನಾಯಕತ್ವವನ್ನು ಕೊನೆಗೊಳಿಸಬೇಕೆಂದು ಒತ್ತಾಯಿಸಿ Gen Z ನೇತೃತ್ವದ ಪ್ರತಿಭಟನೆಗಳು ಪ್ರಧಾನಿ ಕೆ.ಪಿ. ಶರ್ಮಾ ಒಲಿ ಅವರ ಸಮ್ಮಿಶ್ರ ಸರ್ಕಾರವನ್ನು ಉರುಳಿಸಿತ್ತು. ಅದು ಸುಮಾರು ಮೂರನೇ ಎರಡರಷ್ಟು ಬೆಂಬಲವನ್ನು ಹೊಂದಿತ್ತು. ನೇಪಾಳಿ ಕಾಂಗ್ರೆಸ್, ನೇಪಾಳಿ ಕಮ್ಯುನಿಸ್ಟ್ ಪಕ್ಷ ಮತ್ತು ಸಿಪಿಎನ್–ಯುಎಂಎಲ್ ತಲಾ 10 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿವೆ. ಶ್ರಮಿಕ್ ಸಂಸ್ಕೃತಿ ಪಕ್ಷ ಐದು ಸ್ಥಾನಗಳಲ್ಲಿ ಮುನ್ನಡೆ ಸಾಧಿಸುತ್ತಿದ್ದರೆ, ಇತರ ಪಕ್ಷಗಳು ತಲಾ ಎರಡು ಸ್ಥಾನಗಳಲ್ಲಿ ಮುಂದಿವೆ.

ನಿರುದ್ಯೋಗಿಗಳಿಗೆ ಇಂದಿನಿಂದಲೇ 1,500 ರೂ. ಭತ್ಯೆ

ಕೋಲ್ಕತ್ತಾ: ವಿಧಾನಸಭಾ ಚುನಾವಣೆಗೆ ಮುನ್ನ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನಿರುದ್ಯೋಗಿಗಳಿಗೆ ಶನಿವಾರ ಭರ್ಜರಿ ಗಿಫ್ಟ್ ನೀಡಿದ್ದು, 10ನೇ ತರಗತಿ ಉತ್ತೀರ್ಣರಾದ ನಿರುದ್ಯೋಗಿ ಯುವ ಉದ್ಯೋಗಾಕಾಂಕ್ಷಿಗಳಿಗೆ ಪ್ರತಿ ತಿಂಗಳು 1,500 ರೂ. ಭತ್ಯೆ ನೀಡಲಾಗುವುದು ಎಂದು ಘೋಷಿಸಿದ್ದಾರೆ. ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಪೂರ್ಣಗೊಂಡ ನಂತರ ಅಂತಿಮ ಪಟ್ಟಿಯಿಂದ ಸುಮಾರು 64 ಲಕ್ಷ ಮತದಾರರನ್ನು ಡಿಲೀಟ್ ಮಾಡಿದ್ದನ್ನು ವಿರೋಧಿಸಿ ಶುಕ್ರವಾರದಿಂದ ಟಿಎಂಸಿ ಧರಣಿ ನಡೆಸುತ್ತಿದ್ದು, 2ನೇ ದಿನವಾದ ಇಂದು, ಪಕ್ಷದ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಟಿಎಂಸಿ ಮುಖ್ಯಸ್ಥೆ ಈ ಘೋಷಣೆ ಮಾಡಿದರು.

ದೇವಾಲಯಕ್ಕೆ ಸೀಮಿತವಾಗಿರುವ ದೇವರನ್ನು ನಾನು ನಂಬಲ್ಲ

ಶಿರಮಳ್ಳಿಯಲ್ಲಿ ಲಕ್ಷ್ಮೀದೇವಿ ದೇವಸ್ಥಾನ ಉದ್ಘಾಟಿಸಿದ ಸಿದ್ದರಾಮಯ್ಯ




ಶಿರಮಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ನೂತನವಾಗಿ ನಿರ್ಮಿಸಿರುವ ಲಕ್ಷ್ಮೀದೇವಿ(ಹುಚ್ಚಮ್ಮ) ಅಮ್ಮನವರ ದೇವಾಲಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿ ಪ್ರಸಾದ ಸ್ವೀಕರಿಸಿದರು(ಎಡ ಚಿತ್ರ). ಸಭಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

> ಶಾಸಕ ಅನಿಲ್ ಚಿಕ್ಕಮಾದು ಈ ತಾಲೂಕಿಗೆ ಏನೇ ಅಭಿವೃದ್ಧಿ ಕೆಲಸ ಕೇಳಿದರೂ ಸಹ ನಾನು ಮಂಜೂರು ಮಾಡಿಕೊಡುತ್ತೇನೆ, ಕ್ಷೇತ್ರದ ಅಭಿವೃದ್ಧಿಗೆ ನಾನೂ ಸಹಕಾರ ನೀಡುತ್ತೇನೆ. ಅನೇಕ ಅಭಿವೃದ್ಧಿ ವಿಚಾರವಾಗಿ, ಶಾಸಕ ಅನಿಲ್ ಚಿಕ್ಕಮಾದು ಮನವಿ ನೀಡಿದ್ದಾರೆ ಅದನ್ನು ಈಡೇರಿಸುತ್ತೇನೆ.
> – ಸಿದ್ದರಾಮಯ್ಯ ಮುಖ್ಯಮಂತ್ರಿ

ಹೆಚ್.ಡಿ.ಕೋಟೆ: ಎಲ್ಲಾ ಕಡೆ ಇರುವ ದೇವರನ್ನು ನಂಬುತ್ತೇನೆ. ಆದರೆ ದೇವಾಲಯಕ್ಕೆ ಸೀಮಿತವಾಗಿರುವ ದೇವರನ್ನು ನಾನು ನಂಬಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ಶಿರಮಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ನೂತನವಾಗಿ ನಿರ್ಮಿಸಿರುವ ಲಕ್ಷ್ಮೀದೇವಿ(ಹುಚ್ಚಮ್ಮ) ಅಮ್ಮನವರ ದೇವಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು ದೇವಾಲಯವನ್ನು ಬಹಳ ಸುಂದರವಾಗಿ ಭಕ್ತಿಯಿಂದ ಕಟ್ಟಿದ್ದೀರಿ, ದೇವರು ದೇವಾಲಯಕ್ಕೆ ಸೀಮಿತವಾಗಿರುವುದಿಲ್ಲ, ಎಲ್ಲಾ ಕಡೆ ಇರುವ ದೇವರನ್ನು ನಾನು ನಂಬುತ್ತೇನೆ, ದೇವಾಲಯದಲ್ಲಿ ಮಾತ್ರ ದೇವರು ಇದ್ದಾನೆ ಎಂದು ನಾನು ನಂಬಿಲ್ಲ, ಏನೆ ಕೆಲಸ ಆರಂಭಿಸಿದರು ಸಹ ದೇವರನ್ನು ನೆನೆಯುತ್ತೇವೆ. ಎಲ್ಲರಿಗೂ ಒಳಿತನ್ನು ಮಾಡುವಂತೆ ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಜಾತಿ, ಧರ್ಮ, ವರ್ಗ ತೊಲಗಿ ಮನುಷ್ಯ ಮನುಷ್ಯರನ್ನು ಪ್ರೀತಿಸಿದಾಗ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ, ಲಕ್ಷ್ಮೀದೇವಿ ದೇವಾಲಯವನ್ನು ಅತ್ಯಂತ ಸಂತೋಷವಾಗಿ ಉದ್ಘಾಟಿಸಿದ್ದೇನೆ. ಪ್ರೀತಿಯಿಂದ ಕಾಣುವ ಶಿರಮಳ್ಳಿ ಗ್ರಾಮದ ಜನರು ನನ್ನ ಮೇಲೆ ಅಪಾರ ಗೌರವ ವನ್ನು ಇಟ್ಟುಕೊಂಡಿದ್ದಾರೆ. ನನ್ನ ಮಾತನ್ನು ಎಂದು ಸಹ ಮೀರದೆ ನಡೆಯುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನಾನು ಯಾವ ಪಕ್ಷಕ್ಕೆ ಹೋದರೂ ಸಹ ಸದಾ ನನ್ನನ್ನು ಬೆಂಬಲಿಸಿದ್ದಾರೆ. ಕರ್ನಾಟಕ ಜನರ ಬೆಂಬಲದಿಂದ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿದ್ದೇನೆ, ಅಲ್ಲದೇ ಹೆಚ್ಚು ಭಾರಿ ಆಯ ವ್ಯಯ ಮಂಡಿಸಲು ಸಹ ನೀವೆಲ್ಲರೂ ಕಾರಣ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ನಾನು ಶಾಸಕನಾಗಲು ಪ್ರಮುಖವಾಗಿ ಧ್ರುವನಾರಾಯಣ್, ಸಿದ್ದರಾಮಯ್ಯ ಮತ್ತು ನನ್ನ ತಂದೆ ಚಿಕ್ಕಮಾದುರವರೇ ಕಾರಣ ಎಂದರು.

ತಾಲೂಕು ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾವಿರಾರು ಕೋಟಿ ಹಣ ಬಿಡುಗಡೆ ಮಾಡಿದ್ದಾರೆ. ಕಾರ್ಮಿಕ ಇಲಾಖೆಯ ಹಾಸ್ಟೆಲ್ ಅನ್ನು ತಾಲೂಕಿಗೆ ಬಜೆಟ್‌ನಲ್ಲಿ ಮಂಜೂರು ಮಾಡಿದ್ದು ಸುಮಾರು 35 ಕೋಟಿ ಹಣ ಬಿಡುಗಡೆ ಮಾಡಿದ್ದಾರೆ ಎಂದರು. ಮಳವಳ್ಳಿಯಿಂದ ಮಾನಂದವಾಡಿಯ 141 ಕಿ.ಮೀ ರಸ್ತೆ ನಿರ್ಮಾಣಕ್ಕೆ 1600 ಕೋಟಿ ಮಂಜೂರು ಮಾಡಿಕೊಟ್ಟಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಭೋಸ್, ಶಾಸಕರಾದ ರವಿಶಂಕರ್, ಗಣೇಶ್ ಪ್ರಸಾದ್, ಮಾಜಿ ಸಚಿವ ಎಂ.ಶಿವಣ್ಣ, ಮಾಜಿ ಶಾಸಕರಾದ ಬೀಚನಹಳ್ಳಿ ಚಿಕ್ಕಣ್ಣ, ಎಂ.ಕೆ. ಸೋಮಶೇಖರ್, ವಿಧಾನಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಶಿವಕುಮಾರ್, ಕುರುಬ ಸಮಾಜದ ನಿಕಟ ಪೂರ್ವ ರಾಜ್ಯ ಅಧ್ಯಕ್ಷ ಸುಬ್ರಹ್ಮಣ್ಯ, ಕುರುಬ ಸಮಾಜದ ಜಿಲ್ಲಾ ಅಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಆನಂದ್, ಮುಖಂಡರಾದ ಆರ್.ಎಂ.ವೀರೇಗೌಡ ಬೀರ್ವಾಳು ಚಿಕ್ಕಣ್ಣ, ಬೈಪಾಸ್ ಮಂಜು, ಮಾಲೇಗೌಡ, ಮಾದಪ್ಪ, ಏಜಾಜ್ ಪಾಷ, ನರಸಿಂಹಮೂರ್ತಿ, ಮಲ್ಲೇಶ್, ಚಿಕ್ಕಣ್ಣ, ನಾಗೇಗೌಡ, ಗಣೇಶ್, ಸುಬ್ರಹ್ಮಣ್ಯ, ತಹಸೀಲ್ದಾರ್ ಶ್ರೀನಿವಾಸ್, ಬಸಪ್ಪ, ಕಾರ್ತಿಕ್, ಮರಿದೇವಯ್ಯ, ದೇವಸ್ಥಾನ ಸಮಿತಿ ಸದಸ್ಯರುಗಳಾದ ಕೆ.ಮಲ್ಲೇಗೌಡ, ಕಾಡೇಗೌಡ, ದೊಡ್ಡೆಗೌಡ, ಸಣ್ಣಗಂಡೆಗೌಡ, ಎಂ.ನಾಗೇಗೌಡ, ಮಹದೇವೆಗೌಡ, ಎಸ್.ಬಿ.ಮಹದೇವೆಗೌಡ, ಎಂ.ರಾಜೇಗೌಡ, ರಾಜೇಗೌಡ, ಮಲ್ಲೇಗೌಡ, ಮಂಜು, ಎಸ್.ಶಿವಕುಮಾರ್, ಎಸ್.ಎಂ.ಮಾಹದೇವ, ಸಾವಿರಾರು ಸಂಖ್ಯೆಯಲ್ಲಿ ಮುಖಂಡರುಗಳು ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಬಸ್ ಡಿಕ್ಕಿಯಾಗಿ ಕೆಳಗೆ ಬಿದ್ದ ಬೈಕ್ ಸವಾರನ ಮೇಲೆ ಹರಿದ ಗೂಡ್ಸ್ ಆಟೋ : ಸ್ಥಳದಲ್ಲೇ ಸಾವು



ಹುಣಸೂರು, ಮಾ.7– ಕೆಎಸ್‌ಆರ್‌ಟಿಸಿ ಬಸ್ಸು ಡಿಕ್ಕಿ ಹೊಡೆದು ಬಿದ್ದಿದ್ದ ಬೈಕ್ ಸವಾರನನ್ನು ಗೂಡ್ಸ್ ವಾಹನವೊಂದು ಎಳೆದೊಯ್ದ ಪರಿಣಾಮ ಆತ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ನಗರದ ಹೊರವಲಯದ ಮೂರೂರಮ್ಮ ದೇವಾಸ್ಥಾನದ ಬಳಿ ಶುಕ್ರವಾರ ಸಂಜೆ ಸಂಭವಿಸಿದೆ.

ಮೂಲತಃ ಗದಗ ಜಿಲ್ಲೆಯ ಗಜೇಂದ್ರಘಡ ತಾಲೂಕಿನ ಗೌರಿಗೇರೆ ಗ್ರಾಮದ ಮರಿಯಾವ್ವ ಪೂಜಾರ್ ಅವರ ಪುತ್ರ ಹಾಗೂ ತಾಲೂಕಿನ ಹುಣಸೆಗಾಲ ಗ್ರಾಮದ ವಾಸಿ ಅನಂದ ಪೂಜಾರ್(39) ಎಂಬಾತನೆ ಅಪಘಾತದಲ್ಲಿ ಮೃತ ಪಟ್ಟ ದುರ್ದೈವಿಯಾಗಿದ್ದಾನೆ.

ನಿನ್ನೆ ಸಂಜೆ ತನ್ನ ಹೊಂಡಾಶೈನ್ ಬೈಕ್ (ಕೆ.ಎ–46 ಹೆಚ್–2549)ನಲ್ಲಿ ತಾಲೂಕಿನ ಹುಣಸೆಗಾಲ ಗ್ರಾಮಕ್ಕೆ ತೆರಳುವಾಗ ಪಿರಿಯಾಪಟ್ಟಣ ಕಡೆಯಿಂದ ಬಂದ ಕೆ.ಎ–57 ಎಫ್–2549 ನಂಬರಿನ ಬೆಂಗಳೂರು ಡಿಪೋಗೆ ಸೇರಿದ ಸಾರಿಗೆ ಬಸ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಅನಂದ ಬೈಕ್ ಸಮೇತ ಕೆಳಗೆ ಬಿದ್ದಾಗ ಹಿಂದಿನಿಂದ ಬಂದ ಗೂಡ್ಸ್ ವಾಹನ (ಕೆ.ಎ–16 ಡಿ–2157) ಅನಂದನಿಗೆ ಡಿಕ್ಕಿ ಹೊಡೆದು ಅನತಿ ದೂರ ಎಳೆದುಕೊಂಡು ಹೋದ ಕಾರಣ ಅನಂದನಿಗೆ ತೀವ್ರತರದ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತ ಪಟ್ಟಿದ್ದಾರೆ.

ಅನಂದ್ ಹಲವು ವರ್ಷಗಳ ಹಿಂದೆಯೆ ಹುಣಸೂರಿಗೆ ಬಂದು ಹಾಲಗೆರೆ ಸಮೀಪದಲ್ಲಿರುವ ಎಸ್.ಎಸ್.ಟಿ ಟ್ರಾನ್ಸ್‌ಪೋರ್ಟ್‌ನಲ್ಲಿ ಕೆಲಸಮಾಡಿಕೊಂಡಿದ್ದು ತಾಲೂಕಿನ ಹುಣಸೆಗಾಲದ ನಯನ ಎಂಬಾಕೆಯನ್ನು ಮದುವೆಯಾಗಿ ಇಲ್ಲೆ ವಾಸವಾಗಿದ್ದು ಒಂದು ಗಂಡು ಒಂದು ಹೆಣ್ಣು ಮಗುವಿದೆ.

ಈ ಸಂಬಂದ ನಗರ ಪೊಲೀಸ್ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ಪಿಎಸ್ಐ ತಾಜುದ್ದೀನ್ ಮತ್ತು ಸಿಬ್ಬಂದಿ ಸ್ಥಳಕ್ಕೆ ಬೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ಮೂರು ವಾಹನಗಳನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ.

ಅಭಿವೃದ್ಧಿ ಕಾಮಗಾರಿಗೆ ಸಚಿವ ವೆಂಕಟೇಶ್ ಚಾಲನೆ



ಸಚಿವ ವೆಂಕಟೇಶ್ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಗುದ್ದಲಿ ಪೂಜೆ ನೆರವೇರಿಸಿದ ನಂತರ ನಡೆದ ಸಭಾ ಕಾರ್ಯಕ್ರಮ.

ಬೆಟ್ಟದಪುರ: 198 ಕೋಟಿ ರೂ. ವೆಚ್ಚದಲ್ಲಿ ಪಿರಿಯಾಪಟ್ಟಣ ತಾಲೂಕಿನ ಕರಡಿಲಕ್ಕನಕೆರೆ ಏತ ನೀರಾವರಿ ಯೋಜನೆಯ ನಾಲೆಗಳು ಮತ್ತು ಕೆರೆಗಳ ಆಧುನಿಕರಣ, ಹಾರಂಗಿ ಉಪನಾಲೆ ಏತ ನೀರಾವರಿ ಯೋಜನೆ ಆಧುನೀಕರಣ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.

ತಾಲೂಕಿನಲ್ಲಿ ನಾನು ಬೃಹತ್ ಯೋಜನೆಗಳನ್ನು ತಂದು ಅಭಿವೃದ್ಧಿ ಮಾಡುತ್ತೇನೆ ಹೊರತು ನಾನು ಸಣ್ಣಪುಟ್ಟ ಯೋಜನೆಗಳನ್ನು ತಂದು ಅಭಿವೃದ್ಧಿ ಮಾಡಿದ್ದೇನೆ ಎಂದು ಹೇಳಿಲ್ಲ. ನಾನು ಶಾಸಕನಾದ ಅವಧಿಯಲ್ಲಿ ಹೆಚ್ಚಿನ ಕೆಲಸಗಳು ಬೃಹತ್ ಯೋಜನೆಗಳಾಗಿದ್ದು ಅವುಗಳಿಂದ ತಾಲೂಕು ಅತ್ಯಂತ ಅಭಿವೃದ್ಧಿ ಹೊಂದಿದೆ ಎಂದು ತಿಳಿಸಿದರು.

ಅಲ್ಲದೆ ನನ್ನಗಿಂತ ಮುಂಚೆ ಹಲವಾರು ತಾಲೂಕಿನಲ್ಲಿ ಶಾಸಕರಿದ್ದರು ಸಹ ಅವರು ಬೃಹತ್ ಯೋಜನೆಗಳನ್ನು ತರುವಲ್ಲಿ ವಿಫಲರಾಗಿದ್ದಾರೆ. ಹೆಚ್.ಎಂ.ಚನ್ನಬಸಪ್ಪನವರ ಕೆಲಸಕ್ಕಿಂತಲೂ ನಾನು ಹೆಚ್ಚು ಕೆಲಸ ಮಾಡಿದ್ದೇನೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆಶ್ರಯ ಸಮಿತಿ ಹಾಗೂ ಗ್ಯಾರಂಟಿ ಸಮಿತಿ ಯೋಜನೆಯ ನಿತಿನ್ ವೆಂಕಟೇಶ್ ಮಾತನಾಡಿದರು. ಬೆಟ್ಟದಪುರ ಹಾಗೂ ಪಿರಿಯಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮದ ಜಾನ ಬಾಬು, ಸ್ವಾಮಿಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಹೊಲದಪ್ಪ, ನಿರ್ದೇಶಕ ಪರಮೇಶ್, ಮೈಮುಲ್ ನಿರ್ದೇಶಕ ಪ್ರಕಾಶ್, ಕಾಂಗ್ರೆಸ್ ಖಜಾಂಚಿ ಬಸವರಾಜ್, ಹಾರನಹಳ್ಳಿ ಹೋಬಳಿ ಕಾಂಗ್ರೆಸ್ ಮುಖಂಡ ಕಲ್ಯಾಣಪ್ಪ, ಶಂಕ್ರಪ್ಪ, ಹಾರನಹಳ್ಳಿ ಯೋಗೇಶ್, ಲಕ್ಷ್ಮೀನಾರಾಯಣ್ ಆಯಿತನಹಳ್ಳಿ ಮಹದೇವ್, ಶಂಕರೇಗೌಡ ಸ್ವಾಮಿ ಗೌಡ, ಸುಹೀಲ್ ಪಾಷಾ ಜಾವಿದ್, ಬಿಟಿಕೆ ಶೇಖರ್ ದರ್ಶಿನಿ, ಮಹೇಶ್ ಗಣೇಶ್, ಗುತ್ತಿಗೆದಾರ ರಘುಪತಿ, ಹಾರಂಗಿ ಸೂಪರ್ ಇಂಜಿನಿಯರ್ ಸತೀಶ್, ಇಲಾಖೆಯ ಅಧಿಕಾರಿಗಳು ಇಓ ಸುನಿಲ್ ಕುಮಾರ್ ಇದ್ದರು.

ಬೈರಾಪುರದಲ್ಲಿ ಮಡಿವಾಳ ಜಯಂತಿ ಆಚರಣೆ



ವೀರ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು.

ತಿ.ನರಸೀಪುರ, ಮಾ.7– ಪಟ್ಟಣದ ಬೈರಾಪುರದಲ್ಲಿ ಮಡಿವಾಳ ಸಮಾಜದ ವತಿಯಿಂದ ವೀರ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು.

ಮಾಚಿದೇವರ ಚಾಲನೆ ನೀಡಿದ ಬಗರ್ ಹುಕುಂ ಸಮಿತಿಯ ಸದಸ್ಯೆ ಜಯಲಕ್ಷ್ಮಿ ಮಾತನಾಡಿ ಶಿವಶರಣ ಮಾಚಿದೇವರ ಆದರ್ಶಗಳನ್ನು ಪಾಲಿಸಬೇಕು ಸಮಾಜದ ಸಂಘಟನೆಗೆ ಮಹಿಳೆಯರು ಸೇರಿದಂತೆ ಎಲ್ಲರೂ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಹೇಳಿದರು.

ಮುಖಂಡ ಬೈರಾಪುರ ಗುಂಡಶೆಟ್ಟಿ ಮಾತನಾಡಿ ಮಡಿವಾಳ ಸಮಾಜದವರು ಸಂಘಟಿತರಾಗುವು ದರ ಜೊತೆಗೆ ಮಕ್ಕಳಿಗೆ ಶಿಕ್ಷಣ ದೊರಕಿಸುವಂತೆ ಹಾಗೂ ಆರ್ಥಿಕ ಪ್ರಗತಿಗೆ ಸ್ವಸಹಾಯ ಸಂಘಗಳನ್ನು ಪ್ರಾರಂಭಿಸುವಂತೆ ಹಾಗೂ ಸ್ವಂತ ಉದ್ಯೋಗ ಕೈಗೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಸಲಹೆ ನೀಡಿದರು.

ಸಮಾಜದ ಮುಖಂಡರಾದ ಸಿದ್ದರಾಜು ಕೆಂಪ ಶೆಟ್ಟಿ ಶಿವಣ್ಣ ಬಸವಯ್ಯ ಸ್ವಾಮಿ ಜಿ.ಮಹದೇವ್ ಮರಿಸ್ವಾಮಿ ಆಕಾಶ್ ನವೀನ್ ಕುಮಾರ್ ಮಧು ಪ್ರಕಾಶ್ ಮಂಜನಾಥ್ ಗುರುಪ್ರಸಾದ್ ಮೂರ್ತಿ ರಾಜು ಮಹಿಳಾ ಸಂಘದ ಸದಸ್ಯರಾದ ಶೃತಿ ಗೌರಿ ನಿಂಗರಾಜಮ್ಮ ಸಾಕಮ್ಮ ಕಾಂತಮ್ಮ ಕುಸಮ್ಮ ಲೀಲಾ ನಂಜಮಣಿ ನಾಗಮ್ಮ ಸಿದ್ದಮ್ಮ ಪ್ರಮೀಳಾ ರಾಣಿ ಸುಧಾ ಗ್ರಾಮಸ್ಥರು ಯಜಮಾನರು ಭಾಗವಹಿಸಿದ್ದರು.

ಬಜೆಟ್‌ನಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ನಿರಾಸೆ

ಗೌರವಧನದ ಬದಲು ಸೀರೆ ಭಾಗ್ಯ



ತಿ.ನರಸೀಪುರ, ಫೆ.7– ಅಂಗನವಾಡಿ ಕಾರ್ಯಕರ್ತರಿಗೆ ದಾಖಲೆ ಬಜೆಟ್ ಮಂಡಿಸಿರುವ ಸಿಎಂ ಸಿದ್ದರಾಮಯ್ಯನವರಿಂದ ಭಾರೀ ನಿರಾಸೆಯಾಗಿದೆ ಎಂದು ಬಿಜೆಪಿ ವರುಣ ಕ್ಷೇತ್ರದ ರೈತ ಮೋರ್ಚಾ ಅಧ್ಯಕ್ಷ ಡಿ. ಮಹೇಶ್ ಪುಟ್ಟೇಗೌಡ ಅವರು ವಾಗ್ದಾಳಿ ನಡೆಸಿದ್ದಾರೆ.

ತಮ್ಮ ಗೌರವಧನ ಹೆಚ್ಚಿಸುವಂತೆ ಅಂಗನವಾಡಿ ಕಾರ್ಯಕರ್ತರು ಅನೇಕ ಹೋರಾಟಗಳನ್ನು ಮಾಡಿಕೊಂಡು ಬಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲಿ ತಮ್ಮ ಗೌರವಧನ ಹೆಚ್ಚಿಸುತ್ತಾರೆ ಎಂದು ಕಾದಿದ್ದ ಅಂಗನವಾಡಿ ಕಾರ್ಯಕರ್ತರಿಗೆ ನಿರಾಶೆಯಾಗಿದೆ. ಗೌರವಧನ ಹೆಚ್ಚಿಸುವ ಬದಲು ಸಿದ್ದರಾಮಯ್ಯನವರು ಸೀರೆ ಭಾಗ್ಯ ಕಲ್ಪಿಸುವ ಮೂಲಕ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಎಂಬಂತಾಗಿದೆ ಎಂದಿದ್ದಾರೆ.

ಹಲವಾರು ಯೋಜನೆಗಳನ್ನು ಜಾರಿಗೆ ತರುವ ಮೂಲಕ ಜನರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿರುವ ಈ ಬಜೆಟ್ ದೂರ ದೃಷ್ಟಿ ಇಲ್ಲದ ಬಜೆಟ್ ಎಂದ ಅವರು ರೈತರ ಕಲ್ಯಾಣದ ಬಗ್ಗೆ ಅಂತಹ ಯಾವುದೇ ತೀರ್ಮಾನ ಕೈಗೊಂಡಿಲ್ಲ ಎಂದಿದ್ದಾರೆ.

ಸಾಗರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಪತ್ರಿಕಾಗೋಷ್ಠಿಯಲ್ಲಿ ನಾಯಕರ ಸಂಘದ ಅಧ್ಯಕ್ಷ ನಾಗರಾಜು ಮಾತನಾಡಿದರು.

ಸರಗೂರು, ಮಾ.7– ತಾಲೂಕಿನ ಸಾಗರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ರತ್ನಮ್ಮ ಶಿವರಾಜು ಹಾಗೂ ಉಪಾಧ್ಯಕ್ಷರಾಗಿ ಪುಟ್ಟಸಿದ್ದಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೆಚ್.ಕೆ.ಪ್ರಮೋದ್ ಅವಿರೋಧ ಆಯ್ಕೆ ಘೋಷಣೆ ಮಾಡಿದರು.

ತಾಲೂಕಿನ ಸಾಗರೆ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧ ಆಯ್ಕೆ ನಡೆಯಿತು.

ನೂತನ ಅಧ್ಯಕ್ಷೆ ಹಾಗೂ ಉಪಾಧ್ಯಕ್ಷರು ಮಾತನಾಡಿ, ನಾವು ರೈತನ ಮಕ್ಕಳು ನಮಗೆ ರೈತರ ಕಷ್ಟ ತಿಳಿದಿದೆ, ಹಾಗಾಗಿ ರೈತರಿಗೆ ಬೆನ್ನೆಲುಬಾಗಿ ನಿಂತು ಸಹಕಾರ ನೀಡುತ್ತೇವೆ. ಸರ್ಕಾರದಿಂದ ಬರುವ ಸವಲತ್ತುಗಳನ್ನು ಪ್ರತಿಯೊಬ್ಬರಿಗೂ ತಲುಪಿಸುವ ವ್ಯವಸ್ಥೆ ಮಾಡುತ್ತೇನೆ. ಸಹಕಾರ ಸಂಘದ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ ಎಂದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 12 ಸದಸ್ಯರ ಪೈಕಿ 11 ಮಂದಿ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. ನಿರ್ದೇಶಕರಾದ ಟಿ ಜಯರಾಮ, ಕೃಷ್ಣೇಗೌಡ, ಮಹದೇವಗೌಡ, ಜಯರಾಮೇಗೌಡ, ರವಿಚಾರಿ, ನಿಂಗರಾಜೇಗೌಡ, ಪುಷ್ಪಾವತಿಮೂರ್ತಿ, ಜವರನಾಯಕ, ಸುರೇಂದ್ರ, ಮುಖಂಡರಾದ ಶಂಕರ್ ಸಾಗರೆ, ಎಸ್ ಎಸ್ ಸ್ವಾಮಿ, ಬಸವೇಗೌಡ, ಈರನಾಯಕ, ಗೋವಿಂದನಾಯಕ, ಮಹದೇವಗೌಡ, ರಾಜೇಶ್, ಮಹಾದೇವಯ್ಯ, ಸೋಮೇಶ್, ನಾಗರಾಜು, ಎಸ್.ಟಿ.ಮೂರ್ತಿ, ಜಯರಾಮ್, ಮಹಾದೇವಯ್ಯ, ಸಿಬ್ಬಂದಿಗಳಾದ ಶಿವಪ್ಪ, ಶಿವಲಿಂಗ ಇನ್ನೂ ಗ್ರಾಮದ ಮುಖಂಡರು ಸೇರಿದಂತೆ ಹಾಜರಿದ್ದರು.

ಸಾಲಿಗ್ರಾಮ ಪಿಎಸಿಎಸ್‌ಗೆ ಮಹೇಶ್ ಅಧ್ಯಕ್ಷ

ಭೇರ್ಯ, ಮಾ.7– ಸಾಲಿಗ್ರಾಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಸ್.ಜೆ.ಮಹೇಶ್ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷ ಸತೀಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಎಸ್.ಜೆ.ಮಹೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಸಹಕಾರ ಸಂಘದ ಕಾರ್ಯದರ್ಶಿಯೂ ಅದ ಚುನಾವಣಾಧಿಕಾರಿ ಮಧು ಘೋಷಿಸಿದರು.

ಸಂಘದ ಕಚೇರಿಯಲ್ಲಿ ನಡೆದ ಚುನಾವಣಾ ಸಭೆಯಲ್ಲಿ ನಿರ್ದೇಶಕರಾದ ಸತೀಶ್, ಎಸ್.ಬಿ.ಮಂಜುನಾಥ್, ಎಸ್.ಬಿ.ಅಶೋಕ್, ನಾಗೇಂದ್ರ, ಕರುಣ ಕುಮಾರ್, ಚಂದ್ರನಾಯಕ, ಅನಂತ, ಜಯರಾಮೇಗೌಡ, ಅಶ್ವಿನಿ, ರುಕ್ಮಿಣಿ, ಸಣ್ಣದೇವಮ್ಮ, ದಿನೇಶ್ ಭಾಗವಹಿಸಿದ್ದರು. ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಜಿಪಂ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್, ಸಾಲಿಗ್ರಾಮ ತಾಲೂಕು ಕೇಂದ್ರವಾಗಿದೆ. ಹೀಗಾಗಿ ರೈತರಿಗೆ ಸಕಾಲದಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುವ ಜೊತೆಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಎಲ್ಲಾ ನಿರ್ದೇಶಕರು ಅಧ್ಯಕ್ಷರ ಜೊತೆ ಕೈ ಜೋಡಿಸಬೇಕು ಎಂದರು.

ವಿಜೃಂಭಣೆಯ ಶ್ರೀ ಶನೈಶ್ವರಸ್ವಾಮಿಯ ರಥೋತ್ಸವ



ಮೂಗೂರು: ಇಲ್ಲಿನ ಸಮೀಪದ ಕನ್ನಹಳ್ಳಿ ಮೋಳೆ ಗ್ರಾಮದಲ್ಲಿ 78ನೇ ವರ್ಷದ ಆರಾಧನಾ ವಾರ್ಷಿಕೋತ್ಸವದ ಅಂಗವಾಗಿ ಶ್ರೀ ಶನೈಶ್ವರಸ್ವಾಮಿಯ ರಥೋತ್ಸವವು ಶನಿವಾರ ಬಹಳ ವಿಜೃಂಭಣೆಯಿಂದ ನಡೆಯಿತು

ಗ್ರಾಮದ ಶ್ರೀ ಶನೈಶ್ವರ ಸ್ವಾಮಿಯ ದೇವಾಲಯದಲ್ಲಿ ಹೋಮ ಹಾಗೂ ವಿಶೇಷ ಪೂಜಾ ಕೈಂಕರ್ಯಗಳು ವಿಧಿವತ್ತಾಗಿ ನಡೆದವು. ಮಧ್ಯಾಹ್ನ 12ರ ವೇಳೆಗೆ ಊರಿನ ಬಸವ ಮಂಟೇಸ್ವಾಮಿ ದೊಡ್ಡಮ್ಮ ತಾಯಿ ಸತ್ತಿಗೆ ಮಹದೇಶ್ವರ ಸ್ವಾಮಿ ಹಾಗೂ ಶ್ರೀ ಶನೈಶ್ಚರ ಸ್ವಾಮಿಯ ಪಲಕ್ಕಿ ಉತ್ಸವ ಮೂರ್ತಿ ಒಳಗೊಂಡಂತೆ ರಥವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ರಸ್ತೆಯುದ್ದಕ್ಕೂ ನೆರೆದಿದ್ದ ಗ್ರಾಮಸ್ಥರು ಪೂಜೆ ಸಲ್ಲಿಸಿ ಭಕ್ತಿಯಿಂದ ನಮಿಸಿದರು. ಉತ್ಸವ ಮೂರ್ತಿ ಹಾಗೂ ಶ್ರೀ ಶನೈಶ್ವರ ಸ್ವಾಮಿಯ ರಥವು ದೇವಾಲಯ ತಲುಪುತ್ತಿದ್ದಂತೆ ನೆರೆದಿದ್ದ ಭಕ್ತರು ಜಯಘೋಷ ಹಾಕಿದರು. ಗ್ರಾಮಸ್ಥರಿಂದ ಅನ್ನಸಂತರ್ಪಣೆ ನಡೆಯಿತು.

ಶಾಲೆಗೆ ಪೀಠೋಪಕರಣ ಕೊಡುಗೆ



ಮೈಸೂರು ತಾಲ್ಲೂಕು ಜಯಪುರ ಗ್ರಾಮದ ಶ್ರೀ ರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆಗೆ, ಶಾಲೆಯ ಹಳೆಯ ವಿದ್ಯಾರ್ಥಿ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ ಪತ್ರಿಕೋದ್ಯಮ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಡಿ.ಸಾಲುಂಡಿ ಗ್ರಾಮದ ಡಾ.ಹೆಚ್ ಬೀರಪ್ಪ ಅವರು 1.25 ಲಕ್ಷ ರೂ.ವೆಚ್ಚದ ಪೀಠೋಪಕರಣಗಳನ್ನು, ಶಾಲೆಯ ಪ್ರಭಾರ ಮುಖ್ಯಶಿಕ್ಷಕರಾದ ಬಿ.ಸಿದ್ದರಾಮು ಅವರ ಸಮ್ಮುಖದಲ್ಲಿ ಕೊಡುಗೆಯಾಗಿ ನೀಡಿದರು

ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿರುವ ಬಜೆಟ್



ತಿ.ನರಸೀಪುರ, ಮಾ.7– ಸಾಂಸ್ಕೃತಿಕ ನಗರಿ ಮೈಸೂರಿನ ಸಮಗ್ರ ಅಭಿವೃದ್ಧಿಗೆ ಸಿಎಂ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಸ್ಪಷ್ಟವಾದ ದೂರದೃಷ್ಟಿ ಕಾಣಿಸುತ್ತದೆ ಎಂದು ಮೈಮುಲ್ ಮಾಜಿ ಅಧ್ಯಕ್ಷ ಆರ್.ಚಲುವರಾಜು ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯ ಮೂಲಸೌಕರ್ಯ, ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿಗೆ ಮಹತ್ವದ ಆದ್ಯತೆ ನೀಡಿರುವುದು ಪ್ರಶಂಸನೀಯ. ಜನಕಲ್ಯಾಣ ಮತ್ತು ಅಭಿವೃದ್ಧಿ ಎರಡನ್ನೂ ಸಮಾನವಾಗಿ ಮುಂದಿಟ್ಟಿರುವುದು ಈ ಬಜೆಟ್‌ನ ವಿಶೇಷತೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಮೈಸೂರು ಇನ್ನಷ್ಟು ವೇಗವಾಗಿ ಅಭಿವೃದ್ಧಿಯತ್ತ ಸಾಗಲಿದೆ ಎಂದರು.

ಅರ್ಜಿ ಆಹ್ವಾನ

ಮೈಸೂರು: ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಪಂಗಡದ ಸ್ತ್ರೀಶಕ್ತಿ ಗುಂಪಿನ ಸದಸ್ಯರನ್ನು ಗುಂಪು ಚಟುವಟಿಕೆಗಳ ಮೂಲಕ ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಕಿರುಸಾಲ ಯೋಜನೆಯನ್ನು ಜಾರಿಗೆ ತರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821–2495432 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ತಾಲೂಕು ನಾಯಕರ ಸಂಘದ ವತಿಯಿಂದ ಉಚಿತ ಸಾಮೂಹಿಕ ವಿವಾಹ



ಪತ್ರಿಕಾಗೋಷ್ಠಿಯಲ್ಲಿ ನಾಯಕರ ಸಂಘದ ಅಧ್ಯಕ್ಷ ನಾಗರಾಜು ಮಾತನಾಡಿದರು.

ನಂಜನಗೂಡು: ನಂಜನಗೂಡು ತಾಲೂಕು ನಾಯಕರ ಸಂಘದ ವತಿಯಿಂದ ಮಾ.8 ರಂದು ನಗರದ ವಾಲ್ಮೀಕಿ ಭವನದಲ್ಲಿ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ನಾಯಕರ ಸಂಘದ ಅಧ್ಯಕ್ಷ ನಾಗರಾಜು ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನೂತನವಾಗಿ ನಿರ್ಮಾಣವಾಗಿರುವ ತಾಲೂಕಿನ ವಾಲ್ಮೀಕಿ ಭವನವನ್ನು ಸದುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ ಮತ್ತು ನಾಯಕ ಜನಾಂಗದ ಬಡವರಿಗೆ ನೆರವು ನೀಡುವ ಸದುದ್ದೇಶದಿಂದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದರು. ಮಾ.8ರ ಭಾನುವಾರ ಬೆಳಗ್ಗೆ 10.30ಕ್ಕೆ ಉಚಿತ ಸಾಮೂಹಿಕ ವಿವಾಹ ನೆರವೇರಲಿದ್ದು ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಹೆಚ್.ಡಿ ಕೋಟೆ ಶಾಸಕ ಅನಿಲ್ ಚಿಕ್ಕಮಾದು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅವರ ಧರ್ಮಪತ್ನಿ ಸೌಮ್ಯ ಅನಿಲ್ ಚಿಕ್ಕಮಾದು ವಧುವರರಿಗೆ ತಾಳಿ ಮತ್ತು ಸೀರೆ ಕುಪ್ಪಸ ಬಾಗಿನ ವಿತರಣೆ ಮಾಡಲಿದ್ದಾರೆ, ವರನಿಗೆ ಶರ್ಟ್ ಪಂಚೆ ಮತ್ತು ಶಲ್ಯ ವಿತರಿಸಲಾಗುವುದು.

ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಶ್ರೀಕಂಠಸ್ವಾಮಿ, ಸೂರಹಳ್ಳಿ ಲಕ್ಷ್ಮಣ, ಸುಧೀಂದ್ರಕುಮಾರ್, ಆರ್.ಮಂಜು, ಸುತ್ತೂರು ರವಿ, ಉಪಸ್ಥಿತರಿದ್ದರು.

ತಿ.ನರಸೀಪುರವನ್ನು ಮಾದರಿ ಕ್ಷೇತ್ರ ಮಾಡುವುದೇ ನನ್ನ ಗುರಿ

ಯಾಚೇನಹಳ್ಳಿಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಸಂಸದ ಸುನಿಲ್ ಬೋಸ್



ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಭೂಮಿ ಪೂಜೆ ನೆರವೇರಿಸಿದರು.

ತಿ.ನರಸೀಪುರ, ಮಾ.7– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಿ.ನರಸೀಪುರ ಕ್ಷೇತ್ರವನ್ನು ನೂರಾರು ಕೋಟಿ ರೂ. ಅನುದಾನದೊಂದಿಗೆ ಅಭಿವೃದ್ಧಿಪಡಿಸಿ ಮಾದರಿ ಕ್ಷೇತ್ರವನ್ನಾಗಿ ಮಾಡುವುದೇ ನಮ್ಮ ಗುರಿ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಾಲೂಕಿನ ಯಾಚೇನಹಳ್ಳಿಯ ವ್ಯಾಪ್ತಿಯಲ್ಲಿ ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ತಂದೆ, ಸಚಿವ ಮಹದೇವಪ್ಪನವರು ನೂರಾರು ಕೋಟಿ ರೂ. ಅನುದಾನ ತಂದು ಕ್ಷೇತ್ರವನ್ನು ನಿರೀಕ್ಷೆಗೂ ಮೀರಿ ಅಭಿವೃದ್ಧಿಪಡಿಸಿದ್ದಾರೆ. ಕ್ಷೇತ್ರದಲ್ಲಿ ನೂರಾರು ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನದೊಂದಿಗೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ತಾವು ಬದ್ಧರಾಗಿದ್ದು, ತಂದೆಯೊಂದಿಗೆ ಸೇರಿ ತಿ.ನರಸೀಪುರ ಕ್ಷೇತ್ರ ಹಾಗೂ ಚಾಮರಾಜನಗರ ಜಿಲ್ಲೆಯನ್ನು ಅಭಿವೃದ್ಧಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆ ಎಂದರು.

ಕ್ಷೇತ್ರದಲ್ಲಿ ಹಿಂದೆ ಯಾರೂ ಮಾಡದ ಅಭಿವೃದ್ಧಿ ಕಾಮಗಾರಿಯನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮುಖ್ಯಮಂತ್ರಿ ಸಿದ್ದರಾಮಯ್ಯರ ಸಹಕಾರದೊಂದಿಗೆ ಮಾಡಿದ್ದಾರೆ ಎಂದ ಅವರು ಕ್ಷೇತ್ರದ ಜನತೆ ನಮಗೆ ನಿರೀಕ್ಷೆಗೂ ಮೀರಿದ ಸಹಕಾರ ನೀಡಿದ್ದು, ಜನತೆಯ ಆಶಯಕ್ಕೆ ತಕ್ಕಂತೆ ನಾವು ಕೆಲಸ ಮಾಡುತ್ತೇವೆ. ಗ್ರಾಮೀಣ ಜನತೆಯ ಆಶೋತ್ತರಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಾನು ಮತ್ತು ನಮ್ಮ ತಂದೆ ಅವಿರತವಾಗಿ ಶ್ರಮಿಸುತ್ತಿದ್ದೇವೆ. ಮುಂದೆಯೂ ಕ್ಷೇತ್ರದ ಜನತೆ ಈಗ ನೀಡುತ್ತಿರುವ ಸಹಕಾರ ಮುಂದುವರೆಸುವಂತೆ ಮನವಿ ಮಾಡಿದರು.

ಯಾಚನಹಳ್ಳಿ ಪಿಎಸಿಸಿಎಸ್ ಅಧ್ಯಕ್ಷ ವೈ.ಎನ್.ಶಂಕರೇಗೌಡ, ಮೈಮುಲ್ ಮಾಜಿ ಅಧ್ಯಕ್ಷ ಆರ್.ಚೆಲುವರಾಜು, ನಾಡಗೌಡ ಹನುಮಂತೇಗೌಡ, ಹಾಪ್‌ಕಾಮ್ಸ್ ಉಪಾಧ್ಯಕ್ಷ ಮಹೇಂದ್ರ, ಗ್ರಾಪಂ ಮಾಜಿ ಸದಸ್ಯ ಶೇಖರ್, ಕಾರ್ತಿಕ್ ಬಸವರಾಜ್, ಕ್ಯಾತಗೌಡ, ಪುಟ್ಟಣ್ಣ, ಶೇಖರ್, ತಾಪಂ ಮಾಜಿ ಅಧ್ಯಕ್ಷ ದೊಡ್ಡಬಾಗಿಲು ಎಂ.ಮಲ್ಲಿಕಾರ್ಜುನಸ್ವಾಮಿ, ತಾಪಂ ಬ್ಲಾಕ್ ಕಾಂಗ್ರೆಸ್ ಮೀನುಗಾರರ ಘಟಕದ ಅಧ್ಯಕ್ಷ ಕೊಳತ್ತೂರು ಕೆ.ಎನ್. ಕುಮಾರ್, ಸಂಸದರ ಆಪ್ತ ಕಾರ್ಯದರ್ಶಿ ಬಸವರಾಜು, ಪಾರು ಪತ್ತೆದಾರ್ ಎಂ.ಬಿ. ಸಾಗರ್, ತಹಸೀಲ್ದಾರ್ ಸುರೇಶಾಚಾರ್, ಸತೀಶ್‌ಚಂದ್ರ ಇತರರಿದ್ದರು.

> **ಯಾಚೇನಹಳ್ಳಿಗೆ ಬರಪೂರ ಅಭಿವೃದ್ಧಿ**
> ಮೂರು ಕೋಟಿ ರೂ ವೆಚ್ಚದಲ್ಲಿ ಡ್ಯೆರಿಯಿಂದ ಹುಲಿಯಮ್ಮನ ದೇವಸ್ಥಾನದವರೆಗೆ ಡಾಂಬರೀಕರಣ ರಸ್ತೆ 20 ಲಕ್ಷದಲ್ಲಿ ರೂ ವೆಚ್ಚದಲ್ಲಿ ಜನರಲ್ ನಿವಾಸಿಗಳಿಗೆ ರಸ್ತೆ ಅಭಿವೃದ್ಧಿ. ಎಸ್ಸಿಪಿ ಟಿಎಸ್ಪಿಯಿಂದ 10 ಲಕ್ಷ ರೂಪಾಯಿ. ರಸ್ತೆ ಚರಂಡಿ ಕಾಮಗಾರಿ. ವಿಶ್ವಕರ್ಮ ಸಮಾಜದ ಸಮುದಾಯ ಭವನಕ್ಕೆ 5 ಲಕ್ಷ. 70 ಲಕ್ಷದಲ್ಲಿ ಸುಸಜ್ಜಿತವಾಗಿ ಅಂಬೇಡ್ಕರ್ ಭವನ. ನಿರ್ಮಾಣ ಹಾಗೂ ಇನ್ನು ಹೆಚ್ಚಿನ ಅಭಿವೃದ್ಧಿಗೆ ಪಟ್ಟಿ ಕೊಟ್ಟಿದ್ದು ಹಂತ ಹಂತ ಹೋಗಿ ಬಿಡುಗಡೆ ಮಾಡಿಕೊ ಡುತ್ತೇನೆ ಎಂದು ಸಂಸದರು ಭರವಸೆ ನೀಡಿದ್ದಾರೆ
> –ಅಶೋಕ್, ಗ್ರಾಪಂ ಸದಸ್ಯ ಯಾಚನಹಳ್ಳಿ

ಮೈಸೂರು ಮಿತ್ರ

ಭಾನುವಾರ 8 ಮಾರ್ಚ್ 2026

ಸರಕಾರ ಸಾಲ ಮಾಡಿದ ದುಡ್ಡೆಲ್ಲವ ಏನು ಮಾಡ್ತಿದೆ...!

● ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಳವಳ ● ನಿಮ್ಮ ಮುಖ್ಯಮಂತ್ರಿಗಳಿಗೆ ಸ್ವಲ್ಪ ತಿಳುವಳಿಕೆ ಹೇಳಿ; ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್‌ಗೆ ಕಿವಿಮಾತು ● ಹುಣಸೂರು ತಾಲೂಕಿನ ಶ್ರೀ ಉಕ್ಕಿನಕಂತೆ ಮಠದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರು ಭಾಗಿ

ಹುಣಸೂರು, ಮಾ.7–ರಾಜ್ಯ ಸರ್ಕಾರದ ಪ್ರಸಕ್ತ ಸಾಲಿನ ಮುಂಗಡ ಪತ್ರದ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸರ್ಕಾರದ ಅಂಕಿ ಅಂಶಗಳನ್ನು ಬಜೆಟ್ ಪುಸ್ತಕದಲ್ಲಿ ಮುದ್ರಿಸಿ ತೋರಿಸಿದರೆ ಯಾವುದೇ ಪ್ರಯೋಜನ ಆಗದು ಎಂದು ಹೇಳಿದರು.

ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಮಾದಹಳ್ಳಿಯ ಶ್ರೀ ಉಕ್ಕಿನಕಂತೆ ಮಠದಲ್ಲಿ ನಡೆದ ಶ್ರೀ ಗುರುಬೂದಿಸ್ವಾಮಿಗಳ 397ನೇ ಆರಾಧನೆ ಹಾಗೂ 63 ಪ್ರಮಥರ ಪೂಜೆ, ನೂತನ ಕಟ್ಟಡ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬರೀ ಅಂಕಿ–ಅಂಶಗಳನ್ನು ತೋರಿಸಿ ಏನು ಮಾಡುತ್ತೀರಿ. ಜನರ ಆಶೋತ್ತರಗಳನ್ನು ಈಡೇರಿಸಬೇಕು ಅಲ್ಲವೇ. ನಾನು ಮುಖ್ಯಮಂತ್ರಿಗಳಿಗೆ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ; ಮುಂದಿನ ದಿನಗಳ ಕರಾಳ ಎಂಬುದನ್ನು ಮರೆಯಬೇಡಿ. ಎಚ್ಚರಿಕೆಯಿಂದ ನಿರ್ಧಾರಗಳನ್ನು ಮಾಡಿ ಎಂದು ಎಚ್ಚರಿಕೆ ನೀಡಿದರು.

ವೇದಿಕೆಯ ಮೇಲೆ ಆಸೀನರಾಗಿದ್ದ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ನನ್ನ ಸಹೋದರಿಗೆ ಒಂದು ಮಾತು ಹೇಳಬಯಸುತ್ತೇನೆ; ಮಹಿಳೆಯರಿಗೆ ನಿಮ್ಮ ಇಲಾಖೆಯಿಂದ ನೀಡುತ್ತಿರುವ 2000 ರೂ. ಗೃಹಲಕ್ಷ್ಮೀ ಹಣದ ಬಗ್ಗೆ ನನ್ನ ತಕರಾರು ಇಲ್ಲ. ಅದಕ್ಕೆ ನನ್ನ ವಿರೋಧವೂ ಇಲ್ಲ. ಕಳೆದ ಮೂರು ವರ್ಷಗಳಿಂದ ಈ ಯೋಜನೆಯ ಮೂಲಕ 70,000ರಿಂದ 75,000 ಕೋಟಿ ನೀಡಿರಬಹುದು. ಆದರೆ, ಅದಕ್ಕೆ ಹಣವನ್ನು ಎಲ್ಲಿಂದ ತರುತ್ತಿದ್ದೀರಿ ಎಂದು ಪ್ರಶ್ನಿಸಿದರು.

ರಾಜ್ಯದ ಸಾಲ ಈಗ 8.24 ಲಕ್ಷ ಕೋಟಿಗೆ ತಲುಪಿದೆ. ಈ ವರ್ಷ ಹೊಸದಾಗಿ 1.32 ಲಕ್ಷ ಕೋಟಿ ಸಾಲ ಮಾಡುತ್ತಿದ್ದಾರೆ. ಹಾಗೆ ಮಾಡುವ ಸಾಲದ ದುಡ್ಡು ಎಲ್ಲಿಗೆ ಹೋಗುತ್ತದೆ? ಬಂಡವಾಳ ವೆಚ್ಚ ಮಾಡುತ್ತಿಲ್ಲ. ಸರಕಾರಿ ಆಸ್ತಿಗಳು ನಿರ್ಮಾಣ ಆಗುತ್ತಿಲ್ಲ. ಹಾಗಾದರೆ ಸಾಲದ ಹಣವನ್ನೆಲ್ಲಾ ಏನು ಮಾಡುತ್ತಿದ್ದೀರಿ? ನಿಮ್ಮ ಮುಖ್ಯಮಂತ್ರಿಗಳಿಗೆ ಸ್ವಲ್ಪ ತಿಳುವಳಿಕೆ ಹೇಳಿ, ಇಲ್ಲವಾದರೆ ರಾಜ್ಯದ ಪರಿಸ್ಥಿತಿ ದಯನೀಯ ಸ್ಥಿತಿಗೆ ಹೋಗಲಿದೆ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಕೇಂದ್ರ ಸಚಿವರು ಕಿವಿಮಾತು ಹೇಳಿದರು.

ನಾನು ಅಲ್ಪ ಅವಧಿಗೆ ಎರಡು ಬಾರಿ ಮುಖ್ಯಮಂತ್ರಿ ಆಗಿದ್ದೆ. ಸಾಲ ಮನ್ನಾ ಮಾಡುತ್ತೇನೆ ಎಂದು ಮಾತು ಕೊಟ್ಟೆ ಹಣವೇ ಇಲ್ಲ, ಸಾಲ ಮನ್ನಾ ಹೇಗೆ ಮಾಡುತ್ತೀರಿ ಎಂದು ಕುಹಕ ಆಡಿದರು. ಆದರೂ ನಾನು ಎಲ್ಲಿಯೂ ಸಾಲ ಮಾಡದೆಯೇ ಸಾಲ ಮನ್ನಾ ಮಾಡಿ ತೋರಿಸಿದೆ ಎಂದು ಕುಮಾರಸ್ವಾಮಿ ಸಾಹಸವನ್ನು ಪ್ರಸ್ತಾಪಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಶೇಷ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಶ್ರೀ ಗುರುಬೂದಿ ಸ್ವಾಮಿಗಳ ಭಾವಚಿತ್ರ ಅನಾವರಣ ಮಾಡಿ ಮಾತನಾಡಿ, ನಮ್ಮ ದೇಶದಲ್ಲಿ ಪರಂಪರೆ, ಇತಿಹಾಸ ಬಹಳಷ್ಟು ನೋಡಲಿಕ್ಕೆ ಸಿಗುತ್ತದೆ. ಇಂತಹ ಪ್ರಶಾಂತವಾದ ವಾತಾವರಣದಲ್ಲಿ, ಭಕ್ತಿ ಭಾವನೆ ತಾನಾಗೆ ಹುಟ್ಟುವಂತಹ ಸ್ಥಳದಲ್ಲಿ ಈ ಮಠ ಇರುವುದು ಹಾಗೂ ಇದಕ್ಕೆ 700 ವರ್ಷಗಳ ಇತಿಹಾಸ ಇರುವುದು ನೋಡಿ ಸಂತೋಷ ತಂದಿದೆ ಎಂದರು.

ನಾವು ರಾಜಕೀಯದವರು, ಸಮಾಜ ಸೇವೆ ಗಮನದಲ್ಲಿಟ್ಟುಕೊಂಡು ಬರುತ್ತೇವೆ. ಆದರೆ, ಸಾವಿರಾರು ವರ್ಷಗಳಿಂದ ಮಠಮಾನ್ಯರು ನಿಸ್ವಾರ್ಥದಿಂದ ಸಮಾಜ ಮುಖಿಯಾಗಿ ಅಕ್ಷರ ಮತ್ತು ದಾಸೋಹದ ಕೆಲಸ ನಿರ್ವಹಿಸುತ್ತಿದ್ದಾರೆ. ನಮ್ಮ ಮಠಗಳಿಗೆ ಇತಿಹಾಸ ಇದೆ, ಭಕ್ತರಿಗೂ ಮಠಕ್ಕೂ ಅವಿನಾಭಾವ ಸಂಬಂಧವಿದೆ. ಅನ್ನ– ಅಕ್ಷರ– ಶಿಕ್ಷಣವನ್ನು ಸಾವಿರಾರು ವರ್ಷಗಳಿಂದ ನೀಡುವ ಪವಾಡ ಸದೃಶ ಎಂದರು.

ಸಮಾಜ ಕಲ್ಯಾಣ ಸಚಿವರು ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾದಹಳ್ಳಿ ಶ್ರೀ ಉಕ್ಕಿನಕಂತೆ ಮಠ ಕೃತಿ ಬಿಡುಗಡೆ ಮಾಡಿ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣನವರು ಹೇಳಿರುವಂತೆ ಬದುಕುತ್ತಿರುವ ಲಿಂಗಾಯತ ಸಮಾಜ, ಎಲ್ಲಾ ಧರ್ಮದವರನ್ನು ಗೌರವಿಸುತ್ತಿದೆ. ಕರುಣೆಯಿಂದ ಬದುಕಬೇಕು ಎಂಬುದು ಲಿಂಗಾಯಿತ ಸಮಾಜದ ಆಶಯ. ಇದನ್ನೇ ಅಂಬೇಡ್ಕರ್ ಅವರು ಬೌದ್ಧ ಧರ್ಮದಲ್ಲಿ ಕಂಡಿದ್ದರು.

ಮಾದಹಳ್ಳಿ ಉಕ್ಕಿನಕಂತೆ ಮಠದ ಸಾಂಬ ಸದಾಶಿವ ಸ್ವಾಮಿಗಳು ದಾನಿಗಳು ಹಾಗೂ ಮಠದ ಅಭಿವೃದ್ಧಿಗೆ ಕಾರಣರಾದ ಎಲ್ಲರನ್ನೂ ಗೌರವಿಸಿ ಮುಂದೆಯೂ ಕೂಡ ಮಠದ ಜೊತೆಗೆ ನಿಲ್ಲಬೇಕು ಎಂದರು.

ಕಾರ್ಯಕ್ರಮದಲ್ಲಿ ದಾನಿಗಳಾದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ ತಂದೆ ಪ್ರೇಮ್ ಕುಮಾರ್, ಶ್ರೀಮತಿ ಪ್ರೇಮಕುಮಾರ್, ಯು.ಎಸ್.ಶೇಖರ್ ದಂಪತಿ, ಹಾಗೂ ಹೆಚ್.ಎಸ್.ರಮೇಶ್ ಕುಟುಂಬದವರನ್ನು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮಾತನಾಡಿದರು. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಶಾಸಕರಾದ ಗಣೇಶ್ ಪ್ರಸಾದ್, ರವಿಶಂಕರ್, ಮಾಜಿ ಸಚಿವ ಸಾ.ರಾ.ಮಹೇಶ್, ಮಾಜಿ ಶಾಸಕರಾದ ಹೆಚ್.ಪಿ.ಮಂಜುನಾಥ್, ಆಯನೂರು ಮಂಜುನಾಥ್, ವಿಧಾನಪರಿಷತ್ ಸದಸ್ಯ ಮಂಜೇಗೌಡ, ಸಿದ್ದಗಂಗಾ ಮಠದ ಪರಮಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಕೆಆರ್ ನಗರ ಕಾಗಿನೆಲೆ ಶಾಖ ಮಠದ ಶಿವಾನಂದ ಪುರಿ ಸ್ವಾಮಿ, ರತ್ನಮ್ಮ ಪ್ರೇಮ್ ಕುಮಾರ್, ಸಂಘದ ಅಧ್ಯಕ್ಷ ಹೆಚ್.ಎಸ್.ಸೋಮಶೇಖರ್, ಜಿ.ಪಂ.ಮಾಜಿ ಉಪಾಧ್ಯಕ್ಷ ಎ.ಸಿ.ಚನ್ನಬಸಪ್ಪ, ಮುಖಂಡರಾದ ಹೊಸೂರು ಕುಮಾರ್, ಹೆಚ್.ಸಿ.ಶಿವಣ್ಣ, ಪ್ರಸನ್ನಕುಮಾರ್, ಸೇರಿದಂತೆ ಅನೇಕ ಗಣ್ಯರು ಸಾವಿರಾರು ಭಕ್ತರು ಭಾಗವಹಿಸಿದ್ದರು.



ಮಾದಹಳ್ಳಿ ಉಕ್ಕಿನಕಂತೆ ಮಠದಲ್ಲಿ ಶ್ರೀ ಗುರುಬೂದಿ ಸ್ವಾಮಿಗಳ 397ನೇ ಆರಾಧನೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ವಾದಂ (ತ) + ಮುಸ್ತಫಾ ಮುಸ್ತಫಾ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರಕ್ಕಸ ಪುರದೊಳ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಮೆಜೆಸ್ಟಿಕ್–2 (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓರಿಯೋ (ಕ) + ಜಯಕೃಷ್ಣ (ಕ)	2+2 ಪ್ರದರ್ಶನಗಳು

ಸುರಕ್ಷಿತವಾಗಿ ರೈಲ್ವೆ ಹಳಿ ದಾಟುವ ಬಗ್ಗೆ ಜಾಗೃತಿ



ನೈರುತ್ಯ ರೈಲ್ವೆ ಜಾಗೃತಿ ಅಭಿಯಾನ ತಂಡವು ಕೆಆರ್‌ಎಸ್ ರಸ್ತೆ ರೈಲ್ವೆ ಎಲ್‌ಸಿ ಗೇಟ್ ಬಳಿ ಶನಿವಾರ ಸಾರ್ವಜನಿಕರಿಗೆ ಅರಿವು ಮೂಡಿಸಿತು.

ಮೈಸೂರು, ಮಾ.7– ರೈಲ್ವೆ ಹಳಿ ದಾಟುವಾಗ ಅನುಸರಿಸಬೇಕಾದ ಸುರಕ್ಷಿತ ಕ್ರಮಗಳ ಬಗ್ಗೆ ನೈರುತ್ಯ ರೈಲ್ವೆ ಜಾಗೃತಿ ಅಭಿಯಾನ ತಂಡವು ಶನಿವಾರ ಸಾರ್ವಜನಿಕರಿಗೆ ಅರಿವು ಮೂಡಿಸಿತು.


ಮೈಸೂರು–ಕೆಆರ್‌ಎಸ್ ರಸ್ತೆಯ ಲೆವೆಲ್ ಕ್ರಾಸಿಂಗ್(ಎಲ್‌ಸಿ) ಗೇಟ್ 5ರಲ್ಲಿ ವಾಹನ ಸವಾರರು ಹಾಗೂ ಪಾದಚಾರಿಗಳಿಗೆ ಅಗತ್ಯ ಮಾಹಿತಿ ನೀಡಲಾಯಿತು.

ರೈಲ್ವೆ ಎಲ್‌ಸಿ ಗೇಟ್‌ಗಳನ್ನು ಸಮೀಪಿಸುವಾಗ ಸಂಚಾರ ನಿಯಮ ಹಾಗೂ ಲೇನ್ ಶಿಸ್ತನ್ನು ಪಾಲಿಸಬೇಕು. ಗೇಟ್ ತೆರೆಯುವಾಗ ಅಥವಾ ಮುಚ್ಚುವಾಗ ತರಾತುರಿಯಿಂದ ಹಳಿ ದಾಟಲು ಮುಂದಾಗಬಾರದು. ಗೇಟ್ ಅನ್ನು ಸಂಪೂರ್ಣವಾಗಿ ತೆಗೆದ ನಂತರವೇ ಹಳಿ ದಾಟಬೇಕು. ಈ ವೇಳೆ ವಾಹನ ಸವಾರರು ನಿಧಾನವಾಗಿ ಚಲಿಸಬೇಕು ಎಂದು ತಿಳಿಹೇಳಲಾಯಿತು.

ವಾಹನಗಳಿಂದ ಎಲ್‌ಸಿ ಗೇಟ್‌ಗೆ ಹಾನಿ ಮಾಡುವುದು, ಕರ್ತವ್ಯನಿರತ ಗೇಟ್ ಮ್ಯಾನ್ ಮೇಲೆ ಹಲ್ಲೆ ಮಾಡುವುದು ಶಿಕ್ಷಾರ್ಹ ಅಪರಾಧ ಎಂದು ಎಚ್ಚರಿಕೆ ನೀಡಿ, ಮಾಹಿತಿಯುಳ್ಳೊಳಗೊಂಡ ಭಿತ್ತಿಪತ್ರಗಳನ್ನು ಸಾರ್ವಜನಿಕರಿಗೆ ಹಂಚಲಾಯಿತು.

ಮೈಸೂರು ರೈಲ್ವೆ ನಿಲ್ದಾಣದ ರೈಲ್ವೆ ರಕ್ಷಣಾ ಪಡೆಯ ಸಬ್‌ಇನ್ಸ್‌ಪೆಕ್ಟರ್ ಎಸ್.ಪಿ.ಹರೀಶ್ ನೇತೃತ್ವದಲ್ಲಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಎಎಸ್‌ಐ ಬಸವರಾಜ್ ವತ್ತರ್ ಹಾಗೂ ಇತರೆ ಸಿಬ್ಬಂದಿ ಪಾಲ್ಗೊಂಡಿದ್ದರು.

ದ್ವಿಚಕ್ರ ವಾಹನಗಳ ಡಿಕ್ಕಿ; ಸವಾರ ಸಾವು



ಮೈಸೂರು, ಮಾ.7– ಬೈಕ್ ಹಾಗೂ ಸ್ಕೂಟರ್ ನಡುವೆ ಸಂಭವಿಸಿದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಸವಾರ, ಚಿಕಿತ್ಸೆ ಫಲಕಾರಿಯಾಗದೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ತಾಲೂಕಿನ ಜಯಪುರ ಹೋಬಳಿ ಟಿ.ಕಾಟೂರು ಗ್ರಾಮದ ನಾರಾಯಣ (33) ಮೃತರು. ಮೇಸ್ತ್ರಿ ಕೆಲಸ ಮಾಡಿಕೊಂಡಿದ್ದ ಇವರು, ಮಾ.4ರಂದು ಸಂಜೆ ತಮ್ಮ ಬಾವ ಮಹದೇವಸ್ವಾಮಿ ಅವರೊಂದಿಗೆ ಹೋಂಡಾ ಆಕ್ಟೀವಾ ಸ್ಕೂಟರ್‌ನಲ್ಲಿ ಟಿ.ಕಾಟೂರು ಕಡೆಯಿಂದ ಉದ್ಬೂರು ಕಡೆಗೆ ಹೋಗುವಾಗ ಎದುರಿನಿಂದ ಬಂದ ಬಜಾಜ್ ಪಲ್ಸರ್ ಬೈಕ್ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಎರಡೂ ವಾಹನಗಳ ಸವಾರರು ನೆಲಕ್ಕುರುಳಿ, ಗಾಯಗೊಂಡಿದ್ದಾರೆ. ಆದರೆ ತೀವ್ರವಾಗಿ ಗಾಯಗೊಂಡಿದ್ದ ಸ್ಕೂಟರ್ ಸವಾರ ನಾರಾಯಣ ಅವರನ್ನು ಆಂಬುಲೆನ್ಸ್‌ನಲ್ಲಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಅವರು ಮರುದಿನ ಸಾವನ್ನಪ್ಪಿದ್ದಾರೆ. ಈ ಸಂಬಂಧ ಜಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾದಕ ವಸ್ತು ಮುಕ್ತ ಮೈಸೂರು: ಪೊಲೀಸರಿಂದ ವಿಮುಕ್ತಿ ಅಭಿಯಾನ



'ವಿಮುಕ್ತಿ ಅಭಿಯಾನ'ದ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು

ಮೈಸೂರು, ಮಾ.7– ಮೈಸೂರು ನಗರ ಪೊಲೀಸರು ಶನಿವಾರ 'ವಿಮುಕ್ತಿ ಅಭಿಯಾನ'ದ ಮೂಲಕ ಮಾದಕ ವಸ್ತು ವರ್ಜನದ ಬಗ್ಗೆ ಜಾಗೃತಿ ಮೂಡಿಸಿದರು.

ನಗರದ ದೇವರಾಜ, ನರಸಿಂಹರಾಜ, ಕೃಷ್ಣರಾಜ ಹಾಗೂ ವಿಜಯನಗರ ಉಪವಿಭಾಗಗಳ ಬಹುತೇಕ ಪೊಲೀಸ್ ಠಾಣಾ ವ್ಯಾಪ್ತಿಯಲ್ಲೂ ಈ ಅಭಿಯಾನ ನಡೆಸಿ, ಮಾದಕ ದ್ರವ್ಯ ಮುಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಲಾಯಿತು.

ಪ್ರಮುಖವಾಗಿ ಲಾರಿ, ಆಟೋ, ಟ್ಯಾಕ್ಸಿ ನಿಲ್ದಾಣಗಳು ಸೇರಿದಂತೆ ಜನನಿಬಿಡ ಸ್ಥಳಗಳಲ್ಲಿ ಪೋಸ್ಟರ್ ಅಳವಡಿಸಿ, ಯಾವುದೇ ಕಾರಣಕ್ಕೂ ಮಾದಕ ವಸ್ತುಗಳ ದಾಸರಾಗಬೇಡಿ ಎಂದು ಅರಿವು ಮೂಡಿಸಲಾಯಿತು.

ಮನೆಯಲ್ಲಿ ಒಬ್ಬರು ಮಾದಕ ವಸ್ತು ವ್ಯಸನಿಯಾದರೂ ಇಡೀ ಕುಟುಂಬದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಮನೆಯಲ್ಲಿ ಯಾರಿಗೂ ನೆಮ್ಮದಿ ಇರುವುದಿಲ್ಲ. ವ್ಯಸನಕ್ಕೆ ಬಲಿಯಾದವರು ಹಣಕ್ಕಾಗಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಾರೆ. ಕುಟುಂಬದ ನೆಮ್ಮದಿ ಜೊತೆಗೆ ಸಮಾಜದ ಸ್ವಾಸ್ಥ್ಯವೂ ಹಾಳಾಗುತ್ತದೆ ಎಂದು ಮನದಟ್ಟು ಮಾಡಿದರು.

ಗಾಂಜಾ, ಎಂಡಿಎಂಎ ಇನ್ನಿತರ ಮಾದಕ ವಸ್ತುಗಳ ಸೇವನೆ, ಮಾರಾಟ ಹಾಗೂ ಸಾಗಾಟದ ಬಗ್ಗೆ ಮಾಹಿತಿ ತಿಳಿದರೆ ನಮಗ್ಯಾಕೆ ಎಂದು ನಿರ್ಲಕ್ಷಿಸಬೇಡಿ. ಯಾವುದೇ ಭಯವಿಲ್ಲದೆ ತಕ್ಷಣ ನಮಗೆ ಮಾಹಿತಿ ನೀಡಿ. ಕೂಡಲೇ ಅಂತಹವರನ್ನು ವಶಕ್ಕೆ ಪಡೆದು ಸೂಕ್ತ ಕಾನೂನು ಕ್ರಮ ಜರುಗಿಸುತ್ತೇವೆ. ಯಾವುದೇ ಕಾರಣಕ್ಕೂ ಮಾಹಿತಿ ನೀಡಿದವರ ವಿವರವನ್ನು ಬಹಿರಂಗಪಡಿಸುವುದಿಲ್ಲ. ಮಾದಕ ಮುಕ್ತ ಮೈಸೂರು ನಿರ್ಮಾಣಕ್ಕೆ ಪ್ರತಿಯೊಬ್ಬರೂ ಸಹ ಕರಿಸಿ ಎಂದು ಪೊಲೀಸರು ಮನವಿ ಮಾಡಿದರು.

ಮೈಸೂರು ಮೃಗಾಲಯದಲ್ಲಿ ಪ್ರಕೃತಿ ನಿರೂಪಣಾ ಕೇಂದ್ರ ಸ್ಥಾಪನೆ

ಬಜೆಟ್‌ನಲ್ಲಿ ಘೋಷಣೆ



ಪ್ರಕೃತಿ ನಿರೂಪಣಾ ಕೇಂದ್ರಕ್ಕೆ ಗುರುತಿಸಲಾಗಿರುವ ಕಟ್ಟಡ

ಮೈಸೂರು, ಮಾ.7(ಎಂಟಿವೈ)– ಪ್ರವಾಸಿಗರು ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಲು ಮೈಸೂರು ಮೃಗಾಲಯದ ಆವರಣದಲ್ಲಿ ಪ್ರಕೃತಿ ನಿರೂಪಣೆ ಕೇಂದ್ರ(ನೇಚರ್ ಇಂಟರ್‌ಪ್ರಿಟೇಷನ್ ಸೆಂಟರ್) ಸ್ಥಾಪಿಸಲು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ದೇಶದ ಮೃಗಾಲಯಗಳಲ್ಲಿ ಪ್ರಮುಖ ಮೈಸೂರು ಮೃಗಾಲಯ ದೇಶ–ವಿದೇಶಗಳ ಅಪರೂಪದ ಪ್ರಾಣಿ–ಪಕ್ಷಿಗಳ ಸಂತತಿಯನ್ನು ಪೋಷಿಸುತ್ತಿದ್ದು, ಇದರಿಂದ ದಿನದಿಂದ ದಿನಕ್ಕೆ ಮೃಗಾಲಯಕ್ಕೆ ಬರುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೃಗಾಲಯಕ್ಕೆ ಬರುವ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಪ್ರವಾಸಿಗರಿಗೆ ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ನೇಚರ್ ಇಂಟರ್‌ಪ್ರಿಟೇಷನ್ ಸೆಂಟರ್ ಸ್ಥಾಪಿಸಲು ಬಜೆಟ್‌ನಲ್ಲಿ ಅನುಮೋದನೆ ನೀಡಲಾಗಿದ್ದು, ವನ್ಯಜೀವಿ ಸಂರಕ್ಷಣೆಯ ಅಭಿಯಾನದಲ್ಲಿ ಮಹತ್ವ ಪಡೆಯಲಿದೆ.

ಪ್ರವೇಶ ದ್ವಾರದ ಬಳಿಯೇ ಮಾಹಿತಿ ಕೇಂದ್ರ: ರಾಜ್ಯ ಸರ್ಕಾರ ಬಜೆಟ್‌ನಲ್ಲಿ ನೇಚರ್ ಇಂಟರ್‌ಪ್ರಿಟೇಷನ್ ಸೆಂಟರ್ ಸ್ಥಾಪಿಸಲು ಅನುಮೋದನೆ ನೀಡಿರುವ ಕುರಿತು ಮೈಸೂರು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಪಿ.ಅನುಷಾ ಮಾತನಾಡಿ, ಮೈಸೂರು ಮೃಗಾಲಯ ಹಳೆಯ ಮೃಗಾಲಯವಾಗಿದ್ದು, ಇದುವರೆಗೆ ನಿರೂಪಣೆ ಕೇಂದ್ರ ಇರಲಿಲ್ಲ. ಸರ್ಕಾರ ಬಜೆಟ್‌ನಲ್ಲಿ ಘೋಷಣೆ ಮಾಡಿರುವುದರಿಂದ ಮೃಗಾಲಯದ ಪ್ರವೇಶ ದ್ವಾರದಲ್ಲಿ ಖಾಲಿಯಿರುವ ಕಟ್ಟಡದಲ್ಲಿ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಕೇಂದ್ರದಲ್ಲಿ ವನ್ಯಜೀವಿ ಸಂರಕ್ಷಣೆ, ಜೀವ ವೈವಿಧ್ಯತೆ, ಪರಿಸರ ಸಮತೋಲನ ಹಾಗೂ ಪ್ರಕೃತಿ ಸಂರಕ್ಷಣೆ ಕುರಿತು ಮಾಹಿತಿ ನೀಡಲು ಕ್ರಮ ಕೈಗೊಳ್ಳಲಾಗುವುದು. ಡಿಜಿಟಲ್ ಪ್ರದರ್ಶನಗಳು, ಚಿತ್ರಗಳು, ಮಾದರಿ ಪ್ರದರ್ಶನಗಳು ಮತ್ತು ವಿವರಣಾತ್ಮಕ ಫಲಕಗಳ ಮೂಲಕ ಪ್ರಕೃತಿ ಹಾಗೂ ವನ್ಯಜೀವಿಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ ಎಂದರು.

ವಿದ್ಯಾರ್ಥಿಗಳು ಮತ್ತು ಪ್ರವಾಸಿಗರಿಗೆ ಪರಿಸರ ಶಿಕ್ಷಣ ಕಾರ್ಯಕ್ರಮ, ಕಾರ್ಯಾಗಾರ, ಜಾಗೃತಿ ಉಪನ್ಯಾಸ, ಪ್ರಕೃತಿ ಕುರಿತ ಚಲನಚಿತ್ರ ಪ್ರದರ್ಶನ ಈ ಕೇಂದ್ರದ ಮೂಲಕ ನಡೆಸಬಹುದಾಗಿದೆ. ಇದರಿಂದ ಮೈಸೂರು ಮೃಗಾಲಯಕ್ಕೆ ಭೇಟಿ ನೀಡುವವರಿಗೆ ಮನರಂಜನೆಯೊಂದಿಗೆ ಪರಿಸರ ಹಾಗೂ ವನ್ಯಜೀವಿ ಸಂರಕ್ಷಣೆಯ ಮಹತ್ವದ ಬಗ್ಗೆ ಜ್ಞಾನವೂ ಹೆಚ್ಚುತ್ತದೆ ಎಂದು ತಿಳಿಸಿದ್ದಾರೆ.

ಹಳ್ಳಿಗಳ ಹಬ್ಬದ ಮೂಲಕ ನಮ್ಮ ಪರಂಪರೆ ಬಿಂಬಿಸಬೇಕಿದೆ

ರಮ್ಮನಹಳ್ಳಿಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅಭಿಮತ



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗ್ರಾಮಸ್ಥರ ಉದ್ದೇಶಿಸಿ ಮಾತನಾಡಿದರು.

ಮೈಸೂರು, ಮಾ.7(ವಿವಿಹೆಚ್)– ನಮ್ಮ ಮಣ್ಣಿನ ಸಂಸ್ಕೃತಿ, ಜಾನಪದ ಪರಂಪರೆಯನ್ನು ಉಳಿಸುವ ಕೆಲಸ ಹಳ್ಳಿಗಳಲ್ಲಿನ ಹಬ್ಬಗಳ ಆಚರಣೆಯಿಂದ ಆಗಬೇಕಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ಹೊರವಲಯದ ರಮ್ಮನಹಳ್ಳಿಯ ಶ್ರೀ ಲಕ್ಷ್ಮೀದೇವಿ ಹಾಗೂ ಮಾರಮ್ಮ ದೇವಿಯ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಾತಿ–ಭೇದ ಎಲ್ಲವನ್ನು ಮರೆತು ನಾವೆಲ್ಲರೂ ಒಂದು ಎನ್ನುವ ಬಹುತ್ವ ಸಾರುವ ಅಂಶವೇ ಹಬ್ಬ. ಮೂರು ಗ್ರಾಮಗಳು ಅರ್ಥಗರ್ಭಿತವಾಗಿ ಹಬ್ಬ ಆಚರಿಸುವ ಸಲುವಾಗಿ ಒಂದೆಡೆ ಸೇರಿರುವುದು ನಿಜಕ್ಕೂ ಪ್ರಶಂಸನೀಯ ಸಂಗತಿ. ನಮ್ಮ ಮೂಲ ಆಚರಣೆಯನ್ನು ಉಳಿಸಿ, ಬೆಳೆಸುವ ಕಾರ್ಯಕ್ರಮಗಳಿಗೆ ಮತ್ತಷ್ಟು ಉತ್ತೇಜನ ನೀಡಬೇಕಾಗಿದೆ ಎಂದರು.

ಕಳೆದ ಬಾರಿ ಈ ಹಬ್ಬಕ್ಕೆ ಜಿ.ಟಿ.ದೇವೇಗೌಡರೊಟ್ಟಿಗೆ ಬಂದಿದ್ದೆ. ಈ ಬಾರಿ ಜಿ.ಡಿ.ಹರೀಶ್ ಗೌಡರ ಜೊತೆ ಬಂದಿದ್ದೇನೆ. ಇವರನ್ನು ನಿಮ್ಮ ಮನೆ ಮಗನಂತೆ ಸತ್ಕರಿಸಿ, ಬೆಂಬಲ ನೀಡಿ ಎಂದು ಮನವಿ ಮಾಡಿದರು.

ಯುವ ಪೀಳಿಗೆ ಇತ್ತೀಚೆಗಿನ ದಿನಗಳಲ್ಲಿ ಆಚಾರ–ವಿಚಾರಗಳಿಂದ ದೂರ ಉಳಿಯುತ್ತಿದ್ದಾರೆ. ಆದರೆ, ರಮ್ಮನ ಹಳ್ಳಿಯ ಈ ಜಾತ್ರಾ ಮಹೋತ್ಸವದ ಕಾರುಬಾರು ಬಹುಪಾಲು ಯುವಕರದ್ದೇ ಆಗಿರುವುದು ಮೆಚ್ಚುಗೆಯ ಸಂಗತಿ. ಇದರೊಂದಿಗೆ ಗ್ರಾಮದ ಅಭಿವೃದ್ಧಿಗೆ ಯುವ ಶಕ್ತಿ ಮುಂದಾಗಬೇಕು ಎಂದು ಆಶಿಸಿದರು.

ಸಮುದಾಯ ಭವನ ಪೂರ್ಣಗೊಳಿಸಲಾಗುವುದು: ಗ್ರಾಮದಲ್ಲಿ ಯುಜಿಡಿ ಸಮಸ್ಯೆ ಇದೆ. ಸಮುದಾಯ ಭವನ ಅಪೂರ್ಣವಾಗಿದೆ. ಈ ಎರಡನ್ನೂ ಸರಿಪಡಿಸಲು ಸಿಎಸ್‌ಆರ್ ಫಂಡ್‌ನಿಂದ ತ್ವರಿತಗತಿಯಲ್ಲಿ ಹಣ ಬಿಡುಗಡೆ ಮಾಡಿ, ಕಾಮಗಾರಿಗಳನ್ನ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಸೌಂದರ್ಯ ಸಾಧನೆ ಗ್ರಾಮಕ್ಕೆ ಸ್ಫೂರ್ತಿ: ರಮ್ಮನಹಳ್ಳಿ ಗ್ರಾಮದ ಸೌಂದರ್ಯ ಸಿವಿಲ್ ಜಡ್ಜ್ ಆಗಿ ಆಯ್ಕೆಯಾಗುವ ಮೂಲಕ ಇಡೀ ಗ್ರಾಮಕ್ಕೆ ರಾಜ್ಯಮಟ್ಟದಲ್ಲಿ ಕೀರ್ತಿ ತಂದುಕೊಟ್ಟಿದ್ದಾರೆ. ಅವರ ಸಾಧನೆ ಗ್ರಾಮದ ಉಳಿದ ಹೆಣ್ಣು ಮಕ್ಕಳಿಗೆ ಪ್ರೇರಣೆಯಾಗಬೇಕು. ಈಕೆಯಂತೆ ಸಾಕಷ್ಟು ಮಂದಿ ವಿವಿಧ ಇಲಾಖೆಗಳಲ್ಲಿ ಕೆಲಸ ಗಿಟ್ಟಿಸಿಕೊಂಡು ಜನರ ಸೇವೆ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಮಾಜಿ ಸಚಿವ ಸಾರಾ ಮಹೇಶ್, ಶಾಸಕ ಜಿ.ಡಿ.ಹರೀಶ್ ಗೌಡ, ಎಂಎಲ್‌ಸಿ ಮಂಜೇಗೌಡ, ಮಾಜಿ ಶಾಸಕ ಅಶ್ವಿನ್ ಕುಮಾರ್, ಬಿಜೆಪಿ ಮುಖಂಡ ಕವೀಶ್ ಗೌಡ, ಮಾಜಿ ಕಾರ್ಪೋರೇಟರ್ ಶೋಭಾ ಮೋಹನ್, ಜಿಪಂ ಮಾಜಿ ಸದಸ್ಯ ದಿನೇಶ್, ಸಾತಗಳ್ಳಿ ಜಯಣ್ಣ, ಜೋಗಿ ಸಿದ್ದಯ್ಯ, ಹೆಚ್.ಸಿ.ಕುಮಾರ ಸ್ವಾಮಿ, ಕಾಂಗ್ರೆಸ್ ಮುಖಂಡ ಕೆ.ಎಸ್.ಸಣ್ಣಸ್ವಾಮಿ, ಮಂಜು, ಭಾಸ್ಕರ್, ಬಸವರಾಜು, ವೆಂಕಟಯ್ಯ, ಅಂಡಯ್ಯ, ಆಶಾರಾಣಿ ಶಿವು, ರಾಜಶೇಖರ್, ರಮೇಶ್, ಗೋಪಾಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ರಮ್ಮನಹಳ್ಳಿ ಜಾತ್ರಾ ಮಹೋತ್ಸವದ ವಿಶೇಷ

ಎತ್ತ ನೋಡಿದರು ಕೈಯ್ಯಲ್ಲಿ ಕೋಲು ಹಿಡಿದು, ಯುವಕರ ದಂಡು ತಂಡೋಪ–ತಂಡವಾಗಿ ಸಾಲುಗಟ್ಟಿ ಕುಣಿಯುವುದು, ಮಾರಮ್ಮನಿಗೆ ಜೈಕಾರ ಹಾಕುತ್ತ ತಮಟೆ ಸದ್ದಿಗೆ ಹೆಜ್ಜೆ ಹಾಕುವುದು. ದೇವಾಲಯದ ಸುತ್ತ ಗಂಟೆಗಟ್ಟಲೇ ಕುಣಿಯುತ್ತ ದೇವಿಯ ಹರಕೆ ತೀರಿಸುವುದು. ಇದು ರಮ್ಮನ ಹಳ್ಳಿ ಜಾತ್ರಾ ಮಹೋತ್ಸವದ ವಿಶೇಷ.

15 ದಿನಗಳ ವಿಜೃಂಭಣೆಯ ಜಾತ್ರೆ ರಮ್ಮನ ಹಳ್ಳಿ, ಹಂಚ್ಯಾ, ಸಾತಗಳ್ಳಿ ಗ್ರಾಮಗಳು ಒಟ್ಟಾಗಿ ಗ್ರಾಮ ದೇವತೆ ಮಾರಮ್ಮನ ಜಾತ್ರೆ ಆಚರಿಸುತ್ತಾರೆ. ಪ್ರತಿ ಊರಿಗೂ ನಗಾರಿ, ಮೇಳಗಳೊಂದಿಗೆ ತೆರಳಿ ಸಂಭ್ರಮಿಸುತ್ತಾರೆ.

ತಲ–ತಲಾಂತರಗಳಿಂದ ಬಂದಿರುವ ಆಚರಣೆಯಂತೆ ಹಬ್ಬದ ದಿನ ರಮ್ಮನ ಹಳ್ಳಿಯಲ್ಲಿ ಈ ಮೂರು ಊರಿನ ಜನರು ಒಟ್ಟಾಗಿ ಸೇರಿ ಮಾರಿ ಕುಣಿತ(ಜಾನಪದ ನೃತ್ಯ) ಕುಣಿಯುತ್ತಾರೆ. ಇದರಲ್ಲಿ ವಿಶೇಷ ಈ ನೃತ್ಯದಲ್ಲಿ ಹೆಂಗಸರಿಗೆ ಅವಕಾಶವಿಲ್ಲ. ಆದರೆ, ಗಂಡಸರು ಹೆಣ್ಣಿನ ವೇಷ ಧರಿಸಿ ನೃತ್ಯ ಮಾಡುತ್ತಾರೆ. ಇದು ಈ ಹಬ್ಬದ ವೈಶಿಷ್ಟ್ಯ ಹಾಗೂ ಪ್ರಮುಖ ಆಕರ್ಷಣೆಗಳಲ್ಲೊಂದಾಗಿದೆ. ಮಧ್ಯಾಹ್ನದ ವೇಳೆಗೆ ಆರಂಭವಾದ ಮಾರಿಕುಣಿತ ಹೊತ್ತು ಮುಳುಗುವ ವೇಳೆಗೆ ಸಮಾಪ್ತಿಯಾಯಿತು. ವಿವಿಧ ವೇಷ ಧರಿಸಿ ಕುಣಿದ ಪುರುಷರು ತಮ್ಮ ವೇಷಗಳನ್ನು ಕಳಚಿ ಹಬ್ಬಕ್ಕೆ ನಾಂದಿ ಹಾಡುತ್ತಾರೆ.

ಆಕರ್ಷಕ ವೇಷ–ಭೂಷಣಗಳು: ಇತ್ತ ಮಾರಿ ಕುಣಿತ ಕುಣಿಯಲು ಯುವಕರು, ಗಂಡಸರು ವಿವಿಧ ವೇಷ ಭೂಷಣಗಳೊಂದಿಗೆ ರಂಜಿಸಿದರು. ತಾಯಿ ಚಾಮುಂಡೇಶ್ವರಿ, ಮಹಿಷಾಸುರ, ಭೂವರಾಹ ಸ್ವಾಮಿ, ದುರ್ಯೋಧನ, ಹನುಮಂತ, ಜಾಂಬವಂತ, ಖಾಕಿ ತೊಟ್ಟ ಪೊಲೀಸ್, ಬಾಲ ಗಣಪ, ಬಾಲ ಮಹದೇಶ್ವರ, ಮಾಡರ್ನ್ ಕಪಲ್ಸ್, ವೆಸ್ಟರ್ನ್ ಶೈಲಿಯ ಉಡುಗೆಗಳನ್ನು ತೊಟ್ಟು, ಕೈಯ್ಯಲ್ಲಿ ಬಾರು ಕೋಲು, ಬಹುತೇಕ ಮಂದಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿದು ಹಬ್ಬಕ್ಕೆ ಮತ್ತಷ್ಟು ರಂಗು ಚೆಲ್ಲಿದರು. ಮತ್ತೆ ಕೆಲವರು ಚೂಡಿದಾರ್, ನೈಟಿ, ಬುರ್ಖಾ ತೊಟ್ಟು ಕುಣಿಯುವ ಮೂಲಕ ಮನರಂಜನೆ ನೀಡಿದರು.

ಹಾಡಿಗಳ ಮಹಿಳೆಯರಿಗೆ ಬಾಳೆ ದಿಂಡಿನಿಂದ ಪರಿಸರ ಸ್ನೇಹಿ ಪದಾರ್ಥ ತಯಾರಿಕಾ ತರಬೇತಿ



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರದ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ)ದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಒಂದು ವಾರಗಳ ಬಾಳೆ ದಿಂಡಿನ ಮೌಲ್ಯವರ್ಧನ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡ ಬುಡಕಟ್ಟು ಸಮುದಾಯದ ಮಹಿಳೆಯರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

> ಬಂಡೀಪುರ ಕಾಡಂಚಿನ ಹಾಡಿ ಹಾಗೂ ಗ್ರಾಮಗಳಲ್ಲಿರುವ ಬುಡಕಟ್ಟು ಸಮುದಾಯ ಮಹಿಳೆಯರಿಗೆ ಬಾಳೆ ದಿಂಡಿನ ನಾರಿನಿಂದ ತಯಾರಿಸುವ ಕರಕುಶಲ ವಸ್ತುಗಳ ತಯಾರಿಕೆ ತರಬೇತಿ ನೀಡಲಾಗಿದೆ. ಸ್ವಯಂ ಪ್ರೇರಣೆಯಿಂದ ವಿವಿಧ ಹಾಡಿಗಳ 25ಕ್ಕೂ ಹೆಚ್ಚು ಮಹಿಳೆಯರು ತರಬೇತಿ ಪಡೆದುಕೊಂಡಿದ್ದಾರೆ. ಗುಂಡ್ಲುಪೇಟೆ ಭಾಗದಲ್ಲಿ ಬಾಳೆ ಬೆಳೆ ಹೆಚ್ಚಾಗಿ ಬೆಳೆಯುತ್ತಿದ್ದು, ಗೊನೆ ಕಟಾವು ನಂತರ ದಿಂಡು ನಿರುಪಯುಕ್ತವಾಗುತ್ತಿದೆ. ಈ ನಿಟ್ಟಿನಲ್ಲಿ ದಿಂಡಿನ ನಾರಿನಿಂದ ವಿವಿಧ ಬಗೆಯ ಕರಕುಶಲ ವಸ್ತು ಹಾಗೂ ದಿನ ಬಳಕೆ ವಸ್ತುಗಳನ್ನು ತಯಾರಿಸಬಹುದಾಗಿದೆ. ಶೀಘ್ರದಲ್ಲಿಯೇ ಬಾಳೆ ದಿಂಡಿನ ನಾರಿನಿಂದ ವಿವಿಧ ವಸ್ತು ತಯಾರಿಕೆಗೆ ಬೇಕಾದ ಯಂತ್ರೋಪಕರಣಗಳೊಂದಿಗೆ ಘಟಕವೊಂದನ್ನು ಸ್ಥಾಪಿಸಲಾಗುತ್ತದೆ.
>
> – ಎಸ್.ಪ್ರಭಾಕರನ್, ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಮೈಸೂರು, ಮಾ.7(ಎಂಟಿವೈ)– ಕಾಡಂಚಿನ ಹಾಡಿಗಳ ಮಹಿಳೆಯರಿಗೆ ಕರಕುಶಲ ತರಬೇತಿ ನೀಡಿ ಆರ್ಥಿಕವಾಗಿ ಸದೃಢವಾಗಿಸುವ ನಿಟ್ಟಿನಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ 25ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಬಾಳೆ ದಿಂಡಿನಿಂದ ವಿವಿಧ ವಸ್ತು ತಯಾರಿಕಾ ಕಲೆಯನ್ನು ಕರಗತ ಮಾಡಿಕೊಂಡರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರದ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ)ದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಒಂದು ವಾರ ಬಾಳೆ ದಿಂಡಿನ ಮೌಲ್ಯವರ್ಧನ ತರಬೇತಿ ಕಾರ್ಯಾಗಾರದಲ್ಲಿ ಬಂಡೀಪುರ ಕಾಡಂಚಿನ ಮೇಲುಕಾಮನಹಳ್ಳಿ, ಮಗುವಿನಹಳ್ಳಿ, ಲಕ್ಕೀಪುರ ಮತ್ತು ಹಗ್ಗದಹಳ್ಳಿ ಹಾಡಿಗಳಿಂದ 25ಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡು, ಬಾಳೆ ದಿಂಡು ಮತ್ತು ದಿಂಡಿನ ನಾರುಗಳಿಂದ ಬುಟ್ಟಿ, ಮ್ಯಾಟ್, ಪೆನ್ ಸ್ಟ್ಯಾಂಡ್, ಕಾಫಿ ಮಗ್ ಸೇರಿದಂತೆ ದೈನಂದಿನ ಬಳಕೆಗೆ ಉಪಯೋಗವಾಗುವ ವಿವಿಧ ವಸ್ತುಗಳನ್ನು ತಯಾರಿಸುವುದನ್ನು ಕಲಿತು, ಪ್ರಮಾಣ ಪತ್ರ ಪಡೆದುಕೊಂಡರು.

ಪರಿಸರ ಸಂರಕ್ಷಣೆ ಹಿತದೃಷ್ಟಿಯಿಂದ ಪ್ಲಾಸ್ಟಿಕ್ ನಿರ್ಮೂಲನೆ ಮಾಡುವುದು. ಪ್ಲಾಸ್ಟಿಕ್ ಬಳಕೆಯ ಬದಲಿಗೆ ಬಾಳೆ ದಿಂಡಿನಿಂದ ತಯಾರಿಸಿದ ಪರಿಸರ ಸ್ನೇಹಿ ವಸ್ತುಗಳನ್ನು ಬಳಸುವ ಮಹತ್ವವನ್ನು ಮಹಿಳೆಯರಿಗೆ ತಿಳಿಸಲಾಯಿತು.

ಕೆವಿಕೆ ಚಾಮರಾಜನಗರದ ಹಿರಿಯ ವಿಜ್ಞಾನಿ ಡಾ. ಎನ್.ಟಿ.ನರೇಶ್, ಬಾಳೆ ದಿಂಡಿನ ಉತ್ಪನ್ನಗಳ ಪ್ರಯೋಜನಗಳನ್ನು ವಿವರಿಸಿದರಲ್ಲದೆ, ನೈಸರ್ಗಿಕ ವಸ್ತುಗಳ ಬೇಡಿಕೆ ದಿನನಿತ್ಯ ಹೆಚ್ಚುತ್ತಿದೆ. ಇದು ಬೆಳವಣಿಗೆಗೆ ಶಿಫಾರಸು ಮಾಡಲಾದ ವ್ಯವಹಾರವಾಗಿದೆ ಎಂದರು.

ಈ ಸಂದರ್ಭದಲ್ಲಿ ಆಕೃತಿ ಇಕೋ ಫ್ರೆಂಡ್ಲಿ ಎಂಟರ್‌ಪ್ರೈಸಸ್ ಸಂಸ್ಥೆಯ ಸಂಸ್ಥಾಪಕರಾದ ವರ್ಷ, ಕೆವಿಕೆ ಚಾಮರಾಜನಗರದ ವಿಜ್ಞಾನಿ ಡಾ. ಚಂದ್ರಶೇಖರ್, ಜಿ.ಬಿ.ವಿಶ್ವನಾಥ್, ಜಿ.ಎಸ್.ಬೆಟ್ಟ ವಲಯದ ಆರ್‌ಎಫ್‌ಓ ಮಲ್ಲೇಶ್, ವಲಯ ಅರಣ್ಯ ಅಧಿಕಾರಿ, ಜಿಎಸ್ ಬೆಟ್ಟ ಮತ್ತು ಬಂಡೀಪುರದ ಅರಣ್ಯ ಇಲಾಖೆ ಅಧಿಕಾರಿಗಳು ಹಾಜರಿದ್ದರು.





ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.


ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು– 570005.

ಸಂಖ್ಯೆ:ಮೈಅಪ್ರಾ:ನಯೋ:ಶಾ:ಭೂಉ:ಬ:ಸಯೋ–1:222:2025–26 ದಿನಾಂಕ: 7/3/2026

ಸಾರ್ವಜನಿಕ ಪ್ರಕಟಣೆ

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮದ ಸ.ನಂ.264ರ 03ಎಕರೆ 05ಗುಂಟೆ ಪೈಕಿ 00–27.08ಗುಂಟೆ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡುವಂತೆ ಕೋರಿ ಮಾದಮ್ಮ, ಚನ್ನಮ್ಮ, ಸಾಕಮ್ಮ ಹಾಗೂ ಸಿದ್ದಮ್ಮ ರವರುಗಳ ಪರವಾಗಿ ಶ್ರೀಮತಿ ಎಂ.ಭಾಗ್ಯ ರವರು ಇವರು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮದ ಸ.ನಂ.264ರ 03ಎಕರೆ 05ಗುಂಟೆ ಪೈಕಿ 00–27.08ಗುಂಟೆ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ ಹಾಗೂ ನಿಗಧಿತ ಅವಧಿ ಮುಕ್ತಾಯಗೊಂಡ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ನಗರ ಯೋಜಕ ಸದಸ್ಯರು
ಮೈಸೂರು ಅಭಿವೃದ್ಧಿ ಪ್ರಾಧಿಕಾರ,
ಮೈಸೂರು.





ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಡಿಕೇರಿ, ಕೊಡಗು ಜಿಲ್ಲೆ.
ಇಮೇಲ್: eerdwsd.kdg@gmail.com

ಸಂಖ್ಯೆ:ಕಾ.ಇಂ/ಗ್ರಾ.ಕು.ನೀ.&ನೈ.ವಿ–ಮಡಿಕೇರಿ/ಟೆಂಡರ್ 25–26/ ದಿ: 07/03/2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕೊಡಗು ಜಿಲ್ಲೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕೊಡಗು ಜಿಲ್ಲಾ ಪ್ರಯೋಗಾಲಯ ಹಾಗೂ ತಾಲ್ಲೂಕು ಪ್ರಯೋಗಾಲಯಗಕ್ಕೆ ಈ ಕೆಳಕಂಡ ವಿವರವನ್ನು ನೋಂದಾಯಿಸಲ್ಪಟ್ಟಿರುವ ಅರ್ಹ ಸಂಸ್ಥೆ/ಸರಬರಾಜುದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಕ್ಯೂ) ನಿಯಮಾವಳಿಯಂತೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರಿಂದ ಟೆಂಡರ್ ವಿವರಗಳನ್ನು KPPP ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು KPP ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

ಕ್ರ. ಸಂ.	ಕಾಮಗಾರಿ ವಿವರ	ಅಂದಾಜು (ರೂ.ಲಕ್ಷಗಳಲ್ಲಿ)
1	Supply of 119 nos of FTK Kit containing reagents for water quality parameters and 12,893 nos of H2S Vials to conduct presence/absence test of total coliform and e-coli for Kodagu District	9.79
2	Supply of UV-Vis Spectrophotometer for Taluk Laboratory Ponnampete in Kodagu District	4.165

ಟೆಂಡರ್ ಸಲ್ಲಿಸುವ ವಿವರ

1. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 16 03 2026 ಅಪರಾಹ್ನ 05.00 ಗಂಟೆ
2. ಟೆಂಡರ್ ತೆರೆಯುವ ದಿನಾಂಕ: 17–03–2026ರ ಅಪರಾಹ್ನ 5.00 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನದಂದು

ಸೂಚನೆ: ಇತರೇ ಷರತ್ತು ಹಾಗೂ ಕಾಮಗಾರಿಗಳ ವಿವರಗಳನ್ನು ಈ ಕಛೇರಿಯಿಂದ ಅಥವಾ ವೆಬ್ ಸೈಟ್ www.kppp.gov.in ನಲ್ಲಿ ಪಡೆಯಬಹುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ & ನೈ ವಿಭಾಗ–ಮಡಿಕೇರಿ

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ ಡಾ. ಚಂದನ್ ಬಿನ್ ತಿಮ್ಮೇಗೌಡ ರವರ ಇರಾದೆಯ ಮೇರೆಗೆ ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವು ದೇನೆಂದರೆ, ಆದಾಗಿ ಪರಿಶಿಷ್ಟದಲ್ಲಿ ನಮೂದಿಸಿರುವ ಸರ್ವೆ ನಂ 57/4 ರಲ್ಲಿ 12 ಗುಂಟೆ ಪೈಕಿ 0.5ಗುಂಟೆ, ಸರ್ವೆ ನಂ 57/5 ರಲ್ಲಿ 0.03ಗುಂಟೆ ಪೈಕಿ 0.01 ಗುಂಟೆ, ಸರ್ವೆ ನಂ 59/1 ರಲ್ಲಿ 0.14 ಗುಂಟೆ, ಸರ್ವೆ ನಂ 61 ರಲ್ಲಿ 1 ಎಕರೆ 0.16 ಗುಂಟೆ, ಸರ್ವೆ ನಂ 63 ರಲ್ಲಿ 1 ಎಕರೆ 0.22 ಗುಂಟೆ ಹಾಗೂ ಸರ್ವೆ ನಂ 64/1 ರಲ್ಲಿ 0.15 ಗುಂಟೆ ಜಮೀನಿನ ಒಟ್ಟು ವಿಸ್ತೀರ್ಣ 3 ಎಕರೆ 0.33 ಗುಂಟೆಗಳು ನಂದಿಗುಂದ ಗ್ರಾಮ, ಚಿಕ್ಕಯ್ಯನಛತ್ರ ಹೋಬಳಿ, ನಂಜನಗೂಡು ತಾಲ್ಲೂಕು ಸದರಿ ಜಮೀನುಗಳು ಮಾಲೀಕರಾದ ಶ್ರೀಮತಿ ಸವಿತ ಹಾಗೂ ಶ್ರೀ ಆನಂದಕುಮಾರ್ ಕುಟುಂಬದವರಿಂದ ಖರೀದಿಸಲು ಇಚ್ಛೆಯುಳ್ಳವರಾಗಿರುತ್ತಾರೆ. ಸದರಿ ಸ್ವತ್ತುಗಳು ಶ್ರೀ ಎನ್.ಬಿ ಮಾದಪ್ಪನವರಿಗೆ ಸೇರಿದ್ದಾಗಿದ್ದ ಅವರಿಗೆ ಇಬ್ಬರು ಪತ್ನಿಯರು ಹಾಗೂ ಮಕ್ಕಳುಗಳಿಲ್ಲದ ಕಾರಣ ತನ್ನ ತಂಗಿ ಮಗನಾದ ಶ್ರೀ ರಾಜೇಂದ್ರನಿಗೆ ದಿನಾಂಕ 15–09–1964 ರಂದು ನೋಂದಾಯಿತ ಮರಣ ಶಾಸನ ಪ್ರಕಾರ ನೀಡಿರುತ್ತಾರೆ. ಸದರಿ ನೋಂದಾಯಿತ ಮರಣ ಶಾಸನ ಪತ್ರವು ಅಲಭ್ಯವಾಗಿರುವುದರಿಂದ ದೃಢೀಕೃತ ನಕಲನ್ನು ಪಡೆದಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳಲ್ಲಿ ಅಥವಾ ದಿನಾಂಕ 15–09–1964 ರಂದು ನೋಂದಾಯಿತ ಮರಣ ಶಾಸನ ಪತ್ರದ ಬಗ್ಗೆ ಸಾರ್ವಜನಿಕರಿಗಾಲೀ, ಸದರಿ ಸ್ವತ್ತುಗಳಲ್ಲಿ ಹಿತಾಸಕ್ತಿವುಳ್ಳವರಾಗಲೀ, ಅನುವಂಶಿಕರಾಗಲೀ, ಅಧಿಕಾರವುಳ್ಳವರಾಗಲೀ, ಯಾರಾದರೂ ಇದ್ದ ಪಕ್ಷದಲ್ಲಿ ತಮ್ಮ ಹಕ್ಕುಗಳ ಬಗ್ಗೆ ಸೂಕ್ತ ದಾಖಲಾತಿಗಳೊಡನೆ ಈ ಕೆಳಕಂಡ ವಕೀಲರ ಬಳಿ ಈ ಸಾರ್ವಜನಿಕ ಪ್ರಕಟಣೆಯಾದ 7 ದಿನಗೊಳಗೆ ಸಲ್ಲಿಸತಕ್ಕದ್ದು, ಇಲ್ಲವಾದ್ದಲ್ಲಿ ಸದರಿ ಷೆಡ್ಯೂಲ್ ಸ್ವತ್ತುಗಳಿಗೆ ಯಾರಿಂದಲೂ ತಕರಾರು ಇಲ್ಲವೆಂದು ಪರಿಗಣಿಸಿ ಮುಂದಿನ ಪ್ರಕ್ರಿಯೆಗಳಿಗೆ ಅನುವು ಇದೆಯೆಂದು ಭಾವಿಸಿ ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ನಂದಿಗುಂದ ಗ್ರಾಮ, ಚಿಕ್ಕಯ್ಯನಛತ್ರ ಹೋಬಳಿ, ಸರ್ವೆ ನಂ 57/4 ರಲ್ಲಿ 12 ಗುಂಟೆ ಪೈಕಿ 0.5ಗುಂಟೆ, ಸರ್ವೆ ನಂ 57/5 ರಲ್ಲಿ 0.03ಗುಂಟೆ ಪೈಕಿ 0.01 ಗುಂಟೆ, ಸರ್ವೆ ನಂ 59/1 ರಲ್ಲಿ 0.14 ಗುಂಟೆ, ಸರ್ವೆ ನಂ 61 ರಲ್ಲಿ 1 ಎಕರೆ 0.16 ಗುಂಟೆ, ಸರ್ವೆ ನಂ 63 ರಲ್ಲಿ 1 ಎಕರೆ 0.22 ಗುಂಟೆ ಹಾಗೂ ಸರ್ವೆ ನಂ 64/1 ರಲ್ಲಿ 0.15 ಗುಂಟೆ ಜಮೀನಿನ ಒಟ್ಟು ವಿಸ್ತೀರ್ಣ 3 ಎಕರೆ 0.33 ಗುಂಟೆಗಳು.

ಸಹಿ/–J.K. Sheshagiri Rao, B.Sc., LL.B., ವಕೀಲರು, Roll No. KAR 1504/99, # 57, /7A, No. 4, 1st Floor, New Sayyaji Rao Road, Fort Mohalla, Mysore.
Mob: 99800 72770

ದಿನಾಂಕ : 07–03–2026,, ಸ್ಥಳ : ಮೈಸೂರು.

PM SHRI KENDRIYA VIDYALAYA, CHAMARAJANAGAR

Madapura Post, Chamarajanagar - 571313 (Karnataka)
Email: kvchamarajanagaramedia@gmail.com
Tel. No.: 08226-297179

WALK-IN-INTERVIEW

Walk-In-Interviews for the following posts will be conducted on 23-03-2026 to prepare panel of Part time/ Contractual Teachers for the Academic Year 2026-27 on contractual basis.

S.No	Name of the post	Date of interview
1	Primary Teachers (PRT) , PRT Music	23/03/2026
2	Trained Graduate Teacher(TGT) – English, Hindi, Sanskrit, Mathematics, Science , Social Studies, Physical and Health education, Art, Work Education, Librarian	
3	Post Graduate Teacher(PGT) – English, Hindi, Mathematics, Physics, Chemistry, Biology, Computer Science.	
4	Balavatika Teachers, Sports Coach, Staff Nurse, Computer Instructor, Special Educator, Kannada Teacher, Art & Craft Teacher, Atal Lab Instructor, Counsellor	

Note: Reporting Time : 08:30 AM

1. Eligible candidates may attend interview with complete Bio-Data, Original documents and one set of self-attested qualification certificates.
2. For further information regarding eligibility, remuneration, Bio-Data form etc log on to Vidyalaya website https://chamrajnagar.kvs.ac.in
3. Candidates from the selected panel will be appointed on need basis.
4. The posts are purely contractual and other terms & conditions applicable as per KVS rules.
5. No TA/ DA will be admissible for interview.

Sd/-
Principal

PUBLIC NOTICE

Notice is hereby given of the intention of my client to purchase the under mentioned "Schedule Property" from its present owners—(1) Sri. MADHU SHIVAKUMAR.H.P., S/o Sri. Puttaraju.H.S., Residing at Villa No.525, Valmark CityVille, Off: Bannerghatta Road, 1st Phase, Tejaswini Nagar, Hulimavu, Bengaluru City; (2) Sri. KUMAR SHANMUGAM JAYAPALAN, S/o Sri. Jayapalan.S., Residing at House No.890/1, 4th Division, H.B. Colony, Gundlupete Town, Chamarajanagar District. Any person/s claiming any right, title or interest, whatscever, over the schedule property are hereby called upon to lodge their objections, if any, to the proposed transaction, in writing together with documentary proof, with the undersigned at his office situated at #37/A-3, UPSTAIRS, UDAYA RAVI ROAD, KUVEMPU NAGAR, MYSURU-23 within SEVEN DAYS from the date of this publication, as otherwise my client will proceed to complete the said Sale Transaction with bonafides, without any reference or regard to any such purported claims, rights or interests, whatscever, which shall be deemed to have been waived for all intents and purposes.

SCHEDULE: All that piece and parcel of the VACANT RESIDENTIAL SITE bearing Property No.5315043386 ::OLD No.622 measuring East to West(28.2+27.1)/2 Metres and North to South: (15+14.3)/2 Metres [Total extent: 405.07 Square Metres] within the limits of Ward No. 33, BOGADHI PATTANA PANCHAYATH, CHAMARAJA MOHALLA, MYSURU, Carved out of residentially converted Land bearing Survey Numbers 17/1, 17/2, 5/1, 15, 16/1, 18/1, 18/2, 19, 20, 21, 22/2, 22/3, 22/4, 23/1, 23/2, 23/3, 24, 26/1, and 3 of Kergalli Village, Jayapura Hobli, Mysuru Taluk, and the layout known as 'Judicial Layout' (ನ್ಯಾಯಾಂಗ ಬಡಾವಣೆ), formed and developed by 'Nyayanga Ilaakhaa Naukarara Gruha Nirmana Sahakara Sangha Ltd.' [ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ(ನಿ.)] and bounded on the:- East by: 9.00 Metre Road, West by: Boundary, North by : Site bearing No.623; South by: Boundary;

SD/- K. BALAKRISHNA BHAT
ADVOCATE. [Mob:8861268888]
Place: Mysuru Date:06/03/2026